ಸಂಪುಟ: 38 ಸಂಚಿಕೆ: 12 | ಫೆಬ್ರುವರಿ 2026
ಬೆಲೆ: ರೂ. 7/–

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಒಳ ಪುಟಗಳಲ್ಲಿ ..........

'ಜನತಾ ಸಂಸತ್'ನ ಘೋಷವಾಕ್ಯ----------3
ದೇಶದಲ್ಲಿ ಉನ್ನತ ಶಿಕ್ಷಣದ ಉಸಿರುಗಟ್ಟಿಸಲಾಗುತ್ತಿದೆ–4
ಎಐಎಂಎಸ್ಎಸ್ : ರಾಜ್ಯಮಟ್ಟದ ಸಮಾವೇಶ------5
ಪ್ರಧಾನ ಮಂತ್ರಿ ಧನ–ಧಾನ್ಯ ಕೃಷಿ ಯೋಜನೆ – ನಯವಂಚಕ ಪ್ರಸ್ತಾವನೆ-----------------7
'ಕೇರಳ ತೀವ್ರ ಬಡತನ ಮುಕ್ತ ರಾಜ್ಯ' – ಸಿಪಿಐ (ಎಂ) ಸರ್ಕಾರದ ಸುಳ್ಳು ಘೋಷಣೆ------8
ದೊಡ್ಡ ರಾಷ್ಟ್ರಗಳ ಲಾಭ, ಬಡವರ ಬಲಿ– ಹವಾಮಾನ ಸಮ್ಮೇಳನ ಎಂಬ ಪ್ರಹಸನ--------9
ಅಮೆರಿಕಾದ ಹಿತಾಸಕ್ತಿ ಮಾತ್ರವೇ ಸತ್ಯ, ಬೇರೆಲ್ಲ ಮಿಥ್ಯ-------------------------11

## ವ್ಲಾದಿಮಿರ್ ಲೆನಿನ್ ಚಿರಾಯುವಾಗಲಿ!



**ಜನವರಿ 21, 2026 - ಸ್ಮರಣ ದಿನ**

"...ಬಂಡವಾಳವಾದವು ಪ್ರಪಂಚದ ಸಂಪತ್ತನ್ನು ಒಂದೊಂದೇ ದೇಶಗಳಲ್ಲಿ ಕೇಂದ್ರೀಕರಿಸಿದೆ ಮತ್ತು ಭೂಮಂಡಲವನ್ನು ಕಡೆಯ ತುಂಡಿನವರೆಗೂ ಪಾಲು ಮಾಡಿದೆ. ಇನ್ನಷ್ಟು ಪಾಲು ಮಾಡುವುದೆಂದರೆ, ಮತ್ತಷ್ಟು ಒತ್ತುವರಿ ಮಾಡುವುದೆಂದರೆ ಬೇರೆಯವರಿಂದ ಕಸಿದುಕೊಂಡೇ ಮಾಡಬೇಕು. ಒಂದು ದೇಶದ ನಷ್ಟ, ಇನ್ನೊಂದರ ಲಾಭ. ಈ ವಿಷಯವನ್ನು ಬಲಪ್ರಯೋಗದಿಂದ ಮಾತ್ರ ನಿರ್ಧರಿಸಬಹುದು. ಆದ್ದರಿಂದ ಜಾಗತಿಕ ರಣಹದ್ದುಗಳ ಯುದ್ಧವು ಅನಿವಾರ್ಯವಾಗಿದೆ."

# ಅರಾವಳಿ ಬೆಟ್ಟದ ಸಾಲು ಇದೀಗ ಲಾಭಕೋರರ ಪಾಲು

**ಇತ್ತೀಚಿಗೆ ಸುಪ್ರೀಂ ಕೋರ್ಟ್ (ನವೆಂಬರ್ 29, 2025) ಅರಾವಳಿ ಬೆಟ್ಟದ ಸಾಲಿನ ಕುರಿತು ನೀಡಿದ ತೀರ್ಪು ವಾಯುವ್ಯ ಭಾರತದ ರಾಜ್ಯಗಳಲ್ಲಿ ಬಿರುಗಾಳಿ ಎಬ್ಬಿಸಿತು. ಆ ತೀರ್ಪಿನ ಪ್ರಕಾರ, ಆ ಪ್ರದೇಶದ ನೆಲಮಟ್ಟದಿಂದ 100 ಮೀಟರ್ ಎತ್ತರಕ್ಕೆ ಇರುವ ಬೆಟ್ಟದ ಸಾಲುಗಳನ್ನು ಮಾತ್ರ ಅರಾವಳಿ ಬೆಟ್ಟದ ಸಾಲು ಎಂದು ಪರಿಗಣಿಸಲಾಗುವುದು. ಅದರರ್ಥ, 100 ಮೀಟರ್ ಎತ್ತರಕ್ಕಿಂತ ಕಡಿಮೆಯಿರುವ ಬೆಟ್ಟದ ಪ್ರದೇಶದಲ್ಲಿ ಗಣಿಗಾರಿಕೆ, ಕ್ವಾರಿ, ಅರಣ್ಯನಾಶಗಳಿಗೆ ಮುಕ್ತ ಪರವಾನಿಗೆ ನೀಡಿದಂತೆ.**

ತೀರ್ಪು ಬಹಿರಂಗವಾದ ಕೂಡಲೇ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಕೇಂದ್ರ ಸಮಿತಿಯು ತನ್ನ ಹೇಳಿಕೆಯಲ್ಲಿ, ಈ ತೀರ್ಪಿನಿಂದ "ಅಂತರ್ಜಲದ ಹರಿವಿಗೆ ಅಡ್ಡಿಯಾಗುತ್ತದೆ, ಅದು ನೈಸರ್ಗಿಕ ಮರುಪೂರಣವನ್ನು ನಾಶಮಾಡುತ್ತದೆ ಮತ್ತು ಅಂತಿಮವಾಗಿ ಕೆರೆ, ನದಿಗಳಿಗೆ ನೀರು ಹಣಿಸುವ ಭೂಗತವಾಗಿರುವ ಜಲಪದರವನ್ನು ಖಾಲಿ ಮಾಡಿ ಭೀಕರ ನೀರಿನ ಕೊರತೆಯನ್ನು ಸೃಷ್ಟಿಸುತ್ತದೆ." ಎಂದು ತಿಳಿಸುತ್ತಾ, ಜನಜೀವನ, ಜಾನುವಾರು, ಪ್ರಕೃತಿ, ಹವಾಮಾನ, ಇವುಗಳ ಮೇಲೆ ಆಗುವ ಭಯಾನಕ ಪರಿಣಾಮಗಳನ್ನು ಮತ್ತು "ಇಂತಹ ವ್ಯವಸ್ಥಿತ ವಿನಾಶದ ಹಿಂದಿರುವ ಬಂಡವಾಳಶಾಹಿ ಪಿತೂರಿ"ಯನ್ನು ಬಯಲಿಗೆಳೆಯಿತು. ತೀರ್ಪು ಬಂದಾಕ್ಷಣವೇ, ಅರಾವಳಿ ಪ್ರದೇಶದ ಜನತೆ ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದರು. ಪರಿಸರ ವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರು ಪ್ರತಿಭಟಿಸಿದರು. ಅಖಿಲ ಭಾರತ ರೈತ–ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ಹೋರಾಟಗಳನ್ನು ಸಂಘಟಿಸಿತು. ಸುಪ್ರೀಂ ಕೋರ್ಟ್ ರಜಾಪೀಠವು ಡಿಸೆಂಬರ್ 29, 2025 ರಂದು ಸ್ವಯಂಪ್ರೇರಿತ ಪ್ರಕರಣವನ್ನು ದಾಖಲು ಮಾಡಿಕೊಂಡು ಸುಪ್ರೀಂ ಕೋರ್ಟಿನ ಹಿಂದಿನ ತೀರ್ಪನ್ನು ತಡೆಹಿಡಿಯಿತು. ಕೇಂದ್ರ ಬಿಜೆಪಿ ಸರ್ಕಾರ ತರಾತುರಿಯಲ್ಲಿ ಅರಾವಳಿ ಪ್ರದೇಶದಲ್ಲಿ ಯಾವುದೇ ಹೊಸ ಗಣಿಗಾರಿಕೆಗೆ ಲೈಸೆನ್ಸ್ ನೀಡುವುದನ್ನು ತಕ್ಷಣದಿಂದಲೇ ಸಂಪೂರ್ಣವಾಗಿ ತಡೆ ಹಿಡಿಯಲು ಆದೇಶ ಹೊರಡಿಸಿತು. ಕೇವಲ ವಾಯುವ್ಯ ಭಾಗದಲ್ಲಷ್ಟೇ ಅಲ್ಲದೆ, ಭಾರತದಾದ್ಯಂತ ಜನರಲ್ಲಿ ಮತ್ತು ವಿಜ್ಞಾನಿಗಳು, ಪರಿಸರವಾದಿಗಳು, ರೈತ ಸಂಘಟನೆಗಳಲ್ಲಿ ಇಷ್ಟೊಂದು ಆತಂಕ, ಭೀತಿಯನ್ನು ಸೃಷ್ಟಿ ಮಾಡಲು ಕಾರಣವೇನು ಎನ್ನುವುದನ್ನು ತಿಳಿಯಲು ಅರಾವಳಿ ಪರ್ವತ ಪ್ರದೇಶದ ಇತಿಹಾಸ, ಅದರ ಪ್ರಾಮುಖ್ಯತೆ, ಅದರ ನಾಶದಿಂದಾಗುವ ವಿನಾಶಕಾರಿ, ವ್ಯಾಪಕ ಪರಿಣಾಮಗಳನ್ನು ತಿಳಿದುಕೊಳ್ಳಬೇಕು. ಜೊತೆಗೆ ಇದರಿಂದ ಲಾಭಗಳಿಸುವವರು ಯಾರು ಮತ್ತು ಅದಕ್ಕೆ ಬೆಲೆ ತೆರುವವರು ಯಾರು ಎನ್ನುವುದನ್ನು ಅರಿತುಕೊಳ್ಳಬೇಕು.




### ಅರಾವಳಿಯ ಚಾರಿತ್ರಿಕ ಪ್ರಾಮುಖ್ಯತೆ

ಅರಾವಳಿ ಬೆಟ್ಟದ ಸಾಲಿಗೆ ಲಕ್ಷಾಂತರ ವರ್ಷಗಳ ಇತಿಹಾಸವಿದೆ. ಪ್ರಪಂಚದ ಈ ಅತ್ಯಂತ ಪುರಾತನ ಬೆಟ್ಟದ ಸಾಲು ಗುಜರಾತ್, ರಾಜಸ್ಥಾನ, ಹರಿಯಾಣ ಹಾಗೂ ದೆಹಲಿ ರಾಜ್ಯಗಳ ಸುತ್ತ ಸುಮಾರು 670–830 ಕಿ.ಮೀ.ವರೆಗೆ ಹರಡಿಕೊಂಡಿದೆ. ಪರಿಸರವನ್ನು ಹಾಳುಮಾಡದೆ ಕಾಪಾಡಿಕೊಳ್ಳುವ ತತ್ವದ ಆಧಾರದ ಮೇಲೆ ಜನರು ಶತಮಾನಗಳಿಂದ ಅದರ ಸುತ್ತಲೂ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಸುಮಾರು ಹದಿನೈದನೇ ಶತಮಾನದ ಹಿಂದೆಯೇ, ಗುರು ಜಂಭೋಜಿ ಎಂದೇ ಹೆಸರುವಾಸಿಯಾದ ಮತ್ತು ಪರ್ಮರ್ ರಜಪೂತ್ ರೈತ ಸಮುದಾಯದಲ್ಲಿ ಹುಟ್ಟಿದ ಗುರು ಜಂಬೇಶ್ವರ, ಅಲ್ಲಿನ ಮರ, ವನ್ಯಜೀವಿ ಮತ್ತು ನೀರಿನ ಸಂರಕ್ಷಣೆಯ ಸಾಮಾಜಿಕ ಜವಾಬ್ದಾರಿಯನ್ನು ಕೇಂದ್ರವಾಗಿಟ್ಟುಕೊಂಡು ನೈತಿಕ ಚೌಕಟ್ಟನ್ನು ಬೋಧಿಸಿದ್ದಾರೆ. ಮೇಘವಾಲ್ ಸಮುದಾಯದ ಸ್ಥಾಪಕ ಋಷಿಗಳಾದ ಮೇಘರಿಷಿಗಳು ಶ್ರಮ, ಜಮೀನು ಮತ್ತು ಸಂಯಮಗಳ ತತ್ವವನ್ನು ಬೋಧಿಸಿದರು; ಅದು ಕರಕುಶಲತೆಗೆ ಮತ್ತು ವ್ಯವಸಾಯಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಸುಸ್ಥಿರತೆಯ ದೃಷ್ಟಿಯಿಂದ ಬಳಸುವ ಕಟ್ಟುಪಾಡಿಗೆ ಒಳಪಡಿಸುತ್ತದೆ. ಈ ಪರಂಪರೆಯನ್ನು ಮೇಘವಾಲ, ಜಿಂಗಾರ, ರೆಗಾರ ಮತ್ತು ಇನ್ನಿತರ ದಲಿತ ಸಮುದಾಯಗಳಲ್ಲಿ ಇಂದಿಗೂ ಕಾಣಬಹುದು. ಈ ಪರಂಪರೆ ಉಳಿಸಿಕೊಳ್ಳಲು ರಾಜಸ್ಥಾನದ ಮಾರ್ವಾರ್ ಪ್ರದೇಶದ ಅಮೃತಾ ದೇವಿ ಬಿಸ್ನೋಯ್, ಆಕೆಯ ಮೂವರು ಮಕ್ಕಳು ಮತ್ತು ಆಕೆಯ ಸಮುದಾಯದ ನೂರಾರು ಜನರು ಜೀವ ಕೊಟ್ಟರು. ಜೋಧ್‌ಪುರ್ ಮಹಾರಾಜ ತನ್ನ ಅರಮನೆಗೆಂದು ಖೆಜ್ರಿ ಮರಗಳನ್ನು ಕಡಿದು ತರಲು ಆಜ್ಞಾಪಿಸಿದಾಗ,

2ನೇ ಪುಟಕ್ಕೆ


ನೇತಾಜಿ ಸುಭಾಷ್‌ಚಂದ್ರ ಬೋಸ್ ಜನ್ಮದಿನ: 23 ಜನವರಿ 2026

# ಅವರ ಕೃತಿ 'ಕ್ರಾಸ್‌ರೋಡ್ಸ್'ನಿಂದ ಕೆಲವು ಉಲ್ಲೇಖಗಳು

## ಸ್ವಾತಂತ್ರ್ಯ ಮತ್ತು ಸಮಾಜವಾದಕ್ಕಾಗಿ ನಡೆವ ಹೋರಾಟಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ

**...1917ರಲ್ಲಿ ರಷ್ಯಾದ ಝಾರ್ ಚಕ್ರಾಧಿಪತ್ಯವು ಕೆಳಗುರುಳಿತು; ಆದರೆ ಅದರ ಅವಶೇಷಗಳಿಂದ ಯೂನಿಯನ್ ಆಫ್ ಸೋವಿಯತ್ ಸೋಷಲಿಸ್ಟ್ ರಿಪಬ್ಲಿಕ್ ತಲೆಯೆತ್ತಿತು. ರಷ್ಯಾದ ಇತಿಹಾಸದಿಂದ ಪಾಠ ಕಲಿಯಲು ಬ್ರಿಟಿಷರಿಗೆ ಇನ್ನೂ ಸಮಯವಿದೆ. ಆದರೆ ಅವರು ಕಲಿಯುವರೆ?...**

...ಬ್ರಿಟಿಷ್ ಸಾಮ್ರಾಜ್ಯಕ್ಕೆ ದಿಟ್ಟ ಹೆಜ್ಜೆಯಿಟ್ಟು ತನ್ನನ್ನು ಒಂದು ಸ್ವತಂತ್ರ ರಾಷ್ಟ್ರಗಳ ಒಕ್ಕೂಟವನ್ನಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವೇ? ಇದಕ್ಕೆ ಉತ್ತರವನ್ನು ಬ್ರಿಟಿಷ್ ಜನರೇ ನೀಡಬೇಕು. ಒಂದು ವಿಷಯವಂತೂ ಬಹಳ ಸ್ಪಷ್ಟವಾಗಿದೆ. ಬ್ರಿಟಿಷ್ ಜನತೆ ತಮ್ಮ ಸ್ವಂತ ನೆಲದಲ್ಲೇ ಸ್ವತಂತ್ರರಾದರೆ, ಗ್ರೇಟ್ ಬ್ರಿಟನ್ ದೇಶವು ಸಮಾಜವಾದಿ ರಾಷ್ಟ್ರವಾದರೆ ಮಾತ್ರ ಅಂತಹ ಪರಿವರ್ತನೆ ಸಾಧ್ಯ. ಗ್ರೇಟ್ ಬ್ರಿಟನ್‌ನಲ್ಲಿರುವ ಬಂಡವಾಳಶಾಹಿ ಆಳ್ವಿಕರಿಗೂ ಮತ್ತು ಹೊರದೇಶಗಳ ವಸಾಹತುಗಳಿಗೂ ಅವಿಭಾಜ್ಯ ಸಂಬಂಧವಿದೆ. ಬಹಳ ಕಾಲದ ಹಿಂದೆಯೇ ಲೆನಿನ್ ತೋರಿಸಿಕೊಟ್ಟಂತೆ, "ಹಲವು ದೇಶಗಳ ಗುಲಾಮಗಿರಿಯಿಂದ ಬ್ರಿಟನ್ ದೇಶದಲ್ಲಿ ವಿಗತಿಗೆ ಬಲ ಬಂದಿದೆ ಮತ್ತು ಪುಷ್ಟಿ ಸಿಕ್ಕಿದೆ." ಬ್ರಿಟಿಷ್ ಅರಸೊತ್ತಿಗೆಗೆ ಮತ್ತು ಬಂಡವಾಳಶಾಹಿಗಳಿಗೆ ಬದುಕಿರಲು ಮೂಲಾಧಾರವೆಂದರೆ, ಅವರಿಗೆ ಶೋಷಣೆ ಮಾಡಲು ವಸಾಹತುಗಳು ಮತ್ತು ಅದನ್ನು ಅವಲಂಬಿಸಿರುವ ಪರದೇಶಗಳು ಇರುವುದು. ವಸಾಹತು ಮತ್ತು ಅವಲಂಬಿತ ದೇಶಗಳ ವಿಮುಕ್ತಿಯು ಗ್ರೇಟ್ ಬ್ರಿಟನ್ನಿನಲ್ಲಿರುವ ಬಂಡವಾಳಶಾಹಿ ಆಳ್ವಿಕರ ಅಸ್ತಿತ್ವಕ್ಕೇ ಹೊಡೆತ ನೀಡುತ್ತದೆ ಮತ್ತು ಆ ದೇಶದಲ್ಲಿ ಸಮಾಜವಾದಿ ರಾಜ್ಯದ ಸ್ಥಾಪನೆಗೆ ಎಡೆ ಮಾಡಿಕೊಡುತ್ತದೆ. ಆದ್ದರಿಂದ, ಇದೊಂದು ವಿಷಯವಂತೂ ಸ್ಪಷ್ಟವಾಗಬೇಕು; ವಸಾಹತುಗಳನ್ನು ಕೊನೆಗೊಳಿಸದೆ ಗ್ರೇಟ್ ಬ್ರಿಟನ್ನಿನಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ತರುವುದು ಅಸಾಧ್ಯ ಮತ್ತು ಭಾರತದ ಮತ್ತು ಬೇರೆ ಗುಲಾಮಗಿರಿಗೊಳಗಾದ ರಾಷ್ಟ್ರಗಳ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ನಾವು, ಪ್ರಾಸಂಗಿಕವಾಗಿ ಬ್ರಿಟಿಷ್ ಜನತೆಯ ಆರ್ಥಿಕ ವಿಮುಕ್ತಿಗಾಗಿಯೂ ಹೋರಾಡುತ್ತಿದ್ದೇವೆ.




**(1938ರ ಫೆಬ್ರುವರಿಯಲ್ಲಿ, ಹರಿಪುರದಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ 51ನೇ ಅಧಿವೇಶನದಲ್ಲಿ ಮಾಡಿದ ಭಾಷಣದಿಂದ ಆಯ್ದ ಭಾಗ.)**

### ಭಾರತದ ಸ್ವಾತಂತ್ರ್ಯ ಮತ್ತು ಸಮಾಜವಾದ

...ಸಾಮ್ರಾಜ್ಯವಾದದ ಯುಗದ ಅಂತ್ಯ ಸಮೀಪಿಸುತ್ತಿದೆ ಮತ್ತು ಸ್ವಾತಂತ್ರ್ಯ, ಪ್ರಜಾತಂತ್ರ ಮತ್ತು ಸಮಾಜವಾದದ ಯುಗದ ಉದಯಕಾಲ ಹತ್ತಿರವಾಗುತ್ತಿದೆ. ಹಾಗಾಗಿ ಇಂದಿನ ಭಾರತವು

2ನೇ ಪುಟಕ್ಕೆ

## ಅರಾವಳಿ ಬೆಟ್ಟದ ಸಾಲು

1ನೇ ಪುಟದಿಂದ

ಅದನ್ನು ಉಳಿಸಿಕೊಳ್ಳಲು ಮರಗಳನ್ನು ಅಪ್ಪಿಕೊಂಡು ಸೈನಿಕರ ಕತ್ತಿಯೇಟಿಗೆ ಬಲಿಯಾದರು.

ಈ ಬೆಟ್ಟದ ಸಾಲು ಥಾರ್ ಮರುಭೂಮಿಯ ವಿಸ್ತರಣೆಯನ್ನು ನಿಲ್ಲಿಸಿದೆ. ಅಲ್ಲಿಂದ ದೆಹಲಿ ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಬೀಸುವ ಬಿಸಿಗಾಳಿಯನ್ನು ತಡೆಹಿಡಿದಿದೆ. ಹಾಗೆಯೇ ಭಿಲ್, ಮೀನಾ ಮತ್ತು ಗಿರಿಸಿಯಾಗಳಂತಹ ಆದಿವಾಸಿ ಗುಂಪುಗಳಿಗೆ ಅರಾವಳಿಯು ಕೇವಲ ಪರಿಸರ ಸಂಪತ್ತಷ್ಟೇ ಅಲ್ಲ, ಅದು ಅವರು ಜೀವಿಸುವ, ಕೆಲಸ ಮಾಡುವ, ಪೂಜಿಸುವ ಮತ್ತು ನೆನಪುಗಳ ಜಾಗ. ಅದರ ಕಾಡು ಮತ್ತು ಬೆಟ್ಟಗುಡ್ಡಗಳು ಜೀವನೋಪಾಯದ ವ್ಯವಸಾಯ, ದನ ಮೇಯಿಸುವುದು, ಕಾಡು ಉತ್ಪನ್ನಗಳ ಸಂಗ್ರಹ ಮತ್ತು ಕಾಲಮಾನದ ವಲಸೆಗಳಿಗೆ ಒತ್ತಾಸೆಯಾಗಿ ನಿಂತಿವೆ. ಅಲ್ಲಿ ಪವಿತ್ರ ತೋಪುಗಳು, ಸಮಾಧಿಗಳು, ಕಾಡುದೇವರುಗಳು ಮತ್ತು ಕಾಲಕಾಲಕ್ಕೆ ಬರುವ ಆಚರಣೆಗಳು ಜನರಿಗೆ ಅರಾವಳಿಯೊಂದಿಗೆ ಭಾವನಾತ್ಮಕ ಸಂಬಂಧವನ್ನು ಬೆಸೆದಿವೆ. ಆದ್ದರಿಂದ, ಸುಪ್ರೀಂ ಕೋರ್ಟಿನ ತೀರ್ಪನ್ನು ಪಾಲಿಸಿದರೆ ಪರಿಸರವಷ್ಟೇ ಅಲ್ಲ ತಲೆಮಾರುಗಳ ಸಂಬಂಧ, ಸಂಸ್ಕೃತಿ, ಪರಂಪರೆಗಳೆಲ್ಲವೂ ನಾಶವಾಗುತ್ತವೆ.

### ಅರಾವಳಿ ಮರುವ್ಯಾಖ್ಯಾನ ಮತ್ತು ಅದರಿಂದ ಯಾರಿಗೆ ಲಾಭ

ಸುಪ್ರೀಂ ಕೋರ್ಟಿನ ಕೇಂದ್ರೀಯ ಅಧಿಕಾರದತ್ತ ಸಮಿತಿಯು (ಸಿಇಸಿ) ಅರಾವಳಿ ಬೆಟ್ಟದ ಸಾಲಿನ ಸಮಗ್ರ ಪರಿಸರ ಪರಿಣಾಮಗಳ ಬಗ್ಗೆ ವಿಶ್ಲೇಷಣಾತ್ಮಕ ವರದಿ ನೀಡಲು 2024, ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ ಶಿಫಾರಸ್ಸು ಮಾಡಿತು. ಅದು ಭಾರತದ ಅರಣ್ಯ ಸಮೀಕ್ಷೆಯ (ಎಫ್‌ಎಸ್‌ಐ) ಇಳಿಜಾರು ಆಧಾರಿತ ವ್ಯಾಖ್ಯಾನಕ್ಕೆ ವಿರುದ್ಧವಾಗಿರಬಾರದೆಂದು ಸಲಹೆ ನೀಡಿತು. ಆದರೆ ಸಿಇಸಿಯ ವಿರೋಧವನ್ನು ಮತ್ತು ಎಫ್‌ಎಸ್‌ಐ ಎಚ್ಚರಿಕೆಗಳನ್ನು ಗಣನೆಗೆ ತೆಗೆದುಕೊಳ್ಳದ ಸುಪ್ರೀಂ ಕೋರ್ಟ್ ಆರಂಭದಲ್ಲಿ ಸರ್ಕಾರದ ಸಂಕುಚಿತ ವ್ಯಾಖ್ಯಾನವನ್ನು (ನವೆಂಬರ್, 2025 ರಂದು) ಒಪ್ಪಿಕೊಂಡಿತು. ಅದು ಎಲ್ಲಾ ವಿರೋಧಗಳಿಗೆ, ಹೋರಾಟಗಳಿಗೆ ನಾಂದಿ ಹಾಡಿತು. ವಾಸ್ತವವೆಂದರೆ, 2018 ರಂದು ಬಂದ ಸಿಇಸಿ ವರದಿಯು ಕಳೆದ 50 ವರ್ಷಗಳಲ್ಲಿ ರಾಜಸ್ಥಾನದ ಅರಾವಳಿ ಬೆಟ್ಟದ ಸಾಲಿನ 31 ಗುಡ್ಡಗಳು ಅಕ್ರಮ ಕ್ವಾರಿಯಿಂದ ಕಣ್ಮರೆಯಾಗಿರುವ ದುರಂತವನ್ನು ಬಹಿರಂಗಪಡಿಸಿದೆ. ಬಹಳ ಹಿಂದಿನಿಂದಲೂ ಬಂಡವಾಳ ಹಾಗೂ ರಾಜಕೀಯ ಪೋಷಣೆ ಹೊಂದಿರುವ ಅದಾನಿ, ವೇದಾಂತ ಸಮೂಹ, ಜೆಎಸ್‌ಇ ಸ್ಟೀಲ್ಸ್, ಮುಂತಾದ ಪ್ರಬಲ ವ್ಯಾಪಾರಿ ಸಮೂಹಗಳಿಗೆ ಗಣಿಗಾರಿಕೆ ಮಾಡಲು ಅವಕಾಶ ಸಿಕ್ಕಿದೆ. ಮಧ್ಯಪ್ರದೇಶದ ಸಿಂಗ್ರೌಲಿ ಆದಿವಾಸಿ ಜಿಲ್ಲೆಯಲ್ಲಿ ಅದಾನಿ ಸಮೂಹದ ಕಲ್ಲಿದ್ದಲು ಗಣಿಗಾಗಿ 6 ಲಕ್ಷ ಮರಗಳು ಧರೆಗುರುಳಿದವು. ನಿಕೊಬಾರ್ ದ್ವೀಪಗಳಲ್ಲಿ ಸರಕು ವರ್ಗಾವಣೆ ಬಂದರು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು 450 ಎಂವಿಎ ಸಾಮರ್ಥ್ಯದ ಅನಿಲ ಹಾಗೂ ಸೋಲಾರ್ ಆಧಾರಿತ ವಿದ್ಯುಚ್ಛಕ್ತಿ ಕಾರ್ಖಾನೆಯನ್ನು ನಿರ್ಮಿಸಲು 9.64 ಲಕ್ಷ ಮರಗಳನ್ನು ತುಂಡರಿಸಿದರು. ಛತ್ತೀಸ್‌ಗಢದಲ್ಲಿ ಅದಾನಿಯ ಗಣಿಗಾರಿಕೆಗೆ ಸಾಕಷ್ಟು ಕಾಡು ಪ್ರದೇಶವನ್ನು ಸಮ ಮಾಡಲಾಯಿತು ಮತ್ತು 3.68 ಲಕ್ಷ ಮರಗಳನ್ನು ಕಡಿಯಲಾಯಿತು.

ಅರಾವಳಿ ಬೆಟ್ಟದ ಸಾಲಿನಲ್ಲಿ, ಅದರಲ್ಲೂ ರಾಜಾಸ್ಥಾನ ಹಾಗೂ ಹರಿಯಾಣದಲ್ಲಿ ಗಮನಾರ್ಹ ಭಾಗದ ಭೂಮಿಯನ್ನು ಅಗೆದಿರುವುದಕ್ಕೆ 'ಮರಳು ಮಾಫಿಯಾ' ಮತ್ತು ಇನ್ನಿತರ ಅಕ್ರಮ ಗುಂಪುಗಳ ಅಕ್ರಮ ಗಣಿಗಾರಿಕೆ ಕಾರಣವೆಂದು ಹೇಳುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಹಲವಾರು ಕೋರ್ಟು ಪ್ರಕರಣಗಳಿವೆ. ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆ, ಜಲಾಶಯ, ವಿದ್ಯುಚ್ಛಕ್ತಿ ಕಾರ್ಖಾನೆ ನಿರ್ಮಾಣ ಮತ್ತು ನಗರೀಕರಣಗಳಿಂದಾಗಿ ಹಿಮಾಲಯದ ಪರ್ವತ ರಾಜ್ಯಗಳಲ್ಲಿ ಮೇಘಸ್ಫೋಟ, ನೆಲಕುಸಿತ, ಪ್ರವಾಹ, ಭೂಕಂಪಗಳು ಸಂಭವಿಸಿವೆ. ಇದರಿಂದ ಪ್ರಕೃತಿ, ಜನ ಜೀವನ, ಜಾನುವಾರು ಮತ್ತು ಕೃಷಿ ಭಯಂಕರ ನಷ್ಟಗಳನ್ನು ಅನುಭವಿಸಿವೆ. ಜಮೀನು, ಕಾಡು ಮತ್ತು ಜನರು ಹಾಗೂ ಮುಂದಿನ ಪೀಳಿಗೆ ಇದಕ್ಕೆ ಬೆಲೆ ತೆರುತ್ತದೆ.

### ಭುಗಿಲೆದ್ದ ಪ್ರತಿರೋಧ

ಮ್ಯಾಗ್ಸಸೆ ಪ್ರಶಸ್ತಿ ವಿಜೇತ ಮತ್ತು ಭಾರತದ ನೀರಾಳು ಎಂದೇ ಪ್ರಸಿದ್ಧರಾದ ಶ್ರೀ ರಾಜೇಂದ್ರ ಸಿಂಗ್‌ರವರು ಸುಪ್ರೀಂ ಕೋರ್ಟಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ: "ದೆಹಲಿ ಮತ್ತು ಹರಿಯಾಣ ಗಡಿಭಾಗದಲ್ಲಿ 100 ಮೀಟರ್ ಎತ್ತರದ ಬೆಟ್ಟಗಳಿಲ್ಲ. ಆದ್ದರಿಂದ, ಈ ತೀರ್ಪು ಅರಾವಳಿಯ ರಕ್ಷಿತ ಪ್ರದೇಶವನ್ನು ಹೊಸ ಗಣಿಗಾರಿಕೆ ಹಾಗೂ ಅಭಿವೃದ್ಧಿಗೆ ತೆರೆದಿಟ್ಟು ದೆಹಲಿಗೆ ಥಾರ್ ಮರುಭೂಮಿಯನ್ನು ತರಲು ಸಹಾಯ ಮಾಡುತ್ತದೆ ಎಂದು ನನ್ನ ನಂಬಿಕೆ. ಅರಾವಳಿಯೆನ್ನುವುದು ಒಂದು ವಸ್ತುವಲ್ಲ; ಅದು ಮೃದು ಇಳಿಜಾರುಗಳ ಪರಿಸರ ವ್ಯವಸ್ಥೆ.....ನಾವು ಹುಟ್ಟುವ ಮೊದಲೇ ಅರಾವಳಿಯು ತನ್ನ ಸುತ್ತಮುತ್ತ ಹಿಮಾಲಯ, ಸಮುದ್ರ ಹಾಗೂ ಸಹ್ಯಾದ್ರಿ ಸಾಲುಗಳ ರಚನೆಯಲ್ಲಿ ಪಾತ್ರ ವಹಿಸಿದೆ. ಹವಾಮಾನ ಬದಲಾವಣೆಯು ಜನರಿಗೆ ಧಕ್ಕೆ ತರುತ್ತಿರುವಾಗ, ಉಸಿರಾಡುವುದಕ್ಕೇ ಕಷ್ಟವಾಗುವಷ್ಟು ಗಾಳಿ ಕಲುಷಿತವಾಗಿರುವಾಗ, ನಾವು ಅರಾವಳಿಗೆ ಯಾವುದೇ ರೀತಿಯ ಅಪಾಯವುಂಟು ಮಾಡುವುದನ್ನು ಕಲ್ಪಿಸಿಕೊಳ್ಳಲಾದರೂ ಸಾಧ್ಯವೇ?" ಅವರು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದಾಗ, "ಜಸ್ಟೀಸ್ ಎಂ.ಎನ್.ವೆಂಕಟಾಚಲಯ್ಯ ನೇತೃತ್ವದ ಪೀಠವು ಸರ್ರೈಕ್ಸಾದಲ್ಲಿ 478 ಗಣಿಗಳನ್ನು ಮುಚ್ಚಲು ಆದೇಶ ನೀಡಿತು ಮತ್ತು ಅಲ್ಲಿಂದಾಚೆಗೆ ಅರಾವಳಿಯಲ್ಲೆಲ್ಲಾ ಗಣಿಗಾರಿಕೆ ನಿಂತಿತು" ಎನ್ನುವ ವಿಷಯವನ್ನೂ ಉಲ್ಲೇಖಿಸಿದರು.

ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ನಾಗರಿಕ ಸೇವೆಯಿಂದ ನಿವೃತ್ತರಾದವರನ್ನು ಒಳಗೊಂಡಿರುವ ಸಾಂವಿಧಾನಿಕ ನಿರ್ವಹಣಾ ತಂಡ (ಸಿಸಿಜಿ), ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತಾ ಹೇಳಿತು: "ಸುಪ್ರೀಂ ಕೋರ್ಟಿನ ಇತ್ತೀಚಿನ ಮೂರು ತೀರ್ಪುಗಳು, ನಮ್ಮ ಪ್ರಾಕೃತಿಕ ಪ್ರಪಂಚವನ್ನು ಮತ್ತು ಭಾರತೀಯರ ಬದುಕುವ ಹಕ್ಕನ್ನು ಕಾಪಾಡಿಕೊಳ್ಳಲು ಇರುವ ಕಟ್ಟಕಡೆಯ ಭದ್ರಕೋಟೆಯು ಶ್ರೀಮಂತರ ಹಾಗೂ ಪ್ರಬಲ ಪಟ್ಟಭದ್ರ ಹಿತಾಸಕ್ತಿಯ ಆಕ್ರಮಣದ ಮುಂದೆ ಕುಸಿಯುತ್ತಿದೆ ಎನ್ನುವ ಭಯವನ್ನು ಹುಟ್ಟಿಸಿವೆ..... ಗಣಿಗಾರಿಕೆಗೆ ಸಹಾಯ ಮಾಡಲು ತನ್ನ ಸಂರಕ್ಷಣೆಯ ಕಟ್ಟುಪಾಡುಗಳನ್ನು ಸಡಿಲಗೊಳಿಸಿ, ಅರಾವಳಿಯ ವಿನಾಶಕಾರಿ ಹಾಗೂ ವಿಧ್ವಂಸಕ ಪ್ರಸ್ತಾವನೆಯನ್ನು ಸ್ವತಃ ಪರಿಸರ, ಅರಣ್ಯ ಹಾಗೂ ಹವಾಮಾನ ವೈಪರೀತ್ಯದ ಸಚಿವಾಲಯದ ಸಮಿತಿಯೇ ನೀಡಿರುವುದನ್ನು ನೋಡಿದರೆ ದಿಗ್ಭ್ರಾಂತಿಯಾಗುತ್ತದೆ. ಇದೇ ಸಮಿತಿಗೆ ಸುಸ್ಥಿರ ಗಣಿಗಾರಿಕೆಯ ಯೋಜನೆಯನ್ನು ತಯಾರು ಮಾಡುವ ಆದೇಶವನ್ನು ಕೋರ್ಟ್ ನೀಡಿರುವುದರ ಪರಿಣಾಮವನ್ನು ಊಹಿಸಬಹುದು; ಕೋರ್ಟಿನ ಒಪ್ಪಿಗೆಯ ಮುದ್ರೆಯೊಂದಿಗೆ, ದಾವೆಗಳಿಗೆ ಅಂತಿಮ ತೆರೆಯೆಳೆಯುತ್ತಾ ಬೃಹತ್ ಪ್ರಮಾಣದಲ್ಲಿ ಗಣಿಗಾರಿಕೆಯನ್ನು ಕೈಗೆತ್ತಿಕೊಳ್ಳಲಾಗುವುದು."

'ಅರಾವಳಿಗಾಗಿ ಜನತೆ' ಎನ್ನುವ ಬ್ಯಾನರ್ ಅಡಿಯಲ್ಲಿ ನಾಗರಿಕರ ಕಾಳಜಿಯ ಧ್ವನಿಯೆತ್ತುವ ಚಳುವಳಿಯಾದ 'ಅರಾವಳಿ ವಿರಾಸತ್ ಜನ ಅಭಿಯಾನ'ದ ಸದಸ್ಯರು ಸುಪ್ರೀಂ ಕೋರ್ಟಿನ ಮಧ್ಯಂತರ ಆದೇಶವನ್ನು ಸ್ವಾಗತಿಸುತ್ತಲೇ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ: "ಅರಾವಳಿಯ ಬಗ್ಗೆ ವ್ಯಾಖ್ಯಾನದ ಅಗತ್ಯವಿಲ್ಲ. ಅದಕ್ಕೆ ಅಗತ್ಯವಿರುವುದು ರಕ್ಷಣೆ ಮತ್ತು ಪೋಷಣೆ."

ಪ್ರಜಾತಂತ್ರದ ಹಕ್ಕುಗಳು ಹಾಗೂ ಧರ್ಮನಿರಪೇಕ್ಷತೆಯ ಸಂರಕ್ಷಣಾ ಕೇಂದ್ರವು (ಸಿಪಿಡಿಆರ್‌ಎಸ್) ಭಾರತದ ಮಾನ್ಯ ಚೀಫ್ ಜಸ್ಟೀಸ್ ಅವರಿಗೆ ಬರೆದ ಪತ್ರದಲ್ಲಿ ಆಗ್ರಹಿಸಿರುವುದೇನೆಂದರೆ, 1) ಗಣಿಗಾರಿಕೆ ಮತ್ತು ವಾಣಿಜ್ಯ ಕಟ್ಟಡಗಳಿಗೆ ಅವಕಾಶ ನೀಡುವ ಅರಾವಳಿಯ ಯಾವುದೇ ಅವೈಜ್ಞಾನಿಕ ಮರುವರ್ಗೀಕರಣವನ್ನು ಅಸಿಂಧುಗೊಳಿಸಬೇಕು. 2) ಇತ್ತೀಚೆಗೆ ನಡೆದ ಬುಡಕಟ್ಟು ಜನರಿರುವ ಕಾಡುಗಳಲ್ಲಿ ಕಾರ್ಪೊರೆಟ್ ಭೂಸ್ವಾಧೀನದಿಂದ ಆಗಿರುವ ವಿನಾಶವನ್ನು ಮೌಲ್ಯಮಾಪನ ಮಾಡಲು ಸ್ವತಂತ್ರ ತಜ್ಞರ ಸಮಿತಿಯನ್ನು ರಚಿಸಬೇಕು. 3) ಸಂಚಿತ ಪರಿಣಾಮ ಸಮೀಕ್ಷೆಯಾಗುವವರೆಗೂ ಪರಿಸರ ಸೂಕ್ಷ್ಮತೆಗಳಿರುವ ವಲಯಗಳಲ್ಲಿ ಎಲ್ಲಾ ಯೋಜನೆಗಳನ್ನು ತಕ್ಷಣವೇ ನಿಷೇಧಿಸಬೇಕು.

### ಲಾಭದಾಹಿ ವಿನಾಶಕ್ಕೆ ಬೇಕು ತಡೆ

ಆದ್ದರಿಂದ, 100 ಮೀಟರ್ ಎತ್ತರದ ಮರುವ್ಯಾಖ್ಯಾನವನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳುವವರೆಗೂ ಮಧ್ಯಂತರ ತಡೆ ಆದೇಶದ ಬಗ್ಗೆ ತುಂಬಾ ಸಂತೋಷಪಡುವುದರಲ್ಲಿ ಅರ್ಥವಿಲ್ಲ. ನಾಲ್ಕು ರಾಜ್ಯಗಳೂ ಸೇರಿದಂತೆ ಇಡೀ ಅರಾವಳಿ ಪ್ರದೇಶದ ಸಂಚಿತ ಸಾಮಾಜಿಕ ಹಾಗೂ ಪರಿಸರದ ಪರಿಣಾಮದ ಬಗ್ಗೆ ಸ್ವತಂತ್ರ ಅಧ್ಯಯನದ ಹಕ್ಕೊತ್ತಾಯವನ್ನು ಈಡೇರಿಸಬೇಕು. ಅಭಿವೃದ್ಧಿಗಾಗಿ ಗಣಿಗಾರಿಕೆ, ಕ್ವಾರಿ, ಕಾಡು ನಾಶ ಅವಶ್ಯಕ; ಪ್ರಕೃತಿಯ ಮೇಲೆ ಮಾನವನ ಪ್ರಾಬಲ್ಯ ಸ್ಥಾಪಿಸಲಾಗಿದೆ ಎಂದೆಲ್ಲಾ ಬೂರ್ಜ್ವಾ ವರ್ಗದ ಹಿತೈಷಿಗಳು ವಾದಿಸುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಲ್ಲೊಬ್ಬರಾದ ಫ್ರೆಡರಿಕ್ ಎಂಗೆಲ್ಸ್ ಸುಮಾರು 150 ವರ್ಷಗಳ ಹಿಂದೆ ಹೇಳಿದ ಮಾತುಗಳು ಇಲ್ಲಿ ಪ್ರಸ್ತುತವಾಗುತ್ತವೆ:

"...ಪ್ರಕೃತಿಯ ಮೇಲೆ ಮಾನವ ಸಾಧಿಸಿರುವ ಗೆಲುವಿನ ವಿಷಯದಲ್ಲಿ ತುಂಬಾ ಬೀಗಬೇಕಾಗಿಲ್ಲ. ಏಕೆಂದರೆ ಅಂತಹ ಗೆಲುವುಗಳು ನಮ್ಮ ಮೇಲೆ ಪ್ರತೀಕಾರ ತೀರಿಸಿಕೊಳ್ಳುತ್ತವೆ.

ಮೊದಲಿಗೆ, ನಾವು ಯಾವ ಪರಿಣಾಮಗಳಾಗಬಹುದೆಂದು ಲೆಕ್ಕ ಹಾಕಿದ್ದೆವೊ, ಅವುಗಳಲ್ಲಿ ಪ್ರತಿಯೊಂದೂ ಹಾಗೇ ಆಗಿರುವುದು ನಿಜ; ಆದರೆ, ಎರಡನೇ ಮತ್ತು ಮೂರನೇ ಹಂತಗಳಲ್ಲಿ ಅವು ಸಾಕಷ್ಟು ವಿಭಿನ್ನವೂ, ಅನಿರೀಕ್ಷಿತವೂ ಆಗಿದ್ದು, ಬಹುತೇಕವಾಗಿ ಮೊದಲನೆ ಹಂತದ ಪರಿಣಾಮಗಳನ್ನು ರದ್ದುಗೊಳಿಸುತ್ತವೆ....ನಾವು ಪ್ರಕೃತಿಗೆ ಅತೀತವಾಗಿದ್ದೇವೆ ಎನ್ನುವಂತೆ, ವಿದೇಶಿ ಜನರ ಮೇಲೆ ಆಕ್ರಮಣಕಾರನೊಬ್ಬ ಪ್ರಾಬಲ್ಯ ಸಾಧಿಸಿದಂತೆ ನಾವು ಪ್ರಕೃತಿಯ ಮೇಲೆ ಪ್ರಾಬಲ್ಯ ಸಾಧಿಸಿಲ್ಲವೆಂದು ಹೆಜ್ಜೆಹೆಜ್ಜೆಗೂ ನೆನಪಿಸಿಕೊಳ್ಳಬೇಕು....ಬದಲಿಗೆ, ರಕ್ತ–ಮಾಂಸ–ಮೆದುಳನ್ನು ಹೊಂದಿರುವ ನಾವು ಪ್ರಕೃತಿಗೇ ಸೇರಿದವರು ಮತ್ತು ಅದರ ಮಧ್ಯದಲ್ಲೇ ಜೀವಿಸುವವರು ಮತ್ತು ನಾವು ಪ್ರಕೃತಿಯ ಮೇಲೆ ಪ್ರಾಬಲ್ಯ ಸಾಧಿಸಿದ್ದೇವೆಂದರೆ, ಅದರರ್ಥ, ಅದರ ನಿಯಮಗಳನ್ನು ಅರಿತುಕೊಂಡು ಅವನ್ನು ಸರಿಯಾಗಿ ಅನ್ವಯಿಸುವುದರಲ್ಲಿ ಬೇರೆ ಜೀವಿಗಳಿಗಿಂತ ಹೆಚ್ಚು ಅನುಕೂಲ ಹೊಂದಿರುವವರು ಎಂದೇ. ಉತ್ಪಾದನೆ ಮತ್ತು ವಿತರಣೆಯ ಮೇಲೆ ಪ್ರಾಬಲ್ಯ ಹೊಂದಿರುವ ಬಂಡವಾಳಗಾರರು ತಮ್ಮ ಕ್ರಿಯೆಯಿಂದ ಸಿಗುವ ತಕ್ಷಣದ ಲಾಭದಾಯಕ ಪರಿಣಾಮಗಳ ಬಗ್ಗೆ ಮಾತ್ರ ಕಾಳಜಿ ವಹಿಸಲು ಸಾಧ್ಯ.

ನಿಜ, ಈ ಲಾಭದಾಯಕ ಪರಿಣಾಮವೂ ಕೂಡ ಹಿನ್ನೆಲೆಗೆ ಸರಿದು ಹೋಗಿ ಮಾರಾಟದಿಂದ ಮಾಡಿಕೊಳ್ಳುವ ಲಾಭ ಮಾತ್ರ ಏಕೈಕ ಉತ್ತೇಜಕವಾಗುತ್ತದೆ. ...ಮತ್ತೆ, ತಮ್ಮ ಕ್ರಿಯೆಯ ದೂರಗಾಮಿ ಪ್ರಭಾವಗಳು ಬಹುತೇಕವಾಗಿ ತದ್ವಿರುದ್ಧ ಪರಿಣಾಮ ಬೀರಿದಾಗ ಅವರು ಅಚ್ಚರಿಗೊಳಗಾಗುತ್ತಾರೆ."

## 'ಕ್ರಾಸ್‌ರೋಡ್ಸ್' ಕೃತಿಯಿಂದ ಕೆಲವು ಉಲ್ಲೇಖಗಳು

1ನೇ ಪುಟದಿಂದ

ಇತಿಹಾಸದ ಕವಲುದಾರಿಗಳಲ್ಲೊಂದರಲ್ಲಿ ನಿಂತಿದೆ. ನಾವು ಬಯಸಿದರೆ, ಪ್ರಪಂಚ ನಿರೀಕ್ಷಿಸುತ್ತಿರುವ ಪರಂಪರೆಯ ಭಾಗ ನಾವಾಗಬಹುದು.

ಹಳೆಯ ರಚನೆಯೊಂದು ತನ್ನ ಭಾರಕ್ಕೇ ಕುಸಿದುಬಿದ್ದು ಅದರ ಅವಶೇಷಗಳಿಂದ ಹೊಸದೊಂದು ಇನ್ನೂ ಬರದೆ ಇರುವುದನ್ನು ಕಂಡು ದಿಗ್ಭ್ರಮೆಗೊಳ್ಳುವ ಜನರನ್ನು ನೋಡಿ ಆಶ್ಚರ್ಯವೇನೂ ಪಡಬೇಕಾಗಿಲ್ಲ. ಆದರೆ, ಅನಿಶ್ಚಯತೆಯ ಈ ಸಮಯದಲ್ಲಿ ನಮ್ಮ ಬಗ್ಗೆ, ನಮ್ಮ ದೇಶವಾಸಿಗಳ ಬಗ್ಗೆ ಮತ್ತು ಮಾನವೀಯತೆಯ ಬಗ್ಗೆ ನಾವು ನಂಬಿಕೆಯನ್ನು ಕಳೆದುಕೊಳ್ಳುವುದು ಬೇಡ. ನಂಬಿಕೆಯನ್ನು ಕಳೆದುಕೊಳ್ಳುವುದೆಂದರೆ ಅದೊಂದು ದೊಡ್ಡ ದುರಂತವೇ ಸರಿ.

...ಈ ಹಂತದಲ್ಲಿ, ಬೇರೆ ಪ್ರದೇಶಗಳಲ್ಲಿ ಮತ್ತು ಕಾಲಗಳಲ್ಲಿ ಬಂದ ಇಂತಹುದೇ ಬಿಕ್ಕಟ್ಟಿನ ಉದಾಹರಣೆಯನ್ನು ಕೊಡುತ್ತೇನೆ. ರಷ್ಯಾದಲ್ಲಿ 1917ರಲ್ಲಿ ನವೆಂಬರ್ (ಸಮಾಜವಾದಿ, ಸಂ) ಕ್ರಾಂತಿಯು ಸ್ಫೋಟಗೊಂಡಾಗ, ಕ್ರಾಂತಿಯನ್ನು ಯಾವ ದಾರಿಯಲ್ಲಿ ಕೊಂಡೊಯ್ಯಬೇಕು ಎಂಬ ಪರಿಕಲ್ಪನೆ ಯಾರಿಗೂ ಸ್ಪಷ್ಟವಾಗಿರಲಿಲ್ಲ. ಹೆಚ್ಚಿನ ಬೊಲ್ಶೆವಿಕರು ಬೇರೆ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತಿದ್ದರು. ಎಲ್ಲಾ ಮೈತ್ರಿಗಳನ್ನು ಅಲ್ಲಗಳೆದು, "ಎಲ್ಲಾ ಅಧಿಕಾರ ಸೋವಿಯತ್‌ಗಳಿಗೆ (ಜನಸಮಿತಿಗಳಿಗೆ–ಸಂ)" ಎಂದು ಲೆನಿನ್ ಘೋಷಿಸಬೇಕಾಯಿತು. ಸಂದೇಹ ಮತ್ತು ಚಂಚಲತೆಗಳ ಆ ಕಾಲಘಟ್ಟದಲ್ಲಿ ಲೆನಿನ್ ಸರಿಸಮಯದಲ್ಲಿ ನಾಯಕತ್ವ ನೀಡದೆ ಹೋಗಿದ್ದರೆ ರಷ್ಯಾದ ಇತಿಹಾಸ ಯಾವ ತಿರುವು ತೆಗೆದುಕೊಳ್ಳುತ್ತಿತ್ತೋ ಯಾರಿಗೆ ಗೊತ್ತು? ಅಂತಿಮವಾಗಿ ಭವಿಷ್ಯದ ವಾಣಿಯಂತೆ ಸಾಬೀತಾದ ಲೆನಿನ್ ಅವರ ಅಮೋಘ ಸಮಯಪ್ರಜ್ಞೆಯು (ಅಂತಃಪ್ರಜ್ಞೆ) ಮುಂದಿನ ದಿನಗಳಲ್ಲಿ ಸ್ಪೇನ್ ಅನುಭವಿಸಿದಂತಹ ಹಾನಿ ಮತ್ತು ದುರಂತಗಳಿಂದ ರಷ್ಯಾ ದೇಶವನ್ನು ಕಾಪಾಡಿತು.

ಈಗ ನಾವು ಇದಕ್ಕೆ ತದ್ವಿರುದ್ಧವಾದ ಸಂಗತಿಯನ್ನು ತೆಗೆದುಕೊಳ್ಳೋಣ. 1922ರಲ್ಲಿ ಇಟಲಿಯು ಎಲ್ಲಾ ರೀತಿಯಿಂದಲೂ ಸಮಾಜವಾದಕ್ಕೆ ಬದಲಾಗಲು ಪಕ್ವವಾಗಿತ್ತು. ಅದಕ್ಕೆ ಬೇಕಾಗಿದ್ದು ಇಟಲಾಯಿನ್ ಲೆನಿನ್ ಮಾತ್ರ. ಆದರೆ ಆ ಗಳಿಗೆಯ ವ್ಯಕ್ತಿ ಬರಲಿಲ್ಲ; ಹಾಗಾಗಿ, ಅವಕಾಶವು ಸಮಾಜವಾದಿ ಕೈಗಳಿಂದ ಜಾರಿಹೋಯಿತು. ಅದನ್ನು ತಕ್ಷಣವೇ ಕೈಗೆತ್ತಿಕೊಂಡಿದ್ದು ಫ್ಯಾಸಿಸ್ಟ್ ನಾಯಕ ಬೆನಿಟೊ ಮುಸಲೋನಿ. ...ಆತನ ಕೈಗೆ ಅಧಿಕಾರ ಹೋದ ನಂತರ, ಇಟಲಿಯ ಇತಿಹಾಸವು ಸಂಪೂರ್ಣವಾಗಿ ವಿಭಿನ್ನ ದಾರಿಹಿಡಿಯಿತು; ಕಡೆಯಲ್ಲಿ ಇಟಲಿ ಸಮಾಜವಾದಿ ದೇಶವಾಗುವ ಬದಲು ಫ್ಯಾಸಿಸ್ಟ್ ದೇಶವಾಯಿತು. ಇಟಲಿಯ ನಾಯಕರಿಗೆ ಸಂದೇಹ ಮತ್ತು ಚಂಚಲತೆಯು ಕಾಡಿದ್ದರಿಂದ ಅವರು ವಿಫಲರಾದರು.

...ಇಂದು ನಮ್ಮ ನಾಯಕರಲ್ಲಿ ತಾಕಲಾಟವಿದೆ ಮತ್ತು ಅವರ ಚಂಚಲತೆಯು ಎಡಪಂಥೀಯರ ಒಂದು ವಿಭಾಗದ ಆತ್ಮಸ್ಥೈರ್ಯವನ್ನು ಕುಗ್ಗಿಸಿದೆ. "ಐಕ್ಯತೆ", "ರಾಷ್ಟ್ರೀಯ ರಂಗ", "ಶಿಸ್ತು" – ಇವುಗಳೆಲ್ಲ ವಾಸ್ತವಕ್ಕೆ ಸಂಬಂಧವಿಲ್ಲದ ಅಗ್ಗದ ಘೋಷಣೆಗಳಾಗಿವೆ. ಅಂತಹ ಆಕರ್ಷಕ ಘೋಷಣೆಗಳ ಮಬ್ಬು ಕವಿದು, ಅವರು ರಾಷ್ಟ್ರೀಯ ಹೋರಾಟಕ್ಕೆ ನಮ್ಮನ್ನು ಮುನ್ನಡೆಸುವ ಒಂದು ಎದೆಗಾರಿಕೆಯ ಮತ್ತು ರಾಜಿರಹಿತ ನೀತಿಯು ಘಳಿಗೆಯ ಅವಶ್ಯಕತೆ ಎಂಬುದನ್ನು ಮರೆತಂತೆ ಕಾಣುತ್ತದೆ. ಈ ಉದ್ದೇಶಕ್ಕೆ ಪೂರಕವಾಗಿ ನಮಗೆ ಶಕ್ತಿ ನೀಡುವುದನ್ನೆಲ್ಲಾ ಸ್ವಾಗತಿಸಬೇಕು; ನಮ್ಮನ್ನು ದುರ್ಬಲಗೊಳಿಸುವುದನ್ನೆಲ್ಲಾ ತ್ಯಜಿಸಬೇಕು. ನಮ್ಮನ್ನು ಬಲಪಂಥೀಯರಿಗೆ ಗಂಟುಹಾಕುವ ಐಕ್ಯತೆಯು ನಮಗೆ ವರವೇನಲ್ಲ. ಎಲ್ಲಾ ಸಂದರ್ಭಗಳಲ್ಲೂ ಮತ್ತು ಎಲ್ಲಾ ಸನ್ನಿವೇಶಗಳಲ್ಲೂ ಐಕ್ಯತೆಯಿರಬೇಕೆಂದು ಬಯಸಿದರೆ, ಆಗ ಉದಾರವಾದಿ ಫೆಡರೇಶನ್ ಜೊತೆಗೆ ಐಕ್ಯತೆ ಸ್ಥಾಪಿಸಬೇಕೆಂದು ಕಾಂಗ್ರೆಸ್‌ನ ಮನವೊಲಿಸುವುದೇ ಒಳ್ಳೆಯದು.

**(ಅಖಿಲ ಭಾರತ ರಾಜಿವಿರೋಧಿ ಸಮ್ಮೇಳನದಲ್ಲಿ ಮಾಡಿದ ಭಾಷಣದಿಂದ ಆಯ್ದ ಭಾಗ, ರಾಮ್‌ಘರ್, ಬಿಹಾರ. 19, ಮಾರ್ಚ್, 1940.)**

### ಹೋರಾಟದಲ್ಲಿ ಐಕ್ಯತೆ

...ನಾನು ಒಂದು ವಿಷಯವನ್ನು ಸೇರಿಸಲೇಬೇಕು; ಮಾರ್ಕ್ಸ್ ಮತ್ತು ಲೆನಿನ್‌ರವರ ಬರಹಗಳು ಮತ್ತು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಅಧಿಕೃತ ಹೇಳಿಕೆಗಳು ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಸಂಪೂರ್ಣ ಬೆಂಬಲವನ್ನು ಸೂಚಿಸುತ್ತವೆ ಮತ್ತು ಅದು ಪ್ರಾಪಂಚಿಕ ದೃಷ್ಟಿಕೋನದ ಒಂದು ಅವಿಭಾಜ್ಯ ಅಂಗವೆಂದು ಗುರುತಿಸುತ್ತವೆ; ಇದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ ಮತ್ತು ಅದರ ಬಗ್ಗೆ ನನಗೆ ತೃಪ್ತಿಯಿದೆ.

**(ಡೈಲಿ ವರ್ಕರ್ ಪತ್ರಿಕೆಯಲ್ಲಿ ಪ್ರಕಟವಾದದ ಆರ್.ಪಾಲ್ಮೆ ದತ್ತ ಅವರೊಂದಿಗಿನ ಸಂದರ್ಶನ, ಲಂಡನ್, 24, ಜನವರಿ, 1938.)**

**ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಸಂಘಟಿತ**

# 'ಜನತಾ ಸಂಸತ್'ನ ಘೋಷವಾಕ್ಯ!

## ಸಾರ್ವಜನಿಕ ಶಿಕ್ಷಣ ಉಳಿಸಿ, ವೈಜ್ಞಾನಿಕ, ಧರ್ಮನಿರಪೇಕ್ಷ, ಪ್ರಜಾತಾಂತ್ರಿಕ, ಸಾರ್ವತ್ರಿಕ ಶಿಕ್ಷಣ ಜಾರಿಗೊಳಿಸಿ!!

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ (ಎಐಎಸ್ಇಸಿ) ನೇತೃತ್ವದಲ್ಲಿ ಬೆಂಗಳೂರಿನ ರಾಮಯ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯ ಸಭಾಂಗಣ, ಶಿಕ್ಷಣತಜ್ಞರು, ಇತಿಹಾಸಕಾರರು, ವಿಜ್ಞಾನಿಗಳು, ಸಂಶೋಧನಾಕಾರರು, ವಿದ್ಯಾರ್ಥಿಗಳು, ಶಿಕ್ಷಣಪ್ರೇಮಿಗಳು, ಹೀಗೆ, ಎಲ್ಲಾ ಸ್ತರದ ಪ್ರಜ್ಞಾವಂತ ನಾಗರಿಕರಿಂದ ತುಂಬಿ ತುಳುಕುತ್ತಿತ್ತು. ಅವರೆಲ್ಲರ ಏಕೈಕ ಉದ್ದೇಶವೆಂದರೆ, ಸಾರ್ವಜನಿಕ ಶಿಕ್ಷಣಕ್ಕೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ವೈಜ್ಞಾನಿಕ, ಧರ್ಮನಿರಪೇಕ್ಷ, ಪ್ರಜಾತಾಂತ್ರಿಕ ಮನೋಭಾವಕ್ಕೆ ಕೊಡಲಿಯೇಟಾಗಿ ಇತ್ತೀಚಿನ ದಿನಗಳಲ್ಲಿ ಬಂದೆರಗಿರುವ ಬೃಹತ್ ಅಪಾಯವಾದ ನೂತನ ಶಿಕ್ಷಣ ನೀತಿ–2020 ಅನ್ನು ಹಿಮ್ಮೆಟ್ಟಿಸಿ, ಅದಕ್ಕೆ ಪರ್ಯಾಯವಾಗಿ ಜನತಾ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸುವುದು. ದೇಶದ ಎಲ್ಲೆಡೆಯಿಂದ ಧಾವಿಸಿ ಬಂದ ಈ ಜನತಾ ಸಂಸತ್‌ನ ಸದಸ್ಯರು ಈ ಕುರಿತು ಚರ್ಚಿಸಿ, ಒಮ್ಮತಕ್ಕೆ ಬರಲು ಈ ವೇದಿಕೆಯನ್ನು ಸಿದ್ಧ ಪಡಿಸಲಾಗಿತ್ತು.

ಜನತಾ ಸಂಸತ್‌ಅನ್ನು ಉದ್ಘಾಟಿಸಿ ಮಾತನಾಡಿದ, ಯುಜಿಸಿಯ ಮಾಜಿ ಚೇರ್‌ಮನ್ ಹಾಗೂ ಕರ್ನಾಟಕದ ಶಿಕ್ಷಣ ನೀತಿ ನಿರೂಪಣೆಯ ಅಧ್ಯಕ್ಷರಾದ, **ಪ್ರೊ. ಸುಖದೇವ್ ತೋರಟ್**, "ನೂತನ ಶಿಕ್ಷಣ ನೀತಿ (ಎನ್‌ಇಪಿ), 2020, ದೇಶದ ವಿವಿಧ ರಾಜ್ಯಗಳಿಂದ ಯಾವುದೇ ಅಭಿಪ್ರಾಯವನ್ನು ಪಡೆಯದೆ ಇಡೀ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮಾರ್ಪಡಿಸುತ್ತದೆ. ಎಲ್ಲರನ್ನೂ ಒಳಗೊಳ್ಳದ, ಅಪ್ರಜಾತಾಂತ್ರಿಕ, ಸಂಪೂರ್ಣವಾಗಿ ಕೇಂದ್ರೀಕೃತಗೊಂಡ ಎನ್‌ಇಪಿ ಶಿಕ್ಷಣಕ್ಷೇತ್ರವನ್ನು ಖಾಸಗೀಕರಣಗೊಳಿಸುತ್ತದೆ. ಅದು ಪ್ರಚುರ ಪಡಿಸುವ ಭಾರತದ ಪುರಾತನ ಸಂಸ್ಕೃತಿಯ ಬುನಾದಿಯುಳ್ಳ ಭಾರತೀಯ ಜ್ಞಾನ ವ್ಯವಸ್ಥೆ, ವೇದ ಮತ್ತು ಶ್ರುತಿಗಳಲ್ಲಿರುವುದೇ ಸತ್ಯ ಎನ್ನುತ್ತಾ, ನಮ್ಮ ಸಂವಿಧಾನ ಖಾತ್ರಿ ಪಡಿಸಿರುವ ಧರ್ಮನಿರಪೇಕ್ಷತೆಗೆ ಕುತ್ತು ತರುತ್ತದೆ. ಜೊತೆಗೆ, ಜನಸಾಮಾನ್ಯರನ್ನು ಉನ್ನತ ಶಿಕ್ಷಣದಿಂದ ವಂಚಿಸುವ ಸಂಚು ಇದರಲ್ಲಿ ಅಡಗಿದೆ." ಎಂದು ಎನ್‌ಇಪಿಯ ವಿವಿಧ ಆಯಾಮಗಳನ್ನು ಬಯಲಿಗೆಳೆದರು. ವೈಜ್ಞಾನಿಕ, ಧರ್ಮನಿರಪೇಕ್ಷ, ಪ್ರಜಾತಾಂತ್ರಿಕ, ಸಾರ್ವತ್ರಿಕ ಶಿಕ್ಷಣವನ್ನು ಜಾರಿಗೊಳಿಸಲು ಜನತಾ ಶಿಕ್ಷಣ ನೀತಿಯ ಅವಶ್ಯಕತೆಯನ್ನು ಅವರು ಮನಗಾಣಿಸಿದರು.

ಕೇಂದ್ರ ಸರ್ಕಾರದ ಮಾಹಿತಿ ಮತ್ತು ಸಂಪರ್ಕ ಇಲಾಖೆಯ ಮಾಜಿ ಕಾರ್ಯದರ್ಶಿಗಳಾದ **ಶ್ರೀ ಜವಾಹರ್ ಸರ್ಕಾರ್**, ನೆರೆದಿರುವ ಬೃಹತ್ ಸಭೆಯ ಬಗ್ಗೆ ಹರ್ಷ ವ್ಯಕ್ತಪಡಿಸಿ ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟರು: "ನಾವಿಂದು ಅತ್ಯಂತ ಅನಿಷ್ಟಕಾರಿ, ಸಮನ್ವೀಕೃತ ಶಕ್ತಿಯನ್ನು ಎದುರಿಸುವ ಸ್ಥಿತಿಯಲ್ಲಿದ್ದೇವೆ. ಅಧಿಕಾರಶಾಹಿಯೊಂದರ ದಸ್ತಾವೇಜಾಗಿರುವ ಎನ್‌ಇಪಿ, ಕೇಂದ್ರೀಕರಣ, ಕೋಮುವಾದೀಕರಣ, ಕಾರ್ಪೋರೇಟೀಕರಣ ಮತ್ತು ಭ್ರಷ್ಟಾಚಾರ ಎಂಬ 4 ತತ್ವಗಳನ್ನು ಪ್ರತಿಬಿಂಬಿಸುತ್ತದೆ. ಕೇಂದ್ರ ಸರ್ಕಾರದ 'ವಿಕಸಿತ ಭಾರತ ಶಿಕ್ಷಾ ಅಧಿಷ್ಠಾನ' ಶಿಕ್ಷಣ ಕ್ಷೇತ್ರದ ಸ್ವಾಯತ್ತತೆಗೆ ಮಾರಕವಾಗಿದೆ. ಇದೀಗ ಶಿಕ್ಷಣತಜ್ಞರೆಲ್ಲಾ ಒಡಗೂಡಿ 2ನೇ ಸ್ವಾತಂತ್ರ್ಯ ಸಮರವನ್ನು ಹರಿಬಿಡುವ ಕಾಲ ಸನ್ನಿಹಿತವಾಗಿದೆ. ಇದಕ್ಕಾಗಿ ಎಲ್ಲರೂ ಕೈಜೋಡಿಸಬೇಕು."

ಐಐಟಿ ಮುಂಬೈನ ನಿವೃತ್ತ ಪ್ರಾಧ್ಯಾಪಕರಾದ **ಪ್ರೊ. ರಾಮ್ ಪುನಿಯಾನಿ**ಯವರು, ಶಿಕ್ಷಣ ಕ್ಷೇತ್ರದಲ್ಲಿನ ಅವನತಿಯನ್ನು ತಡೆಗಟ್ಟಲು ಕಳೆದ 10 ವರ್ಷಗಳಿಂದ ಸತತವಾಗಿ ಶ್ರಮಿಸುತ್ತಿರುವ ಎಐಎಸ್‌ಇಸಿಯನ್ನು ಶ್ಲಾಘಿಸಿದರು. "ಎನ್‌ಇಪಿ, ಸಮಾಜವನ್ನು, ಕೇವಲ ಕರ್ತವ್ಯಕ್ಕೆ ಬಾಧ್ಯಸ್ಥರನ್ನಾಗಿ ಮಾಡುವ ಬಡವರು ಮತ್ತು ಎಲ್ಲಾ ಹಕ್ಕುಗಳನ್ನು ಗಳಿಸಿರುವ ಬಲ್ಲಿದರು ಎಂದು ವಿಭಜಿಸುತ್ತದೆ. ಖಾಸಗಿ ಶಾಲೆಗಳು ತಲೆಯೆತ್ತಿ ನಿಲ್ಲುತ್ತವೆ ಮತ್ತು ಸರ್ಕಾರಿ ಶಾಲೆಗಳು ಮುಚ್ಚಿ ಹೋಗುತ್ತವೆ" ಎಂದು ಆತಂಕ ವ್ಯಕ್ತಪಡಿಸಿದರು. "ಗುರುಕುಲ ಮಾದರಿಯನ್ನು ಎತ್ತಿ ಹಿಡಿಯುವ ಎನ್‌ಇಪಿ, ದಲಿತ ಮಕ್ಕಳನ್ನು ವಿದ್ಯೆಯಿಂದ ದೂರ ಇಡುತ್ತದೆ; ಭಾರತೀಯ ಜ್ಞಾನ ವ್ಯವಸ್ಥೆ, ವೈಜ್ಞಾನಿಕ ಮನೋಭಾವದ ಬದಲಿಗೆ ಕುರುಡು ನಂಬಿಕೆಯನ್ನು ಪೋಷಿಸುತ್ತದೆ; ತನ್ಮೂಲಕ, ಆಳ್ವಿಕರು, ತಮ್ಮ ಅನ್ಯಾಯಯುತ ಆಳ್ವಿಕೆಯನ್ನು ಪ್ರಶ್ನಿಸದ ಜನಾಂಗವೊಂದನ್ನು ಹುಟ್ಟುಹಾಕುತ್ತಾರೆ" ಎಂದು ಎಚ್ಚರಿಸಿದರು.



ವೇದಿಕೆಯಲ್ಲಿ: ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ವಿವಿಧ ಶೈಕ್ಷಣಿಕ ವಿಭಾಗಗಳ ತಜ್ಞರು

ಜೆಎನ್‌ಯುನ ಇತಿಹಾಸ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ **ಪ್ರೊ. ಆರ್. ಮಹಾಲಕ್ಷ್ಮಿ**ಯವರು, ಶಿಕ್ಷಣದ ಮೇಲಿನ ಈ ದಾಳಿ ಪ್ರಜಾತಂತ್ರದ ಮೇಲಿನ ಹಿಂದೆಂದೂ ಕೇಳರಿಯದಂತಹ ದಾಳಿ ಎಂದು ಎನ್‌ಇಪಿಯನ್ನು ವಿಶ್ಲೇಷಿಸಿದರು. ಅದು, ಸಂವಿಧಾನದ ಬದಲಿಗೆ ಮನುಸ್ಮೃತಿಯನ್ನು ತರಲೆತ್ನಿಸುವ, ಸಂಸ್ಕೃತ ಭಾಷೆಯನ್ನು ಮುನ್ನೆಲೆಗೆ ತರುವ, ಈ ಮೂಲಕ ಆಕ್ರಮಣಕಾರಿ, ಬ್ರಾಹ್ಮಣೀಕೃತ, ಪುರುಷ ಪ್ರಧಾನ ಮೌಲ್ಯಗಳನ್ನು ವಿದ್ಯಾಸಂಸ್ಥೆಗಳಲ್ಲಿ ಬೋಧಿಸಲು ಹೊರಟಿದೆ ಎಂದರು.

ಇತಿಹಾಸ ತಜ್ಞರೂ, ಜೆಎನ್‌ಯುನ ನಿವೃತ್ತ ಪ್ರಾಧ್ಯಾಪಕರೂ ಆದ **ಪ್ರೊ. ಆದಿತ್ಯ ಮುಖರ್ಜಿ**ಯವರು, ಈಗ ಮಾನವತೆಯನ್ನು, ನಾಗರಿಕತೆಯನ್ನು ರಕ್ಷಿಸಬೇಕಾಗಿದೆ ಎನ್ನುತ್ತಾ, ಎನ್‌ಇಪಿ ತಂದೊಡ್ಡಿರುವ 3 ಅಪಾಯಗಳನ್ನು ಮುಂದಿಟ್ಟರು: "1. ಜನ ಸಾಮಾನ್ಯರನ್ನು ಶಿಕ್ಷಣದಿಂದ ವಂಚಿಸಿ ಅವರ ಅಭ್ಯುದಯವನ್ನು ತಡೆಗಟ್ಟುವುದು. 2. ಜೆಎನ್‌ಯು, ಜಾದವಪುರ ವಿಶ್ವವಿದ್ಯಾಲಯಗಳಂತಹ, ಈ ಹಿಂದೆ ಸ್ಥಾಪಿಸಲಾಗಿದ್ದಂತಹ ಪ್ರಮುಖ, ಪ್ರಸಿದ್ಧ ವಿದ್ಯಾಸಂಸ್ಥೆಗಳ ಮಟ್ಟವನ್ನು ಕೆಳಗಿಳಿಸಿ ರಾಜಕಾರಣಿಗಳೇ ಸ್ವತ: ನಡೆಸುತ್ತಿರುವ ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು. 3. ಶಿಕ್ಷಣದ ಸಾರವನ್ನೇ ಕಲುಷಿತಗೊಳಿಸಿ, ನೈಸರ್ಗಿಕ ಮತ್ತು ಸಾಮಾಜಿಕ ವಿಜ್ಞಾನಗಳನ್ನು ತಿರುಚಿ ಕೋಮುವಾದೀಕರಣಕ್ಕೆ ಎಡೆ ಮಾಡಿಕೊಡುವುದು." ಹಿಟ್ಲರ್ ಜರ್ಮನಿಯ ಫ್ರಾಂಕ್‌ಫರ್ಟ್ ವಿಶ್ವವಿದ್ಯಾಲಯದ ಮೇಲೆ ಎಸಗಿದ್ದ ದಾಳಿಯಂತೆ ಇಲ್ಲೂ ಸಹ ಅಂತಹ ಫ್ಯಾಸೀವಾದಿ ದಾಳಿ ನಡೆಯುತ್ತಿದೆ ಎಂದ ಅವರು ಜೆಎನ್‌ಯುನಲ್ಲಿ ಅಧ್ಯಾಪಕರನ್ನು ಪೀಡಿಸಲಾಗುತ್ತಿದೆ, ವಿದ್ಯಾರ್ಥಿಗಳನ್ನು ಬಂಧಿಸಿ ಅವರಿಗೆ ಜಾಮೀನು ಕೊಡದೆ ಹಿಂಸಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಶಿಕ್ಷಣತಜ್ಞರೂ, ಸಾಮಾಜಿಕ ಕಾರ್ಯಕರ್ತರೂ ಆಗಿರುವ **ಡಾ. ನಿರಂಜನಾರಾಧ್ಯ** ವಿ. ಪಿ. ರವರು, 1964ರಲ್ಲಿ ನೇಮಿತವಾದ ಕೋಠಾರಿ ಸಮಿತಿ, 2 ವರ್ಷಗಳಿಗಿಂತಲೂ ದೀರ್ಘಕಾಲ ಶ್ರಮಿಸಿ ತಯಾರಿಸಿದ ಶಿಕ್ಷಣ ನೀತಿಯ ಪೀಠಿಕೆಯಲ್ಲಿ, ದೇಶದ ಭವಿಷ್ಯ ರೂಪಿತಗೊಳ್ಳುವುದು ವಿದ್ಯಾಸಂಸ್ಥೆಗಳ ತರಗತಿಗಳಲ್ಲಿ ಎಂದು ಉಲ್ಲೇಖಿಸಿರುವುದನ್ನು ನೆನಪಿಸಿಕೊಂಡರು. ಜನಪರ ಶಿಕ್ಷಣ ನೀತಿಯ ಗುಣಲಕ್ಷಣಗಳು ಹೇಗಿರಬೇಕು ಎಂಬುದರ ಬಗ್ಗೆ ಅವರು, ಕೆಜಿಯಿಂದ ಪಿಜಿ ವರೆಗೆ ಎಲ್ಲರಿಗೂ ಶಿಕ್ಷಣ ಲಭ್ಯ ಇರಬೇಕು, ಶಿಕ್ಷಣ ಕೈಗೆಟಕುವಂತಿರಬೇಕು, ಪಠ್ಯಪುಸ್ತಕಗಳಲ್ಲಿನ ಸಾರ ಎಲ್ಲರಿಗೂ ಒಪ್ಪಿಗೆಯಾಗುವಂತಿರಬೇಕು, ಈ ನೀತಿ ವಿಭಿನ್ನ ರಾಜ್ಯಗಳ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿದ್ದು, ಅವುಗಳು ತಮ್ಮದೇ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸುವಂತೆ ಇರಬೇಕು ಎಂದು ವಿವರಿಸಿದರು.

ಹಂಪಿ ಕನ್ನಡ ವಿದ್ಯಾಲಯದ ಮಾಜಿ ಕುಲಪತಿಗಳೂ, ಜನತಾ ಸಂಸತ್‌ನ ಸ್ವಾಗತ ಸಮಿತಿ ಅಧ್ಯಕ್ಷರೂ ಆಗಿರುವ **ಪ್ರೊ. ಮುರಿಗೆಪ್ಪ**ರವರು ಎಲ್ಲರನ್ನೂ ಸ್ವಾಗತಿಸಿದರು. ಬಳಿಕ, ಜಾದವಪುರ ವಿದ್ಯಾಲಯದ ಮಾಜಿ ಪ್ರಾಧ್ಯಾಪಕರೂ, ಎಐಎಸ್‌ಇಸಿಯ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ **ಪ್ರೊ. ತರುಣಕಾಂತಿ ನಸ್ಕರ್**ರವರು ಪ್ರಾಸ್ತಾವಿಕವಾಗಿ ಮಾತನಾಡಿದರು; ಈ ಸಂಸತ್‌ನ ಧ್ಯೇಯೋದ್ದೇಶವನ್ನು ಸಭೆಯ ಮುಂದಿಟ್ಟರು. ಜನಪರ ಶಿಕ್ಷಣಕ್ಕಾಗಿ ಶ್ರಮಿಸುತ್ತಿರುವ ಎಐಎಸ್‌ಇಸಿಯ ಅನೇಕಾನೇಕ ಕಾರ್ಯಕ್ರಮಗಳನ್ನು ವಿವರಿಸಿದರು.

ಸಭೆಯ ಅಧ್ಯಕ್ಷತೆಯನ್ನು ಎಐಎಸ್‌ಇಸಿಯ ಅಧ್ಯಕ್ಷರಾದ, **ಶ್ರೀ ಪ್ರಕಾಶ್ ಶಾ** ವಹಿಸಿ ಮಾತನಾಡುತ್ತಾ, ತಾವು ತುರ್ತು ಪರಿಸ್ಥಿತಿಯ ಕಾಲದಲ್ಲಿ ಸೆರೆಮನೆವಾಸ ಅನುಭವಿಸಿ ಹೊರಬಂದ ಬಳಿಕ 2ನೇ ಸ್ವಾತಂತ್ರ್ಯ ಹೋರಾಟ ಶುರುವಾಗುತ್ತದೆ ಎಂದುಕೊಂಡಿದ್ದನ್ನು ನೆನಪಿಸಿಕೊಂಡರು. ಈಗ 50 ವರ್ಷಗಳ ಬಳಿಕ ಹಿಂದಿರುಗಿ ನೋಡಿದರೆ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಇನ್ನೊಂದು ಸ್ವಾತಂತ್ರ್ಯ ಹೋರಾಟ ನಡೆಯಬೇಕು ಎಂದ ಅವರು, ಸ್ವಾತಂತ್ರ್ಯಕ್ಕಾಗಿ ಯಾವುದೇ ಹೋರಾಟ ನಡೆಸದವರ ಪೀಳಿಗೆಯ ವಿರುದ್ಧ ನಾವೀಗ ಹೋರಾಡಬೇಕಾಗಿದೆ ಎಂದು ಮಾರ್ಮಿಕವಾಗಿ ನುಡಿದರು ಮತ್ತು ಈ ಹೋರಾಟ ನಮ್ಮೆಲ್ಲರ ಜವಾಬ್ದಾರಿ ಎಂದು ಕರೆ ನೀಡಿದರು.



ಸಭೆಯಲ್ಲಿ ಪ್ರತಿನಿಧಿಗಳಾಗಿ ಆಗಮಿಸಿದ್ದ ವಿವಿಧ ರಾಜ್ಯದ ಶಿಕ್ಷಣತಜ್ಞರು, ಇತಿಹಾಸಕಾರರು, ವಿಜ್ಞಾನಿಗಳು, ಸಂಶೋಧನಾಕಾರರು, ವಿದ್ಯಾರ್ಥಿಗಳು, ಶಿಕ್ಷಣಪ್ರೇಮಿಗಳು

ನಂತರ ನಡೆದ 5 ವಿಷಯ ಆಧಾರಿತ ಅಧಿವೇಶನಗಳಲ್ಲಿ, ಹಿರಿಯ ವಿಷಯ ತಜ್ಞರ ಅಧ್ಯಕ್ಷತೆಯಲ್ಲಿ ಎಲ್ಲಾ ಜನತಾ ಸಂಸದರೂ ಭಾಗವಹಿಸಿ, ಅಲ್ಲಿ ಮಂಡಿಸಲ್ಪಟ್ಟ ಎನ್‌ಇಪಿಯ ತಿದ್ದುಪಡಿಗಳ ಬಗ್ಗೆ ವಿಶದವಾಗಿ ಚರ್ಚಿಸಿ ತಮ್ಮ ಒಪ್ಪಿಗೆಯನ್ನೂ, ತಿದ್ದುಪಡಿಗಳನ್ನೂ ನೀಡಿದರು. ಬಳಿಕ, ನಡೆದ ಸಮಗ್ರ ಅಧಿವೇಶನದಲ್ಲಿ, ಸಭೆಯು ಆಯ್ಕೆ ಮಾಡಿದ ಸಂಸತ್‌ನ ಸಭಾಪತಿಗಳಾದ **ಪ್ರೊ. ಸಚ್ಚಿದಾನಂದ** ಸಿನ್ಹಾರವರು (ಜೆಎನ್‌ಯುನ ನಿವೃತ್ತ ಪ್ರಾಧ್ಯಾಪಕರು), ಈ ಬಗ್ಗೆ ಪರಿಶೀಲನಾ ಸಮಿತಿಯಲ್ಲಿ ಚರ್ಚಿಸಿ ತಿದ್ದುಪಡಿಗಳನ್ನು ಒಳಗೊಂಡ 'ಜನತಾ ಶಿಕ್ಷಣ ನೀತಿ'ಯನ್ನು ಪ್ರಕಟಿಸುವುದಾಗಿ ಘೋಷಿಸಿದರು. ಈ ಕುರಿತಾದ ಗೊತ್ತುವಳಿಯನ್ನು ಸಂಸತ್ ಅಂಗೀಕರಿಸಿತು.

ಬಳಿಕ ಮಾತನಾಡಿದ ಆರ್ಥಿಕತಜ್ಞರೂ, ಜೆಎನ್‌ಯುನ ನಿವೃತ್ತ ಪ್ರಾಧ್ಯಾಪಕರೂ ಆಗಿರುವ **ಪ್ರೊ. ಅರುಣ ಕುಮಾರ್** ಅವರು, "ನಮ್ಮ ಸಮಾಜ ಇನ್ನೂ ಊಳಿಗಮಾನ್ಯ ಮನಸ್ಥಿತಿಯಲ್ಲೇ ಇದ್ದು ಇಲ್ಲಿ ಪ್ರಜಾತಾಂತ್ರಿಕ ಮನೋಭಾವ ನೆಲೆಸಬೇಕೆಂದರೆ, ಅದು ಒಳ್ಳೆಯ ಶಿಕ್ಷಣದಿಂದ ಮತ್ರವೇ ಸಾಧ್ಯ. ಶಿಕ್ಷಣ ಸಾಮಾಜಿಕ ಬದಲಾವಣೆಯನ್ನು ತರುತ್ತದೆ. ಆದರೆ, ಇಲ್ಲಿಯ ಬಂಡವಾಳಶಾಹಿ ವರ್ಗ ಬಯಸುವುದು, ಎಲ್ಲವನ್ನೂ ತಲೆ ಬಗ್ಗಿಸಿ ಸ್ವೀಕರಿಸುವ ಮನಸ್ಥಿತಿಯ ಕೆಲಸಗಾರರನ್ನು. ಹಾಗಾಗಿ, ಶಿಕ್ಷಣ ವ್ಯವಸ್ಥೆ ಅಂತಹವರನ್ನೇ ತಯಾರು ಮಾಡುತ್ತದೆ. ಬದಲಿಗೆ, ನೈಜ ಜ್ಞಾನ ಪಡೆಯಲು ಜನತಾ ಶಿಕ್ಷಣ ನೀತಿಯನ್ನು ಜಾರಿಗೊಳಿಸಬೇಕು." ಎಂದು ಒತ್ತಾಯಿಸಿದರು.

ಕೊಲ್ಕತ್ತೆಯ ಐಐಎಸ್‌ಇಆರ್‌ನ ಮಾಜಿ ನಿರ್ದೇಶಕರಾದ **ಪ್ರೊ. ಸೌಮಿತ್ರೊ ಬ್ಯಾನರ್ಜಿ**ಯವರು, ಭಾರತೀಯ ಜ್ಞಾನ ವ್ಯವಸ್ಥೆ ಹೇಗೆ ಅವೈಜ್ಞಾನಿಕ ವಿಷಯಗಳಿಂದ ತುಂಬಿದೆ ಎಂದು ವಿವರಿಸಿದರು. "ವೇದಿಕ್ ಜ್ಯೋತಿಷ್ಯ ಶಾಸ್ತ್ರ, ವೇದಗಣಿತ ಮುಂತಾದವುಗಳನ್ನು ಅದು ಒಳಗೊಂಡಿದ್ದು, ಅದರ ಪ್ರವರ್ತಕರು, ಹಸು ತನ್ನ ನಿಶ್ವಾಸದಲ್ಲಿ ಆಮ್ಲಜನಕವನ್ನು ಹೊರಬಿಡುತ್ತದೆ, ಗಣೇಶ ಪ್ರಾಚೀನ ಕಾಲದಲ್ಲಿದ್ದ ಪ್ಲಾಸ್ಟಿಕ್ ಸರ್ಜರಿಯ ನಿದರ್ಶನ, ವಿಮಾನವನ್ನು ಪ್ರಾಚೀನ ಭಾರತೀಯರೇ ಕಂಡು ಹಿಡಿದದ್ದು ಎಂಬಂತಹ ಮಿಥ್ಯೆಗಳನ್ನು ಪ್ರಚಾರ ಮಾಡುತ್ತಾರೆ. ಹಾಗಾಗಿ, ಯಾವುದನ್ನೂ ಪರೀಕ್ಷಿಸದೆ ಒಪ್ಪಬಾರದು ಎಂಬ ಮನೋಭಾವವನ್ನು, ವಿಶೇಷವಾಗಿ ಯುವ ಜನತೆ ಬೆಳೆಸಿಕೊಳ್ಳುವುದು ಅವಶ್ಯಕ. ಶಿಕ್ಷಣ ಮನುಷ್ಯನನ್ನು ಚಿಂತನೆಗೆ ಹಚ್ಚಬೇಕು." ಎಂದವರು ಪ್ರತಿಪಾದಿಸಿದರು.

ಇತಿಹಾಸ ತಜ್ಞರೂ, ಜೆಎನ್‌ಯುನ ನಿವೃತ್ತ ಪ್ರಾಧ್ಯಾಪಕರೂ ಆಗಿರುವ **ಪ್ರೊ. ಮೃದುಲಾ ಮುಖರ್ಜಿ**ಯವರು, ಒಂದು ಕಾಲದಲ್ಲಿ ದೇಶದ ಅತ್ಯುನ್ನತ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿದ್ದ ಜೆಎನ್‌ಯು, ಇಂದು ಅವನತಿಯ ಹಾದಿಯಲ್ಲಿರುವುದರ ಬಗ್ಗೆ ವಿಷಾದಿಸಿದರು. "ಒಂದು ಸಂಸ್ಥೆಯನ್ನು ಕಟ್ಟಲು ಬಹಳವೇ ಶ್ರಮ ಬೇಕಾಗುತ್ತದೆ. ಅದೇನಾದರೂ ಕುಸಿದು ಹೋದರೆ, ಮತ್ತೆ ಅದನ್ನು ಕಟ್ಟುವುದು ಕಷ್ಟಸಾಧ್ಯ. ವಿದ್ಯಾರ್ಥಿಗಳು ಇಂತಹ ಸಂಸ್ಥೆಗೆ ಸೇರಲು ನಡೆಸುವ ಕೇಂದ್ರೀಕೃತ ಪ್ರವೇಶ ಪರೀಕ್ಷೆಗಳು ಅವರ ಗುಣಮಟ್ಟಕ್ಕೆ ಕತ್ತರಿ ಹಾಕುತ್ತವೆ. ಜೆಎನ್‌ಯುನ ಮಟ್ಟ ಈಗ ಕುಸಿದುಹೋಗಿದೆ. ಸಂಶೋಧನಾ ಕಾರ್ಯಕ್ರಮಗಳನ್ನು ನಾಶ ಮಾಡಲಾಗಿದೆ. ಜೊತೆಗೆ, ಭ್ರಷ್ಟಾಚಾರವೂ ಇಲ್ಲಿ ಮನೆ ಮಾಡಿದೆ. ಆದರೆ, ಪ್ರಾಧ್ಯಾಪಕರೂ, ವಿದ್ಯಾರ್ಥಿಗಳೂ ಜೊತೆಗೂಡಿ ಆಂದೋಳನ ನಡೆಸುತ್ತಿರುವುದೊಂದು ಆಶಾದಾಯಕ ಬೆಳವಣಿಗೆ." ಎನ್ನುತ್ತಾ, ಎನ್‌ಸಿಆರ್‌ಟಿ ಪುಸ್ತಕಗಳಲ್ಲಿ ಡಾಳಾಗಿರುವ ಕೋಮುವಾದ ಮಕ್ಕಳ ಮನಸ್ಸಿಗೆ ಹಾನಿ ಮಾಡುವಂಥಾದ್ದು ಎಂದು ಅದನ್ನು ಖಂಡಿಸಿದರು.

4ನೇ ಪುಟಕ್ಕೆ

# ದೇಶದಲ್ಲಿ ಉನ್ನತ ಶಿಕ್ಷಣದ ಉಸಿರುಗಟ್ಟಿಸಲಾಗುತ್ತಿದೆ

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮೋದಿ ಸರ್ಕಾರವು 'ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ್ ಮಸೂದೆ'ಯನ್ನು ಮಂಡಿಸಿದೆ. ಈ ಮಸೂದೆಯು ಸ್ವೀಕೃತವಾದರೆ, ಹೊಸದಾಗಿ ರೂಪುಗೊಳ್ಳುವ "ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ್" (VBSA) ಕಾಯ್ದೆಯು ಉನ್ನತ ಶಿಕ್ಷಣದ ಗುಣಮಟ್ಟದ ನಿಯಂತ್ರಕ ಸಂಸ್ಥೆಗಳಾದ UGC, AICTE ಮತ್ತು NCTEಗಳನ್ನು ರದ್ದು ಮಾಡಿ, ಕಾನೂನು ಮತ್ತು ವೈದ್ಯಕೀಯ ಶಿಕ್ಷಣವನ್ನು ಹೊರತುಪಡಿಸಿ, ಉನ್ನತ ಶಿಕ್ಷಣದ ಬಹುತೇಕ ಭಾಗವನ್ನು ಏಕೈಕ ಪ್ರಾಧಿಕಾರದ ನಿಯಂತ್ರಣಕ್ಕೆ ಒಳಪಡಿಸುತ್ತದೆ. ಇಲ್ಲಿಯತನಕ, ಸಾಮಾನ್ಯ ಉನ್ನತ ಶಿಕ್ಷಣಕ್ಕೆ UGC, ತಾಂತ್ರಿಕ ಮತ್ತು ಮ್ಯಾನೇಜ್ಮೆಂಟ್ ಶಿಕ್ಷಣಕ್ಕೆ AICTE ಮತ್ತು ಶಿಕ್ಷಕರ ಶಿಕ್ಷಣದ ಗುಣಮಟ್ಟಕ್ಕೆ NCTE ಮೇಲುಸ್ತುವಾರಿಯ ಜವಾಬ್ದಾರಿಯನ್ನು ಹೊತ್ತಿದ್ದವು. ಇವೆಲ್ಲವೂ ಈಗ ಒಂದೇ ನಿಯಂತ್ರಣ ಪ್ರಾಧಿಕಾರದ ಅಡಿಯಲ್ಲಿ ಬರಲಿವೆ. ಇದು ಉನ್ನತ ಶಿಕ್ಷಣದ ಸಂಪೂರ್ಣ ಕೇಂದ್ರೀಕರಣ ಮತ್ತು ಶೈಕ್ಷಣಿಕ ಸ್ವಾಯತ್ತತೆಯ ಹರಣವೇ ಸರಿ. ಹೀಗೆ, ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಹೇರಲು ಹೊರಟಿರುವ ಕೇಂದ್ರವು ಒಕ್ಕೂಟ ಸಂರಚನೆಯ ನೀತಿಯನ್ನು ಪಕ್ಕಕ್ಕೆ ಸರಿಸಿ ಶಿಕ್ಷಣ ವ್ಯವಸ್ಥೆಯ ಮೇಲೆ ತನ್ನ ಏಕಸ್ವಾಮ್ಯ ನಿಯಂತ್ರಣವನ್ನು ತರಲು ಹವಣಿಸಿದೆ. NEPಯ ದಸ್ತಾವೇಜಿನಲ್ಲಿ ಆ ಮಾದರಿಯ ಆಯೋಗವೊಂದನ್ನು ರಚಿಸುವ ಅಂಶಗಳು ಅಡಕವಾಗಿವೆ ಎನ್ನುವುದನ್ನು ನಾವು ಮರೆಯುವಂತಿಲ್ಲ.

### ಶೈಕ್ಷಣಿಕ ಸ್ವಾಯತ್ತತೆಯನ್ನು ಹತ್ತಿಕ್ಕುವ ಇದು ಎರಡನೇ ಪ್ರಯತ್ನ

ಪ್ರಸ್ತುತ ಕೇಂದ್ರ ಸರ್ಕಾರವು ಶಾಸನದ ಮೂಲಕ ಉನ್ನತ ಶಿಕ್ಷಣದ ಕೇಂದ್ರೀಕೃತ ನಿಯಂತ್ರಣವನ್ನು ಕಾನೂನುಬದ್ಧಗೊಳಿಸಲು ಪ್ರಯತ್ನಿಸುತ್ತಿರುವುದು ಇದು ಎರಡನೇ ಬಾರಿ ಆಗಿದೆ. "ವಿಶ್ವವಿದ್ಯಾಲಯ ಧನಸಹಾಯ ಆಯೋಗದ (UGC) ರದ್ದತಿ ಮಸೂದೆ 2018" ಅನ್ನು ಅದು ತರಲು ಯತ್ನಿಸಿದ್ದು ಮೊದಲ ಪ್ರಯತ್ನ. ಅದರ ಉದ್ದೇಶ UGC ಅನ್ನು ರದ್ದುಗೊಳಿಸಿ "ಭಾರತೀಯ ಉನ್ನತ ಶಿಕ್ಷಣ ಆಯೋಗ (HECI)" ಅನ್ನು ಸ್ಥಾಪಿಸುವುದಾಗಿತ್ತು. ಆ ಪ್ರಯತ್ನಕ್ಕೆ ದೇಶದಾದ್ಯಂತ ವ್ಯಾಪಕ ಟೀಕೆ-ಆಕ್ರೋಶಗಳು ವ್ಯಕ್ತವಾಗಿದ್ದವು. ಆ ಮಸೂದೆಯು ಜಾರಿಯಾಗಿದ್ದಿದ್ದರೆ ಉನ್ನತ ಶಿಕ್ಷಣದ ಸ್ವಾಯತ್ತತೆಯು ಸಂಪೂರ್ಣ ನಶಿಸಿ ಶಿಕ್ಷಣವು ಸಂಪೂರ್ಣವಾಗಿ ಕೇಂದ್ರೀಕೃತವಾಗುತ್ತಿತ್ತು ಎಂಬ ಆತಂಕವು ಅಂದು ಸ್ಪಷ್ಟವಾಗಿ ವ್ಯಕ್ತವಾಗಿತ್ತು. ಪ್ರತಿಭಟನೆಗಳ ಒತ್ತಡಕ್ಕೆ ಮಣಿದ ಸರ್ಕಾರವು ನಿರ್ವಾಹವಿಲ್ಲದೆ ಆ ಮಸೂದೆಯನ್ನು ಆಗ ಹಿಂತೆಗೆದುಕೊಳ್ಳಬೇಕಾಯಿತು. ಆದರೆ 2025ರಲ್ಲಿ, ಅದೇ ಕಾನೂನನ್ನು ಹೊಸ ರೂಪದಲ್ಲಿ, ಹೆಚ್ಚು ಕಠಿಣವಾದ ನಿಬಂಧನೆಗಳೊಂದಿಗೆ ತರಾತುರಿಯಲ್ಲಿ ಈಗ ಜಾರಿಗೆ ತರಲಾಗಿದೆ. 2018ರ ಮಸೂದೆಯು UGCಯನ್ನು ರದ್ದುಗೊಳಿಸಲು ಮುಂದಾಗಿತ್ತು, ಆದರೆ, ಪ್ರಸ್ತುತ 2025ರ ಮಸೂದೆಯಲ್ಲಿ AICTE ಮತ್ತು NCTE ಎಂಬ ಎರಡು ನಿಯಂತ್ರಕ ಸಂಸ್ಥೆಗಳನ್ನೂ ರದ್ದು ಮಾಡುವ ಉದ್ದೇಶವಿದೆ.

### ಹಣಕಾಸು ಅನುದಾನದ ಸಮಸ್ಯೆ

ಕಾನೂನಿನಡಿಯಲ್ಲಿ ಅವಕಾಶವಿದ್ದರೂ, ಸರ್ಕಾರದ ನೀತಿಗಳಿಂದಾಗಿ ಮತ್ತು UGC ಬಜೆಟ್‌ನಲ್ಲಿನ ಕಡಿತದಿಂದಾಗಿ ವಾಸ್ತವವಾಗಿ ಅನುದಾನಗಳು ಸ್ಥಗಿತಗೊಂಡಿವೆ. ಶೈಕ್ಷಣಿಕ ಸಮುದಾಯದ ತೀವ್ರ ವಿರೋಧದ ನಡುವೆಯೂ ಕೇವಲ ಒಂದು ವರ್ಷದ ಹಿಂದೆ UGC ಬಜೆಟ್ ಅನ್ನು ಶೇ.61 ರಷ್ಟು ಕಡಿತ ಮಾಡಲಾಗಿತ್ತು. 2025ರಲ್ಲಿ, ಈಗ VBSAಯಿಂದ ಸೃಷ್ಟಿಯಾಗುವ ಹೊಸ ಆಯೋಗದಿಂದ ಅನುದಾನ ನೀಡಿಕೆಯ ಸಾಂಕೇತಿಕ ಅಧಿಕಾರವನ್ನೂ ಸಹ ಸರ್ಕಾರವು ಅಧಿಕೃತವಾಗಿ ಕಸಿದುಕೊಂಡಿದೆ. ಶಿಕ್ಷಣ ಸಂಸ್ಥೆಯೊಂದು ಈ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಿದರೆ ರೂ.30 ಲಕ್ಷಕ್ಕೆ ಕಡಿಮೆ ಇಲ್ಲದ ದಂಡ ಮತ್ತು ನಿಯಮಗಳ ಉಲ್ಲಂಘನೆ ಮುಂದುವರಿದರೆ ರೂ.75 ಲಕ್ಷಗಳವರೆಗೆ ದಂಡ ಅಥವಾ ಆ ಶಿಕ್ಷಣ ಸಂಸ್ಥೆಯನ್ನು ಮುಚ್ಚುವಂತೆ ಶಿಫಾರಸು ಮಾಡುವ ಅಧಿಕಾರದಂತಹ ಕಠಿಣ ನಿಯಮಗಳನ್ನು ರೂಪಿಸಿ ಹೊಸ ಮಂಡಳಿಗೆ ಅಧಿಕಾರ ನೀಡಲಾಗಿದೆ. ಹೀಗೆ ನಡೆಯುವ ಸಂಸ್ಥೆಗಳ ಮುಚ್ಚುವಿಕೆ ಪ್ರಕ್ರಿಯೆಯು, ಎನ್‌ಇಪಿ 2020ಯಲ್ಲಿ ಪ್ರಸ್ತಾಪಿಸಿರುವಂತೆ ಈಗ ದೇಶದಾದ್ಯಂತ ನಡೆಯುತ್ತಿರುವ ಸಾವಿರಾರು ಸರಕಾರಿ ಶಾಲೆಗಳ ಮುಚ್ಚುವಿಕೆಯ ಪ್ರಕ್ರಿಯೆಗೆ ಸಾಮ್ಯತೆಯನ್ನು ಹೊಂದಿದೆ. ಈ ರೀತಿಯಲ್ಲಿ, VBSA ರಚಿಸುವ ಆ ಆಯೋಗವು ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ದಂಡಪ್ರಯೋಗ ಮಾಡುವ ಸಂಸ್ಥೆಯಾಗಷ್ಟೇ ಉಳಿಯಲಿದೆ.

### ವಿನಾಶಕಾರಿ ಪರಿಣಾಮಗಳು

ಈ ರೀತಿಯಲ್ಲಿ ದಂಡ ಪ್ರಯೋಗಿಸುವ ನೀತಿಯ ಪರಿಣಾಮಗಳು ಈಗಾಗಲೇ ಗೋಚರಿಸಲು ಆರಂಭಿಸಿವೆ. ಈಗ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮಗಳನ್ನು ತಜ್ಞ ಶಿಕ್ಷಕರು ತಾವೇ ಸ್ವತ: ಸದಸ್ಯರಾಗಿರುವ ಅಕಾಡೆಮಿಕ್ ಕೌನ್ಸಿಲ್‌ಗಳಂತಹವು ಸಿದ್ಧಪಡಿಸುತ್ತವೆ. ಆದರೆ, ಸರ್ಕಾರವು ಈ ಜವಾಬ್ದಾರಿಯನ್ನು ಈಗ UGCಗೆ ವಹಿಸಿದೆ. ಇತ್ತೀಚೆಗೆ, UGC ಹೊರಡಿಸಿದ ಗಣಿತ, ರಸಾಯನಶಾಸ್ತ್ರ, ವಾಣಿಜ್ಯ, ಅರ್ಥಶಾಸ್ತ್ರ, ಭೂಗೋಳ ಮತ್ತು ರಾಜ್ಯಶಾಸ್ತ್ರ ಮುಂತಾದ ವಿಷಯಗಳ ಕರಡು ಪಠ್ಯಕ್ರಮವನ್ನು ಕಂಡು ಪ್ರಾಧ್ಯಾಪಕರು ಬೆಚ್ಚಿಬಿದ್ದಿದ್ದಾರೆ. ಗಣಿತದ ಪಠ್ಯಕ್ರಮದಲ್ಲಿ "ಜೀವ ವಿಜ್ಞಾನದಲ್ಲಿ ಗಣಿತ", "ಧ್ಯಾನಕ್ಕಾಗಿ ಗಣಿತ", ಚಂದ್ರಮಾನ ತಿಥಿಗಳು, ನಕ್ಷತ್ರಪುಂಜಗಳು, ಶುಭ ಮತ್ತು ಅಶುಭ ಗಳಿಗೆಗಳನ್ನು ನಿರ್ಧರಿಸುವ ವಿಧಾನಗಳಂತಹ ವಿಷಯಗಳನ್ನು ತುರಕಲಾಗಿದೆ. "ಭಾರತೀಯ ಜ್ಞಾನ ಪದ್ಧತಿ"ಯ ಹೆಸರಿನಲ್ಲಿ ಆಧುನಿಕ ಆಲೋಚನಾ ಕ್ರಮ ಮತ್ತು ಗಣಿತದ ವಿಷಯಗಳನ್ನು ಬದಿಗೊತ್ತಿ ಅವೈಜ್ಞಾನಿಕ ವಿಷಯಗಳನ್ನು ಉತ್ತೇಜಿಸುವ ಪ್ರವೃತ್ತಿ ಬಲವಾಗಿ ಕಾಣಿಸುತ್ತಿದೆ. ಇದರ ಮೇಲೆ 'ವೇದ ಗಣಿತ'ದ ಮಾತು ಪದೇಪದೇ ಕೇಳಿಬರುತ್ತಿದೆ. ಅದರ ಅಸ್ತಿತ್ವಕ್ಕೆ ಯಾವುದೇ ಸುಭದ್ರವಾದ ಐತಿಹಾಸಿಕ ಪುರಾವೆ ಲಭ್ಯವಿಲ್ಲ. ಇತ್ತೀಚೆಗೆ, 900ಕ್ಕೂ ಹೆಚ್ಚು ಗಣಿತ ಪ್ರಾಧ್ಯಾಪಕರು UGCಗೆ ಪತ್ರ ಬರೆದು, ಈ ಪಠ್ಯಕ್ರಮವು ವಿದ್ಯಾರ್ಥಿಗಳನ್ನು ಆಧುನಿಕ ಗಣಿತದಿಂದ ವಂಚಿತರನ್ನಾಗಿ ಮಾಡುವುದಲ್ಲದೇ, ನಮ್ಮ ನಾಗರಿಕತೆಯನ್ನು ಒಂದು ಶತಮಾನದಷ್ಟು ಕಾಲ ಹಿಂದಕ್ಕೆ ದಬ್ಬುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಇಂತಹ ಅಪಸವ್ಯವನ್ನು ತಪ್ಪಿಸಲು 'ನೀವು ಸ್ವತ: ಸ್ವಲ್ಪ ಗಣಿತವನ್ನು ಕಲಿಯಿರಿ' ಎಂದು UGCಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಉಳಿದ ವಿಷಯಗಳ ಪಠ್ಯಕ್ರಮಗಳ ಪರಿಸ್ಥಿತಿಯೂ ಸಹ ಇದಕ್ಕಿಂತ ಉತ್ತಮವಾಗೇನೂ ಇಲ್ಲ.

NEP-2020 ಅನ್ವಯ ಪದವಿ ಕೋರ್ಸ್‌ನ್ನು ಮೂರರಿಂದ ನಾಲ್ಕು ವರ್ಷಗಳಿಗೆ ವಿಸ್ತರಿಸಿದಾಗಿನಿಂದ ಸಮಸ್ಯೆಗಳು ಉಲ್ಬಣಗೊಂಡಿವೆ. "ಕೌಶಲ್ಯ ವರ್ಧನೆ" ಮತ್ತು "ಮೌಲ್ಯವರ್ಧಿತ ವಿಷಯಗಳು" ಎಂಬ ಹೆಸರಿನಲ್ಲಿ ಮುಖ್ಯ ವಿಷಯಗಳನ್ನು ಪಠ್ಯಕ್ರಮದಿಂದ ತೆಗೆದುಹಾಕಿ, "ಹ್ಯಾಪಿನೆಸ್ ಸ್ಟಡೀಸ್", "ಫಿಟ್ ಇಂಡಿಯಾ", 'ಸ್ವಚ್ಛ ಭಾರತ', 'ವ್ಯಕ್ತಿತ್ವ ವಿಕಸನ', "ಗೋ ಕಲ್ಯಾಣ", 'ಬ್ರಾಹ್ಮಣ ಕಲ್ಯಾಣ'ದಂತಹ ಲಘು ವಿಷಯಗಳನ್ನು ಓದಲು ವಿದ್ಯಾರ್ಥಿಗಳನ್ನು ಒತ್ತಾಯಿಸಲಾಗುತ್ತಿದೆ. ಈಗಾಗಲೇ ವಿಸ್ತರಿಸಿರುವ ಪದವಿಯ ಅವಧಿ ಮತ್ತು ಇಂತಹ ಪಠ್ಯಕ್ರಮ ವಿದ್ಯಾರ್ಥಿಗಳಿಗೆ ಬಹುದೊಡ್ಡ ತಲೆನೋವಾಗಿ ಪರಿಣಮಿಸಿವೆ. ಉನ್ನತ ಶಿಕ್ಷಣದಲ್ಲಿ ಅವರ ಆಸಕ್ತಿ ಕುಂದುತ್ತಿದೆ. ತೀರ ಹತಾಶೆಗೊಂಡಿರುವ ಹಲವಾರು ವಿದ್ಯಾರ್ಥಿಗಳು, ಒಂದೋ ಕಾಲೇಜುಗಳಿಗೆ ತಮ್ಮನ್ನು ನೋಂದಣಿ ಮಾಡಿಕೊಳ್ಳುತ್ತಿಲ್ಲ, ಇಲ್ಲವೇ, ನೋಂದಾಯಿಸಿಕೊಂಡ ನಂತರ ಕೋರ್ಸ್‌ನ್ನು ತ್ಯಜಿಸುತ್ತಿದ್ದಾರೆ ಅಥವಾ ದಾಖಲೆಗಳಲ್ಲಿ ನಾಮಕಾವಸ್ತೆ ನೋಂದಣಿಯಾಗಿ ತರಗತಿಗಳಿಗೆ ಹಾಜರಾಗುತ್ತಿಲ್ಲ. ಒಂದೊಮ್ಮೆ ವಿದ್ಯಾರ್ಥಿಗಳಿಂದ ತುಂಬಿ ತುಳುಕುತ್ತಿದ್ದ ತರಗತಿಗಳಲ್ಲಿ, ಅಧ್ಯಾಪಕರು ಐದಾರು ವಿದ್ಯಾರ್ಥಿಗಳಿಗೆ ಪಾಠ ಮಾಡುವ ಪರಿಸ್ಥಿತಿ ಬಂದೊದಗಿದೆ. ಬಹುತೇಕ ದೇಶದಾದ್ಯಂತ ಇದೇ ಚಿತ್ರಣವಿದೆ.

### ಸರ್ಕಾರಿ ಸಂಸ್ಥೆಗಳಲ್ಲಿ ಖಾಲಿ ಇರುವ ಸೀಟುಗಳು

ದೇಶದ ತುಂಬ ವಿದ್ಯಾರ್ಥಿಗಳ ದಾಖಲಾತಿ ಸ್ಥಿತಿಯೂ ಗಂಭೀರವಾಗಿದೆ. ಈ ವರ್ಷ ದೆಹಲಿ ವಿಶ್ವವಿದ್ಯಾಲಯದಲ್ಲಿ 5,000 ಸೀಟುಗಳು ಖಾಲಿ ಉಳಿದಿವೆ. ಕೇವಲ 5 ವರ್ಷಗಳ ಹಿಂದೆ ಶೇ.98-99 ಅಂಕ ಪಡೆದವರಿಗೂ ಅಲ್ಲಿ ಸೀಟು ದೊರಕುತ್ತಿರಲಿಲ್ಲ. ಮಹಿಳಾ ದಾಖಲಾತಿಯ ಪ್ರಮಾಣವು 2021ರಲ್ಲಿ ಶೇ.61 ರಷ್ಟಿದ್ದುದು ಈಗ ಶೇ.54 ಕ್ಕೆ ಇಳಿದಿದೆ. ಇತರ ರಾಜ್ಯಗಳಲ್ಲೂ ಕೂಡ ದಾಖಲಾತಿಯಲ್ಲಿ ಇಳಿಮುಖ ಕಂಡುಬಂದಿದೆ. ಪಶ್ಚಿಮ ಬಂಗಾಳದ ಸರಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳಲ್ಲಿ 9,36,215 ಸೀಟುಗಳು ಲಭ್ಯವಿದ್ದರೂ, ಶೇ.28.81ರಷ್ಟು ಅಂದರೆ ಕೇವಲ 2,69,777 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಕಳೆದ ವರ್ಷ 4,44,000 ಸೀಟುಗಳು ಭರ್ತಿಯಾಗಿದ್ದವು. ಒಡಿಶಾದಲ್ಲಿ 2024-25ನೇ ಸಾಲಿನಲ್ಲಿ 1.15 ಲಕ್ಷ ಸೀಟುಗಳು ಖಾಲಿ ಉಳಿದಿದ್ದವು.

### ಖಾಸಗಿ ವಲಯಕ್ಕೆ ಅಪಾರ ಲಾಭ

ಇದರ ಜೊತೆಯಲ್ಲಿ ಸಿಯುಇಟಿ (ಕೇಂದ್ರ ವಿವಿಗಳಿಗಾಗಿ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆ) ಯಂತಹ ದುಬಾರಿ ಕೋಚಿಂಗ್ ಅವಲಂಬಿತ ಪ್ರವೇಶ ಪರೀಕ್ಷೆಗಳ ಮೂಲಕ ಪದವಿ ಕೋರ್ಸ್‌ಗಳಿಗೆ ಸೀಟುಗಳನ್ನು ತುಂಬುವುದರಿಂದ ಅವು ಶ್ರೀಮಂತರಿಗೆ ಮಾತ್ರ ಲಭ್ಯವಾಗುವ ಪರಿಸ್ಥಿತಿಯು ನಿರ್ಮಾಣವಾಗಿದೆ. ಅದರಲ್ಲಿಯೂ ಸಹ CUET ಫಲಿತಾಂಶಗಳ ವಿಳಂಬವು ಪ್ರತಿಭಾವಂತ ವಿದ್ಯಾರ್ಥಿಗಳು ಅಶೋಕ ಅಥವಾ ಅಜೀಂ ಪ್ರೇಮ್‌ಜೀಯಂತಹ ದುಬಾರಿ ಖಾಸಗಿ ವಿಶ್ವವಿದ್ಯಾಲಯಗಳತ್ತ ಹೋಗುವಂತೆ ಮಾಡುತ್ತಿದೆ. ಈ ಮೂಲಕವೂ ಸಹ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣವು ವ್ಯವಸ್ಥಿತವಾಗಿ ನಡೆಯುತ್ತಿದೆ.

### ಪರ್ಯಾಯವಾಗಿ 'ಜನರ ಶಿಕ್ಷಣ ನೀತಿ'ಯ ಕರಡು

ಈ ಜನವಿರೋಧಿ ನಡೆಯ ವಿರುದ್ಧ ಧ್ವನಿ ಎತ್ತಬೇಕಾದ ಅನಿವಾರ್ಯತೆ ಈಗ ಎದುರಾಗಿದೆ. ಪ್ರೊ. ಇರ್ಫಾನ್ ಹಬೀಬ್, ಪ್ರೊ. ರೊಮಿಲಾ ಥಾಪರ್‌ರಂತಹ ಹೆಸರಾಂತ ಶಿಕ್ಷಣ ತಜ್ಞರ ಬೆಂಬಲದೊಂದಿಗೆ 'ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ' (AISEC) ಇಂತಹ ದಾಳಿಯ ವಿರುದ್ಧ ಹೋರಾಡಲು ಸಜ್ಜಾಗಿದೆ. ಸಾವಿರಾರು ಬೋಧಕರ ಸಲಹೆಗಳನ್ನು ಪಡೆದು, ಅವನ್ನೆಲ್ಲಾ ಕ್ರೋಢೀಕರಿಸಿ NEP 2020ಕ್ಕೆ ಪರ್ಯಾಯವಾಗಿ 'ಜನ ಶಿಕ್ಷಣ ನೀತಿ-2025' ಕರಡನ್ನು ಸಿದ್ಧಪಡಿಸಲಾಗಿತ್ತು. ಇದನ್ನು 2026ರ ಜನವರಿ 24ರಂದು ಬೆಂಗಳೂರಿನಲ್ಲಿ ನಡೆದ ಬೃಹತ್ 'ಜನ ಸಂಸತ್ತು' ಬೋಧಕರ ಸಮಾವೇಶದಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು. ಕರಡು ದಾಸ್ತಾವೇಜಿಗೆ ಬಂದಿದ್ದ ಹತ್ತು ಹಲವಾರು ತಿದ್ದುಪಡಿಗಳನ್ನು ವ್ಯಾಪಕವಾಗಿ ಚರ್ಚಿಸಲಾಯಿತು. NEP 2020ನ್ನು ಸಾರಸಗಟಾಗಿ ತಿರಸ್ಕರಿಸಿ 'ಜನ ಶಿಕ್ಷಣ ನೀತಿ'ಯನ್ನು ಜಾರಿಗೆ ತರಲು ಶೈಕ್ಷಣಿಕ ಸಮುದಾಯವು ಇನ್ನು ಮುಂದೆ ಹೋರಾಟವನ್ನು ಕೈಗೆತ್ತಿಕೊಳ್ಳಲಿದೆ.

## 10-ನಿಮಿಷ ಡೆಲಿವರಿ ಪದ್ಧತಿ ರದ್ದು : ಗಿಗ್ ಕಾರ್ಮಿಕರ ಯಶಸ್ವಿ ಹೋರಾಟ

ಆಹಾರ ಮತ್ತು ಇ-ಕಾಮರ್ಸ್ ವಿತರಣಾ ಕಾರ್ಮಿಕರ ಮೇಲೆ ಹೇರಲಾದ ಅಮಾನವೀಯ ಮತ್ತು ಅಪಾಯಕಾರಿ 10-ನಿಮಿಷ ಡೆಲಿವರಿ ಪದ್ಧತಿಯನ್ನು ರದ್ದು ಗೊಳಿಸಿರುವುದು ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್ ಯೂನಿಯನ್ (UFDPU) ನೇತೃತ್ವದಲ್ಲಿ ಕಾರ್ಮಿಕರು ರಾಷ್ಟ್ರವ್ಯಾಪಿ ಮುಷ್ಕರ ನಡೆಸಿರುವುದೇ ಕಾರಣ ಎಂಬುದು ಗಮನಾರ್ಹ. ಕಾರ್ಮಿಕರ ಪ್ರತಿರೋಧದ ಒತ್ತಡದಿಂದ, ಕೇಂದ್ರದ ಕಾರ್ಮಿಕ ಸಚಿವರು ಮಧ್ಯೆ ಪ್ರವೇಶಿಸಿ ಇ-ಕಾಮರ್ಸ್ ಕಂಪನಿ ಬ್ಲಿಂಕಿಟ್ ತನ್ನ 10-ನಿಮಿಷ ವಿತರಣಾ ಆದೇಶವನ್ನು ಹಿಂತೆಗೆದುಕೊಳ್ಳಲು ಆದೇಶ ನೀಡಿದ್ದಾರೆ. IFAT (ಇಂಡಿಯನ್ ಫೆಡರೇಶನ್ ಆಫ್ ಆಪ್-ಬೇಸ್ಡ್ ಟ್ರಾನ್ಸ್ ಪೋರ್ಟ್), ತೆಲಂಗಾಣ ಗಿಗ್ ಅಂಡ್ ಪ್ಲಾಟ್‌ಫಾರ್ಮ್ ವರ್ಕರ್ಸ್ ಯೂನಿಯನ್, ಕರ್ನಾಟಕ ಆಪ್-ಬೇಸ್ಡ್ ವರ್ಕರ್ಸ್ ಯೂನಿಯನ್‌ಗಳು ಡಿಸೆಂಬರ್ 25, ಮತ್ತು 31ರಂದು ರಾಷ್ಟ್ರವ್ಯಾಪಿ ಮುಷ್ಕರ ನಡೆಸಿದ ನೇರ ಫಲಿತಾಂಶವಿದು. ಈ ಮುಷ್ಕರವು ಅನಿಯಂತ್ರಿತ ಐಡಿ ನಿರ್ಬಂಧವನ್ನು ಕೊನೆಗೊಳಿಸುವುದು ಸಮಯಬದ್ಧ ಅತಿ-ವೇಗದ ವಿತರಣಾ ಮಾದರಿಗಳನ್ನು ರದ್ದುಗೊಳಿಸುವುದು ಮತ್ತು ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರಿಗೆ ಸಮಗ್ರ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಸೇರಿದಂತೆ ನಿರ್ಣಾಯಕ ಬೇಡಿಕೆಗಳನ್ನು ಎತ್ತಿತ್ತು.

## 'ಜನತಾ ಸಂಸತ್'ನ ಘೋಷವಾಕ್ಯ!

3ನೇ ಪುಟದಿಂದ

ಎಐಎಫ್‌ಯುಸಿಟಿಯುನ ಪ್ರಧಾನ ಕಾರ್ಯದರ್ಶಿಗಳಾದ **ಪ್ರೊ. ಅರುಣ್ ಕುಮಾರ್**‌ರವರು, ಟಿಪ್ಪು ಸುಲ್ತಾನ್, ಫೈಜ್ ಅಹ್ಮದ್ ಫೈಜ್ ಮುಂತಾದವರ ಬಗ್ಗೆ ನಡೆಯುತ್ತಿರುವ ದ್ವೇಷಭರಿತ ಅಪಪ್ರಚಾರವನ್ನು ತೀವ್ರವಾಗಿ ಖಂಡಿಸಿದರು. 'ಮಾಡು ಅಥವಾ ಮಡಿ' ಎಂಬ ಘೋಷಣೆ ಇಂದಿನ ಅಗತ್ಯ ಎಂದವರು ಹೇಳಿದರು.

ಮೇಘಾಲಯದಿಂದ ಬಂದಂಥ ಎನ್‌ಇಎಚ್‌ಯುವಿನ ಪ್ರಾಧ್ಯಾಪಕರುಗಳಾದ **ಪ್ರೊ. ಬಿ. ಮೈರ್‌ಬೋ** ಮತ್ತು **ಪ್ರೊ. ಶ್ರೀಕಾಂತ್** ಅವರು, ಅಲ್ಲಿ ಶಿಕ್ಷಣವಂಚಿತರಾದ ಬಡ, ಬುಡಕಟ್ಟು ಜನರ ದಯನೀಯ ಪರಿಸ್ಥಿತಿಯ ಬಗ್ಗೆ ವಿವರಿಸಿದರು; ಎನ್‌ಇಪಿಯಿಂದ ಅಲ್ಲಿಯ ಜನತೆಗೆ ಯಾವ ಪ್ರಯೋಜನವೂ ಇಲ್ಲ ಎಂದ ಅವರು, ಜನತಾ ಶಿಕ್ಷಣ ನೀತಿ ಅಲ್ಲಿಯವರ ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತದೆ ಎಂದರು.

"ಶಿಕ್ಷಣ ರಾಷ್ಟ್ರವೊಂದರ ಬೆನ್ನೆಲುಬು" ಎಂದು ತಮ್ಮ ಮಾತನ್ನು ಸಭೆಯ ಮುಂದಿರಿಸಿದ ಕೊಲ್ಕತ್ತಾ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ **ಪ್ರೊ. ಧ್ರುವಜ್ಯೋತಿ ಮುಖರ್ಜಿ**ಯವರು, "ಶಿಕ್ಷಣ, ಜೀವನ ಹೋರಾಟ ನಡೆಸಲು, ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳಲು ಶಕ್ತಿ ಕೊಡುತ್ತದೆ. ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರು ಕಂಡಿದ್ದ ಸಾರ್ವತ್ರಿಕ, ಪ್ರಜಾತಾಂತ್ರಿಕ, ಧರ್ಮನಿರಪೇಕ್ಷ, ವೈಜ್ಞಾನಿಕ ಶಿಕ್ಷಣದ ಕನಸು ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ಶಿಕ್ಷಣದ ವೆಚ್ಚ ಏರುಗತಿಯಲ್ಲಿದ್ದು, ಬಹುತೇಕರಿಗೆ ವಿದ್ಯೆಯ ಬಾಗಿಲು ಮುಚ್ಚಿಹೋಗಿದೆ. ಇಂಥಾ ಪರಿಸ್ಥಿತಿಯಲ್ಲಿ ಎನ್‌ಇಪಿ, ಪ್ರತಿಯೊಬ್ಬರೂ ಪಡೆಯಬೇಕಾದಂತಹ ಶಿಕ್ಷಣಕ್ಕೆ ಗೋರಿ ತೋಡುತ್ತದೆ. ಭಾರತೀಯ ಜ್ಞಾನ ವ್ಯವಸ್ಥೆಯು ಶಿಕ್ಷಣವನ್ನು ಫ್ಯಾಸಿವಾದೀಕರಣಗೊಳಿಸುತ್ತದೆ. ಹಾಗಾಗಿ, ಉಪೇಕ್ಷಿತ ಸಮುದಾಯದ ಮಕ್ಕಳನ್ನೂ ಸಶಕ್ತರನ್ನಾಗಿಸಲು, ಮಕ್ಕಳಲ್ಲಿ ಉನ್ನತ ಚಾರಿತ್ರ್ಯ ಬೆಳೆಸಲು ಜನತಾ ಶಿಕ್ಷಣ ನೀತಿಗಾಗಿ ಬುಡಮಟ್ಟದಿಂದ ಆಂದೋಲನ ಬೆಳೆಸಬೇಕು." ಎಂದು ಕರೆಯಿತ್ತರು.

**ಶ್ರೀ ದೇಬಶಿಶ್ ರಾಯ್**‌ರವರು ಮಂಡಿಸಿದ 'ಜನತಾ ಶಿಕ್ಷಣ ನೀತಿ'ಯನ್ನು ಅಳವಡಿಸುವ 'ಬೆಂಗಳೂರು ಗೊತ್ತುವಳಿ'ಯನ್ನು ಜನತಾ ಸಂಸತ್ ಒಮ್ಮತದಿಂದ ಅಂಗೀಕರಿಸಿತು.

ಒಟ್ಟಾರೆಯಾಗಿ, ಅಂದಿನ ಸಂಸತ್‌ನ ಕಾರ್ಯಕಲಾಪಗಳು ಅತ್ಯಂತ ಶಿಸ್ತಿನಿಂದ ನಡೆದು, ಜನತಾ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಸರ್ಕಾರವನ್ನು ಆಗ್ರಹಿಸುವ ಸಂಕಲ್ಪ ತೊಟ್ಟ ಜನತಾ ಸಂಸತ್ತಿನ ಸದಸ್ಯರು ಆ ದಿಕ್ಕಿನಲ್ಲಿ ಮುನ್ನಡೆದಿದ್ದಾರೆ.

# ಎಐಎಂಎಸ್‌ಎಸ್ ನೇತೃತ್ವದಲ್ಲಿ ರಾಜ್ಯಮಟ್ಟದ ಸಮಾವೇಶ

## ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳ ವಿರುದ್ಧ ಸಮರ ಹೂಡಲು ರಾಜ್ಯವ್ಯಾಪಿ ಆಂದೋಲನ

*"ಇದು ಆಗಲೇಬೇಕಾದ ಕಾರ್ಯ, ಈ ಹೋರಾಟದಲ್ಲಿ ನಿಮಗೆ ಯಶಸ್ಸು ಸಿಗಲಿ", "ನಾವು ಮಾಡಬೇಕಾದ ಕೆಲಸ, ನೀನು ಮಾಡ್ತಿದ್ದಿಯಾ ತಾಯಿ, ನಿನಗೆ ಕೃತಜ್ಞತೆ, ಇದೇ ನನ್ನ ಹಾರೈಕೆ", "ಇಂತಹ ಅನ್ಯಾಯದ ವಿರುದ್ಧ ಧ್ವನಿ ಎತ್ತಿದೀಯಾ, ಶಕ್ತಿವಂತಳಾಗು ಮಗಳೇ", "ಇಂತಹ ಒಂದು ಸಾಮಾಜಿಕ ಜವಾಬ್ದಾರಿ ಹೊತ್ತಿರುವ ನಿಮಗೆ ಸದಾ ನನ್ನ ಬೆಂಬಲವಿದೆ", "ಇಂತಹ ಅನ್ಯಾಯದ ಹಿಂದೆ ನಿಂತಿರುವ ಶತ್ರುವಿನ ಹುನ್ನಾರ ಸೋಲಿಸಲು ಒಂದು ಪಡೆಯೇ ಬೇಕು, ಇದಕ್ಕೆ ನೀನು ಸಿದ್ಧಳಾಗು ತಂಗಿ", "ಹೆಣ್ಣು ಮಕ್ಕಳ ಮೇಲೆ ಅನ್ಯಾಯ ಮಾಡುತ್ತಿರುವ ರಾಕ್ಷಸರನ್ನು ಬಿಡಬಾರದು ಇಂತಹ ಅನ್ಯಾಯದ ವಿರುದ್ಧ ಧ್ವನಿ ಎತ್ತಲು ನಾನು ನಿಮ್ಮ ಜೊತೆ ನಿಲ್ಲುತ್ತೇನಿ."*

ಮೇಲಿನ ಮಾತುಗಳು ಯಾವುದೇ ನಾಟಕದ ಸಂಭಾಷಣೆಯಲ್ಲ. ಹೌದು, ಮಹಿಳೆಯರು ಮತ್ತು ಮಕ್ಕಳ ಮೇಲೆ ಹೆಚ್ಚುತ್ತಿರುವ ನಾನಾ ರೀತಿಯ ದೌರ್ಜನ್ಯಗಳ ವಿರುದ್ಧ ಸಮರ ಹೂಡುವ ಆಶಯದೊಂದಿಗೆ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್), ನಾಲ್ಕು ತಿಂಗಳ ಕಾಲ ರಾಜ್ಯವ್ಯಾಪಿ ಸಭೆ, ಸಮಾವೇಶ, ಸಹಿ–ಸಂಗ್ರಹಣೆಯನ್ನು ಹಮ್ಮಿಕೊಂಡಿದ್ದ ಸಂದರ್ಭದಲ್ಲಿ ಜನತೆ ಹೃದಯಪೂರ್ವಕವಾಗಿ ಆಶೀರ್ವದಿಸಿದ, ಹೋರಾಟವನ್ನು ಬೆಂಬಲಿಸಿದ ಪರಿಯಿದು.

ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳು ದಿನದಿಂದ ದಿನಕ್ಕೆ ಹೆಚ್ಚುತ್ತಾ, ಅತ್ಯಂತ ವಿಕೃತ ರೂಪ ತಾಳುತ್ತ ಪರಾಕಾಷ್ಠೆಯನ್ನು ತಲುಪಿವೆ. ಇವುಗಳ ವಿರುದ್ಧ ದೇಶದಾದ್ಯಂತ ನಿರಂತರ ಹೋರಾಟವನ್ನು ಎಐಎಂಎಸ್‌ಎಸ್ ಯೋಜಿಸಿದೆ. ಇದರ ಭಾಗವಾಗಿ 07.01.2026 ರಂದು ಬೆಂಗಳೂರಿನ ಗಾಂಧಿ ಭವನದ ಬಾಪು ಸಭಾಭವನದಲ್ಲಿ ರಾಜ್ಯ ಮಟ್ಟದ ಮಹಿಳಾ ಸಮಾವೇಶವನ್ನು ಹಮ್ಮಿಕೊಂಡಿತ್ತು. ಅದು ಕೆಲವೊಂದು ವಿಚಾರಗೋಷ್ಠಿಗಳನ್ನೂ ಒಳಗೊಂಡಿತ್ತು.

ಸಮಾವೇಶದ ಉದ್ಘಾಟಕರಾಗಿ ಆಗಮಿಸಿದ್ದ ಹಿರಿಯ ರಂಗ ಕರ್ಮಿಗಳಾದ **ಪ್ರೊ. ರಾಮೇಶ್ವರಿ ವರ್ಮಾ**ರವರು ಮಾತನಾಡುತ್ತಾ, "ದೇಶಕ್ಕೆ ಸ್ವಾತಂತ್ರ್ಯ ಬಂದು 7 ದಶಕಗಳು ಕಳೆದಿವೆ. ಆದರೆ ನೋವಿನ ವಿಷಯವೆಂದರೆ, ದಿನನಿತ್ಯ ಮಹಿಳೆಯರ ಮೇಲೆ ಹಿಂಸೆ–ಅಗೌರವಗಳು ಹೆಚ್ಚುತ್ತಲೇ ಇವೆ. ಮಹಿಳಾ ಕಾಳಜಿಯಿರುವ ವ್ಯವಸ್ಥೆಯಿಲ್ಲ, ರಾಜಕೀಯ ಇಚ್ಛಾಶಕ್ತಿ ಇಲ್ಲ. ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ನಡೆದ ಮರ್ಯಾದಾಗೇಡು ಹತ್ಯೆ, ಹಾಸನದ ಪೆನ್ ಡ್ರೈವ್ ಪ್ರಕರಣ, ಉನ್ನಾವೋ ಮತ್ತು ಬಿಲ್ಕಿಸ್ ಬಾನು ಅಪರಾಧಿಗಳಿಗೆ ಮಾಲೆ ಹಾಕಿ, ಲಡ್ಡು ಹಂಚಿ ಸಂಭ್ರಮಿಸಿದ ನಡೆ, ವಿಕೃತಿಯ ಪರಾಕಾಷ್ಠೆಯ, ಮಾನವೀಯ ಮೌಲ್ಯಗಳ ಸಾವಿನ ಪ್ರತೀಕವಾಗಿವೆ. ಬಂಡವಾಳಶಾಹಿಗಳ ಲಾಭದಾಹ, ಯುದ್ಧೋಪಕರಣಗಳ ಮಾರಾಟದ ಹುನ್ನಾರ ಯುದ್ಧಗಳನ್ನು ಹುಟ್ಟುಹಾಕುತ್ತಿವೆ. ಯುದ್ಧಗಳಲ್ಲೂ ಮೊದಲ ಬಲಿಪಶುಗಳು ಮಹಿಳೆಯರು ಮತ್ತು ಮಕ್ಕಳು. ಇನ್ನೊಂದೆಡೆ ಮಾಧ್ಯಮಗಳು ಕ್ರೌರ್ಯ–ಹಿಂಸೆ ಅನಾಚಾರಗಳನ್ನು ವೈಭವೀಕರಿಸುತ್ತಿವೆ. ಅದರ ಪರಿಣಾಮವಾಗಿ ಹಾಡುಹಗಲೇ ಹೆಣ್ಣುಮಕ್ಕಳು ಬಲಿಯಾಗುತ್ತಿದ್ದಾರೆ. ಇವೆಲ್ಲವನ್ನು ತಡೆಗಟ್ಟಲು ಪ್ರಜ್ಞಾವಂತ ಜನಗಳು ಪ್ರತಿಭಟಿಸಬೇಕಿದೆ" ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ **ಕಾಮ್ರೇಡ್ ಕೆ. ಉಮಾ**ರವರು ಮಾತನಾಡುತ್ತಾ, "ದೇಶದ ನವೋದಯ ಚಳುವಳಿಯಲ್ಲಿ ಸ್ವಾತಂತ್ರ್ಯ, ಸಮಾನತೆ, ಮಹಿಳಾ ವಿಮೋಚನೆಯ ಘೋಷಣೆಗಳು ಮೊಳಗಿದವು. ವಿದ್ಯಾಸಾಗರ, ಸಾವಿತ್ರಿ ಬಾಯಿ ಫುಲೆ, ನೇತಾಜಿ, ಶರತ್‌ಚಂದ್ರ, ಕುದ್ಮುಲ್ ರಂಗರಾವ್ ಮೊದಲಾದವರು ಮಹಿಳೆಯರ ಪರ, ತುಳಿತಕ್ಕೊಳಗಾದವರ ಪರವಾಗಿ ಧ್ವನಿಯೆತ್ತಿದರು. ಆದರೆ ಆ ಮನೋಧರ್ಮ ಇಂದು ಕಾಣುತ್ತಿಲ್ಲ. ಏಕೆಂದರೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಊಳಿಗಮಾನ್ಯ ಮೌಲ್ಯಗಳು ಮತ್ತು ಸಾಮ್ರಾಜ್ಯಶಾಹಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದ ರಾಜಿಪರ ಪಂಥ ಮೇಲುಗೈ ಸಾಧಿಸಿತು. ಹಾಗಾಗಿ, ದೇಶದಲ್ಲಿ ಬ್ರಿಟಿಷರ ಬದಲಿಗೆ ರಾಷ್ಟ್ರೀಯ ಬಂಡವಾಳಶಾಹಿಗಳು ಅಧಿಕಾರಕ್ಕೆ ಬಂದರೇ ವಿನ: ದುಡಿಯುವ ಜನತೆಗೆ ಅಧಿಕಾರ ಸಿಗಲಿಲ್ಲ. ನೈಜ ಪ್ರಜಾತಾಂತ್ರಿಕ ಮೌಲ್ಯಗಳು, ಮಹಿಳಾ ವಿಮೋಚನೆಯ ಆಶಯಗಳು ಗಾಳಿಗೆ ತೂರಲ್ಪಟ್ಟವು. ಬಂಡವಾಳಶಾಹಿಗಳ ಆರ್ಥಿಕ ಲಾಭದ ಮನಸ್ಥಿತಿ ಹೆಣ್ಣುಮಕ್ಕಳನ್ನು ಸಹ ಒಂದು ಸರಕನ್ನಾಗಿ ಮಾಡಿದೆ. ಸಾಮಾಜಿಕ ವಾತಾವರಣ ಕಲುಷಿತಗೊಳ್ಳುತ್ತಿದೆ. ಹಾಗಾಗಿ, ಉನ್ನತ ನೀತಿ–ಸಂಸ್ಕೃತಿಯಾಧಾರದಲ್ಲಿ ಮಹಿಳೆಯರು ಸೈದ್ಧಾಂತಿಕವಾಗಿ, ಸಂಘಟನಾತ್ಮಕವಾಗಿ ಗಟ್ಟಿಯಾಗಬೇಕು, ಬಲಿಷ್ಠ ಮಹಿಳಾ ಚಳುವಳಿಗಳನ್ನು ಕಟ್ಟಬೇಕು. ಜೊತೆಗೆ, ತಮ್ಮ ನೈಜ ವಿಮುಕ್ತಿಯನ್ನು ಸಾಧಿಸಲು ಶೋಷಿತ ದುಡಿಯುವ ವರ್ಗದ ಜೊತೆಗೆ ಕೈಜೋಡಿಸಿ ಸಮಾನತೆಯ ಸಮ ಸಮಾಜವನ್ನು ಕಟ್ಟಲು ಹೋರಾಡಬೇಕು." ಎಂದು ಕರೆ ನೀಡಿದರು.



**ಸಮಾವೇಶದಲ್ಲಿ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿಗಳಾದ ಪ್ರೊ. ಸಬಿಹಾ ಭೂಮಿಗೌಡ ಮಾತನಾಡುತ್ತಿರುವುದು.**

### ಮೊದಲ ಗೋಷ್ಠಿ: ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳು ಹಾಗೂ ಸಮೂಹ ಮಾಧ್ಯಮಗಳ ಪ್ರಭಾವ

ಬೆಂಗಳೂರಿನ ನಿಮ್ಹಾನ್ಸ್‌ನ ಮನಶಾಸ್ತ್ರ ವಿಭಾಗದ ತಜ್ಞರಾದ **ಡಾ॥ ಶ್ರೀದೇವಿ ಕುಮಾರ್** ಅವರು, ಮಕ್ಕಳು ಮತ್ತು ಯುವಜನರು ಮೊಬೈಲ್ ಹಾಗೂ ಸಾಮಾಜಿಕ ಮಾಧ್ಯಮದ ಗೀಳಿಗೆ ಬಲಿಯಾಗುತ್ತಿರುವುದರ ಬಗ್ಗೆ ವಿಷಾದಿಸಿದರು. ಹೆಣ್ಣುಮಕ್ಕಳ ಮೇಲಿನ ಸೈಬರ್ ಪಾತಕಗಳು ಹೆಚ್ಚುತ್ತಿರುವುದರ ಬಗ್ಗೆ ವಿವರಿಸಿದ ಅವರು, ಅಂತರ್ಜಾಲದಿಂದ ಆಗುವಂತಹ ಸಮಸ್ಯೆಗಳ, ಪರಿಹಾರಗಳ ಕುರಿತು ಎಲ್ಲೆಡೆ ವ್ಯಾಪಕವಾಗಿ ಪ್ರಚಾರವಾಗಬೇಕು" ಎಂದರು.

ಎಐಎಂಎಸ್‌ಎಸ್‌ನ ರಾಷ್ಟ್ರೀಯ ಉಪಾಧ್ಯಕ್ಷರಾದ **ಡಾ॥ ಸುಧಾ ಕಾಮತ್**ರವರು, ಈ ಬಗ್ಗೆ ಮಾತನಾಡುತ್ತಾ, "ಸಮೂಹ ಮಾಧ್ಯಮದಲ್ಲಿ ಸತತವಾಗಿ ಬಿತ್ತರಗೊಳ್ಳುತ್ತಿರುವ ಅಶ್ಲೀಲತೆ, ನೀಲಿ ಚಿತ್ರಗಳು ವೀಕ್ಷಕರಲ್ಲಿ ಮೂಲ ಲೈಂಗಿಕ ಪ್ರವೃತ್ತಿಯನ್ನು ಬಡಿದೆಬ್ಬಿಸುತ್ತವೆ. ಉನ್ನತ ಸಂಸ್ಕೃತಿಯುಳ್ಳ ಯುವಜನರೇ ತಮ್ಮ ಶೋಷಣಾಯುತ ಆಳ್ವಿಕೆಯ ವಿರುದ್ಧ ಹೋರಾಡುವವರು ಎಂದು ಆಳುವ ಬಂಡವಾಳಶಾಹಿ ವರ್ಗ ಚೆನ್ನಾಗಿಯೇ ಬಲ್ಲದು; ಹಾಗಾಗಿ, ಅವರ ನೈತಿಕ ಬೆನ್ನೆಲುಬನ್ನು ಮುರಿಯಲು ಅವರನ್ನು ಅಶ್ಲೀಲತೆ, ಮದ್ಯಪಾನ–ಮಾದಕವಸ್ತು – ಇವುಗಳ ಗೀಳಿಗೆ ಬಲಿಯಾಗಿಸುತ್ತಿದೆ" ಎಂದು ವಿಶ್ಲೇಷಿಸುತ್ತಾ, "ಈ ಹುನ್ನಾರವನ್ನು ಬಯಲಿಗೆಳೆದು, ಅಶ್ಲೀಲತೆ, ಹಿಂಸೆ ಮುಂತಾದವುಗಳ ವಿರುದ್ಧ ಸಮರ ಸಾರಬೇಕಿದೆ, ಸಮಾಜದಲ್ಲಿ ಸಾಮಾಜಿಕ–ಸಾಂಸ್ಕೃತಿಕ ಆಂದೋಳನವೊಂದನ್ನು ಹರಿಬಿಡಬೇಕಿದೆ" ಎಂದು ಹೇಳಿದರು.

### ಎರಡನೇ ಗೋಷ್ಠಿ: ಉದ್ಯೋಗಸ್ಥ ಮಹಿಳೆಯರ ಮೇಲಿನ ದೌರ್ಜನ್ಯಗಳು ಮತ್ತು ಪರಿಹಾರ

ಅಕ್ಕ ಮಹಾದೇವಿ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳಾದ **ಪ್ರೊ. ಸಬಿಹಾ ಭೂಮಿಗೌಡ**ರವರು ಮಾತನಾಡುತ್ತಾ, "ಮಹಿಳೆಯರು ಮೌನವನ್ನು ಮೀರಬೇಕಾಗಿದೆ, ತಮ್ಮ ಮೇಲಾಗುತ್ತಿರುವ ಅನ್ಯಾಯವನ್ನು ಗಟ್ಟಿಯಾಗಿ, ಸ್ಪಷ್ಟವಾಗಿ ಹೇಳುವುದನ್ನು ಕಲಿಯಬೇಕು. ನಮ್ಮನ್ನು ದೇಶ, ಭಾಷೆ, ಜಾತಿ ಆಧಾರದ ಮೇಲೆ ಒಡೆಯಲಾಗಿದೆ. ಆದರೆ ನಾವೆಲ್ಲರೂ ಒಂದಾಗಿ ನಮ್ಮಲ್ಲಿ ಸೋದರಿತ್ವ ಬರಬೇಕು. ನೊಂದವರ ಬೆಂಬಲಕ್ಕೆ ನಿಲ್ಲಬೇಕು. ಶಾಲಾ–ಕಾಲೇಜು, ಕಚೇರಿ ಎಲ್ಲೆಡೆಯಲ್ಲೂ ಹೆಣ್ಣು ಮಕ್ಕಳು ಸಂಘಟಿತರಾಗಬೇಕು" ಎಂದು ಪ್ರೇರೇಪಿಸಿದರು.

ಚಲನಚಿತ್ರ ಗೀತ ರಚನಕಾರರಾದ **ಶ್ರೀ. ಕವಿರಾಜ್**ರವರು, ಮಹಿಳೆಯರು ತಮ್ಮ ಮೇಲೆ ಧರ್ಮಗಳು ಹೇರಿರುವ ನೀತಿ ಸಂಹಿತೆ–ಕಟ್ಟಳೆಗಳನ್ನು ತಿರಸ್ಕರಿಸಲು ಕರೆ ನೀಡಿದರು; ಹೆಣ್ಣುಮಕ್ಕಳು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು ಹೋರಾಟಗಳಲ್ಲಿ ಭಾಗಿಯಾಗುತ್ತಾ ಸಂಘಟಿತರಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಎಐಎಂಎಸ್‌ಎಸ್‌ನ ರಾಜ್ಯಾಧ್ಯಕ್ಷರಾದ **ಕಾಮ್ರೇಡ್ ಎಂ.ಎನ್. ಮಂಜುಳಾ**ರವರು, ಮಹಿಳೆಯರ ಮೇಲಾಗುತ್ತಿರುವ ಅಪರಾಧಗಳ ವಿವಿಧ ಆಯಾಮಗಳನ್ನು ತೆರೆದಿಟ್ಟರು. ನ್ಯಾಯಾಂಗ ಶಿಕ್ಷೆ ಕೊಡುವ ಬದಲು ಅಪರಾಧಿಗಳನ್ನು ಬಿಡುಗಡೆಗೊಳಿಸುವುದು, ಪೋಲೀಸರು ಅವರಿಗೆ ರಕ್ಷಣೆ ಕೊಡುವುದು, ಅವರಿಗೆ ರಾಜಕಾರಣಿಗಳ ಶ್ರೀರಕ್ಷೆ, ಇವುಗಳು ಪುರುಷ ಪ್ರಧಾನ ವ್ಯವಸ್ಥೆಯ ಮನೋಭಾವ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳಲ್ಲೂ ಹಾಸುಹೊಕ್ಕಿರುವ ದೃಷ್ಟಾಂತಗಳು ಎಂದು ವಿವರಿಸಿದರು.

ಸಮಾವೇಶದ ಗೋಷ್ಠಿಗಳನ್ನು ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿಗಳಾದ **ಕಾಮ್ರೇಡ್ ಶೋಭಾ ಎಸ್**. ಮತ್ತು ರಾಜ್ಯ ಉಪಾಧ್ಯಕ್ಷರಾದ **ಕಾಮ್ರೇಡ್ ಹರಿಣಿ** ನಿರ್ವಹಿಸಿದರು. ಪ್ರತಿಯೊಂದು ಗೋಷ್ಠಿಯಲ್ಲೂ ಮುಕ್ತ ಸಂವಾದ ನಡೆಯಿತು. ಈ ಸಂವಾದದಲ್ಲಿ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳಾಗಿ ಬಂದಿದ್ದ ನೂರಾರು ಮಹಿಳೆಯರು ಉತ್ಸಾಹದಿಂದ ಭಾಗವಹಿಸಿದ್ದರು. ಸಮಾವೇಶವು ವೆನೆಜುವೆಲಾ ಮೇಲೆ ಅಮೇರಿಕಾದ ಅಪ್ರಚೋದಿತ ದಾಳಿ ಖಂಡಿಸಿ ಗೊತ್ತುವಳಿಯನ್ನು ಅಂಗೀಕರಿಸಿತು.

# ಜನವರಿ 23, 2026 : ನೇತಾಜಿ ಜನ್ಮ ದಿನದ ನೆನಪು

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಸೇನಾನಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಅವರ ವಿಚಾರಧಾರೆ, ಜೀವನ ಹೋರಾಟಗಳನ್ನು ಬೆಳೆಯುವ ಮಕ್ಕಳ ನಡುವೆ ತೆಗೆದುಕೊಂಡು ಹೋಗಲು ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ಜನವರಿ 23 ರಂದು ಶಾಲಾ–ಕಾಲೇಜುಗಳಲ್ಲಿ, ಪಾರ್ಕ್‌ಗಳಲ್ಲಿ ಸಭೆಗಳನ್ನು ನಡೆಸಿತು. ಮಹೋನ್ನತ ವ್ಯಕ್ತಿಗಳ ಆದರ್ಶವು ವಿದ್ಯಾರ್ಥಿ–ಯುವಜನರ ಮುಂದೆ ಕಣ್ಮರೆಯಾಗುತ್ತಿರುವ, ಮತ್ತು ಶಿಕ್ಷಣದ ಸಮಸ್ಯೆಗಳು ಉಲ್ಬಣಗೊಳ್ಳುತ್ತಿರುವ ಸಂದರ್ಭದಲ್ಲಿ ಈ ದಿನಾಚರಣೆಯು ಬಹಳ ಅವಶ್ಯಕ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು 40,000 ಸರ್ಕಾರಿ ಶಾಲೆಗಳನ್ನು ಉಳಿಸುವ ಸಂಕಲ್ಪ ತೆಗೆದುಕೊಳ್ಳುವ ಮೂಲಕ ಅವರಿಗೆ ಗೌರವಪೂರ್ವಕ ನಮನ ಸಲ್ಲಿಸಿದರು.



ತುಮಕೂರು



ಹಾಸನ



ಬಳ್ಳಾರಿ



ಧಾರವಾಡ

# 2026ರ ಫೆಬ್ರವರಿ 12 - ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಿ

## ಕಾರ್ಮಿಕ ಸಂಘಟನೆಗಳ ರಾಜ್ಯ ಸಮಾವೇಶದ ಕರೆ!



ಸಮಾವೇಶದಲ್ಲಿ ಎಐಯುಟಿಯುಸಿ ಕಾರ್ಮಿಕ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಕೆ.ಸೋಮಶೇಖರ್ ಮಾತನಾಡುತ್ತಿರುವುದು.

ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುವ ನಾಲ್ಕು ಲೇಬರ್ ಕೋಡ್‌ಗಳನ್ನು ರದ್ದು ಪಡಿಸಬೇಕು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಾದ ಮನರೇಗಾವನ್ನು ಮುಂದುವರಿಸಬೇಕು, ವಿದ್ಯುತ್ ತಿದ್ದುಪಡಿ ಕಾಯ್ದೆ 2025 ಅನ್ನು ಹಿಂಪಡೆಯಬೇಕು ಮುಂತಾದ ಪ್ರಧಾನ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲು ಫೆಬ್ರವರಿ 12ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ನಡೆಸಲು ಕೇಂದ್ರ ಕಾರ್ಮಿಕ ಸಂಘಟನೆಗಳ ಒಕ್ಕೂಟ (ಜೆಸಿಟಿಯು) ಜನವರಿ 9ರಂದು ದೆಹಲಿಯಲ್ಲಿ ನಡೆದ ಸಮಾವೇಶದಲ್ಲಿ ಕರೆ ನೀಡಿತು.

ರಾಜ್ಯದಲ್ಲಿಯೂ ಮುಷ್ಕರವನ್ನು ಯಶಸ್ವಿಗೊಳಿಸಲು, ಸೇವಾ ಕಾರ್ಯಗಳನ್ನು ಮತ್ತು ಉತ್ಪಾದನೆಯನ್ನು ಸ್ಥಗಿತಗೊಳಿಸಿ ಸ್ವಯಂ ಪ್ರೇರಿತ ಬಂದ್ ನಡೆಸಲು ಪ್ರಚಾರಾಂದೋಲನ ನಡೆಸುವ ಉದ್ದೇಶದಿಂದ ಜನವರಿ 21ರಂದು ಬೆಂಗಳೂರಿನ ಟೌನ್ ಹಾಲ್‌ನಲ್ಲಿ ರಾಜ್ಯ ಸಮಾವೇಶವನ್ನು ಸಂಘಟಿಸಲಾಗಿತ್ತು. ಇಡೀ ಮನುಕುಲಕ್ಕೆ ನೆರವಾಗುವ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರ ಮೂಲಭೂತ ಹಕ್ಕುಗಳಿಗೆ ತಿಲಾಂಜಲಿ ನೀಡಲು ಹಿಂದೆ ಇದ್ದ 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ ನಾಲ್ಕು ಕಾರ್ಮಿಕ ಕೋಡ್‌ಗಳನ್ನು ನವೆಂಬರ್ 21ರಂದು ಕೇಂದ್ರ ಸರ್ಕಾರ ಜಾರಿ ಮಾಡಿದೆ. ಬಹಳ ಹಿಂದೆಯೇ ಲೋಕಸಭೆಯಲ್ಲಿ ಯಾವುದೇ ಚರ್ಚೆ ಇಲ್ಲದೆ ಈ ಸಂಹಿತೆಗಳು ಜಾರಿಯಾಗಿದ್ದರೂ ಅಂತಿಮ ಅಧಿಸೂಚನೆ ಹೊರಡಿಸಿರಲಿಲ್ಲ. ಇವುಗಳ ವಿರುದ್ಧ ಈ ಹಿಂದೆ ಐದು ಅಖಿಲ ಭಾರತ ಮುಷ್ಕರಗಳು ನಡೆದಿವೆ. ಇವ್ಯಾವುಗಳನ್ನೂ ಲೆಕ್ಕಿಸದೆ ಬಿಹಾರ್ ಚುನಾವಣೆಯ ಫಲಿತಾಂಶದ ನಂತರ ಇವುಗಳನ್ನು ಈಗ ಜಾರಿ ಮಾಡಲಾಗಿದೆ.

ವೇತನ ಸಂಹಿತೆ, ಸಾಮಾಜಿಕ ಭದ್ರತಾ ಸಂಹಿತೆ, ಕೈಗಾರಿಕಾ ಸಂಬಂಧ ಸಂಹಿತೆ, ಓಎಸ್‌ಎಚ್ ಸಂಹಿತೆಯ ವಿವಿಧ ಅಂಶಗಳನ್ನು ಗಮನಿಸಿದಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ಉತ್ಪಾದನೆ ಮತ್ತು ವ್ಯಾಪಾರವನ್ನು ಸುಗಮಗೊಳಿಸಿ ಕಾರ್ಖಾನೆಗಳಲ್ಲಿ ಯೂನಿಯನ್ ಮುಕ್ತ ವಾತಾವರಣವನ್ನು ಕಲ್ಪಿಸಲು, ಕೇಂದ್ರ ಸರ್ಕಾರ ಮುಂದಾಗಿರುವುದು ಸ್ಪಷ್ಟವಾಗಿದೆ. ಖಾಯಂ ಸ್ವರೂಪದ ದುಡಿತದ ಅವಧಿಗೆ ಬದಲಾಗಿ ನಿಗದಿತ ಅವಧಿ ಆಧಾರಿತ ಉದ್ಯೋಗವನ್ನು ಕಾನೂನುಬದ್ಧಗೊಳಿಸಲಾಗಿದೆ. ಕಾರ್ಮಿಕ ಸಂಘ ರಚನೆ ಮತ್ತು ನೋಂದಣಿಯಾದ ಸಂಘದ ನಿರ್ವಹಣೆಯನ್ನು ಕಠಿಣಗೊಳಿಸಲಾಗಿದೆ. ಕಾರ್ಮಿಕರ ಸಾಮೂಹಿಕ ಚೌಕಾಸಿಗೆ ಅಸ್ತ್ರವಾಗಿರುವ ಮುಷ್ಕರದ ಹಕ್ಕಿಗೆ ಭಾರಿ ಹೊಡೆತ ನೀಡಲಾಗಿದೆ. ದುಡಿತದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಳ ಮಾಡಿ ರಾತ್ರಿ ಪಾಳಿಗೆ ಯಾವುದೇ ಕಡಿವಾಣ ಇಲ್ಲದಾಗಿದೆ. ಒಟ್ಟಾರೆಯಾಗಿ ಕಾರ್ಮಿಕರ ಬದುಕು ಮುಂದಿನ ದಿನಗಳಲ್ಲಿ ಅತ್ಯಂತ ಅನಿಶ್ಚಿತತೆಯಿಂದ ಕೂಡಿದ್ದು ಮಾಲೀಕರಿಗೆ ಕೆಲಸದಿಂದ ವಜಾಗೊಳಿಸಲು ಎಲ್ಲ ರೀತಿಯ ಅಧಿಕಾರವನ್ನು ನೀಡಲಾಗಿದೆ.

ಈ ಕಾರ್ಮಿಕ ಸಂಹಿತೆಗಳ ಅನುಷ್ಠಾನ ಒಂದು ಅಭೂತಪೂರ್ವವಾದ ನಡೆ ಎಂದು ಕೇಂದ್ರ ಸರ್ಕಾರ ಜಾಹೀರಾತುಗಳ ಮೂಲಕ ಜನಸಾಮಾನ್ಯರನ್ನು ದಿಕ್ಕು ತಪ್ಪಿಸುತ್ತಿದೆ. ಆದರೆ ವಾಸ್ತವ ಪರಿಸ್ಥಿತಿಯೇ ಬೇರೆ ಇದೆ. ಮನರೇಗಾ ಕಾಯ್ದೆಯನ್ನು ವಿಕಸಿತ ಭಾರತ್ ರೋಜ್ಗಾರ್ ಮತ್ತು ಅಜೀವಿಕ ಮಿಷನ್ ಕಾಯ್ದೆ 2025 ಎಂದು ಬದಲಾಯಿಸಿ ಹಣಕಾಸಿನ ಹೊರೆಯನ್ನು ಕೇಂದ್ರ ಸರ್ಕಾರ ಶೇಕಡ 60 ರಷ್ಟು ಮತ್ತು ರಾಜ್ಯ ಸರ್ಕಾರ ಶೇಕಡ 40 ರಷ್ಟು ಭರಿಸಬೇಕು ಎಂದು ಮಾರ್ಪಾಟು ಮಾಡಲಾಗಿದೆ. ಇದರ ಕುರಿತು ಯಾವುದೇ ರಾಜ್ಯದ ಜೊತೆಯಲ್ಲಿ ಚರ್ಚಿಸಿಲ್ಲ. ಗ್ರಾಮೀಣ ಕಾಮಗಾರಿ ಕೈಗೊಳ್ಳಲು ಅನೇಕ ಷರತ್ತುಗಳನ್ನು ವಿಧಿಸಲಾಗಿದೆ. ಪಂಚಾಯಿತಿಗಳ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿದೆ. ಇವೆಲ್ಲವುಗಳಿಂದಾಗಿ ಗ್ರಾಮೀಣ ಕೂಲಿಕಾರರಿಗೆ ಉದ್ಯೋಗದ ಬದಲು ನಿರುದ್ಯೋಗದ ಖಾತ್ರಿ ಉಂಟಾಗಿ ಮತ್ತೆ ಗುಳೇ ಹೋಗುವುದು ಹೆಚ್ಚುತ್ತದೆ. ಈ ಗದಾ ಪ್ರಹಾರವನ್ನು ನಾವಿಂದು ಹಿಮ್ಮೆಟ್ಟಿಸಬೇಕಾಗಿದೆ.

ಈ ಎಲ್ಲಾ ಅಂಶಗಳನ್ನು ಪರಿಣಾಮಕಾರಿಯಾಗಿ ಜನರ ಬಳಿಗೆ ಕೊಂಡೊಯ್ಯುವ ಉದ್ದೇಶದಿಂದ ಬೆಂಗಳೂರಿನಲ್ಲಿ ರಾಜ್ಯ ಸಮಾವೇಶ ನಡೆಯಿತು. ವಿವಿಧ ಕೇಂದ್ರ ಕಾರ್ಮಿಕ ಸಂಘಟನೆ ಮುಖಂಡರು ಮತ್ತು ಸಂಯುಕ್ತ ಹೋರಾಟ–ಕರ್ನಾಟಕದ ಇನ್ನಿತರ ಮುಖಂಡರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ನಮ್ಮ ಕಾರ್ಮಿಕ ಸಂಘಟನೆ ಎಐಯುಟಿಯುಸಿಯ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಕೆ. ಸೋಮಶೇಖರ್‌ರವರು ಮಾತನಾಡಿ ಬಂಡವಾಳಶಾಹಿಗಳ ಪರವಾದ ಈ ನೀತಿಗಳ ವಿರುದ್ಧ ಹೋರಾಡಲು ಕರೆ ನೀಡಿದರು. ಉಪಾಧ್ಯಕ್ಷರಾದ ಕಾಮ್ರೇಡ್. ಡಿ ನಾಗಲಕ್ಷ್ಮಿ ಅವರು ಅಧ್ಯಕ್ಷೀಯ ಮಂಡಳಿ ಪರವಾಗಿ ಮಾತನಾಡಿದರು.

ಮೂರು ಸಾವಿರಕ್ಕೂ ಹೆಚ್ಚು ಕಾರ್ಮಿಕರು ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದರು.


## ಇರಾನ್‌ನ ಸರ್ವಾಧಿಕಾರಿ ಆಡಳಿತದ ವಿರುದ್ಧ ಹೋರಾಡುತ್ತಿರುವ ಜನತೆಗೆ ಎಸ್‌ಯುಸಿಐ (ಕಮ್ಯುನಿಸ್ಟ್) ಸಂಪೂರ್ಣ ಬೆಂಬಲ

ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಅವರು ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ:

"ತೀವ್ರ ಆರ್ಥಿಕ ಶೋಷಣೆ ಮತ್ತು ರಾಜಕೀಯ ದಮನದ ವಿರುದ್ಧ ಧೈರ್ಯದಿಂದ ಹೋರಾಡುತ್ತಿರುವ ಇರಾನ್‌ನ ಧೀರ ಜನರ ಮೇಲೆ ಅಲ್ಲಿನ ಸರ್ವಾಧಿಕಾರಿ ಆಡಳಿತಗಾರರು ಎಸಗುತ್ತಿರುವ ಕ್ರೂರ ದೌರ್ಜನ್ಯಗಳನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ದಬ್ಬಾಳಿಕೆಯ ಇಸ್ಲಾಮಿಕ್ ಸರ್ವಾಧಿಕಾರಿ ಆಡಳಿತದ ವಿರುದ್ಧ ವೀರಾವೇಶದ ಚಳುವಳಿಯನ್ನು ನಡೆಸುತ್ತಿರುವ ಇರಾನ್‌ನ ಧೀಮಂತ ಜನತೆಗೆ ನಾವು ನಮ್ಮ ಸಂಪೂರ್ಣ ಬೆಂಬಲ ಮತ್ತು ಸಹಮತವನ್ನು ವ್ಯಕ್ತಪಡಿಸುತ್ತೇವೆ. ಅದೇ ಸಮಯದಲ್ಲಿ, ಯಾವುದೇ ನೆಪದಲ್ಲಿ ಇರಾನ್‌ನ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು ಮತ್ತು ಇರಾನ್‌ನ ಭವಿಷ್ಯವನ್ನು ನಿರ್ಧರಿಸಲು ಅಲ್ಲಿನ ಹೋರಾಟಗಾರರಿಗೇ ಬಿಡಬೇಕು ಎಂದು ನಾವು ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಎಚ್ಚರಿಕೆ ನೀಡುತ್ತೇವೆ.

ಹೋರಾಟನಿರತ ಇರಾನ್ ಜನರ ಪರವಾಗಿ ನಿಲ್ಲಬೇಕೆಂದು ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಇರಾನ್‌ನ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡದಂತೆ ತಡೆಯಬೇಕೆಂದು ನಾವು ವಿಶ್ವದ ಜನತೆಗೆ ಮನವಿ ಮಾಡುತ್ತೇವೆ.

ಈ ಮಹಾನ್ ಐತಿಹಾಸಿಕ ಚಳವಳಿಯ ಸಂದರ್ಭದಲ್ಲಿ ಹುತಾತ್ಮರಾದವರ ಕುಟುಂಬಗಳಿಗೆ ನಾವು ನಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತೇವೆ. ಪ್ರಜಾತಾಂತ್ರಿಕ ಹಕ್ಕುಗಳ ಮರುಸ್ಥಾಪನೆಯ ಮತ್ತು ಕಡುಬಡತನದ ಆರ್ಥಿಕ ಶೋಷಣೆಯನ್ನು ಕೊನೆಗಾಣಿಸುವ ಉದ್ದೇಶಕ್ಕಾಗಿ ಅವರು ತೋರಿದ ತ್ಯಾಗದ ಮನೋಭಾವಕ್ಕೆ ನಮ್ಮ ನಮನಗಳು. ಇರಾನ್‌ನ ಧೀರ ಜನತೆ ಚಿರಾಯುವಾಗಲಿ."



## ಶ್ರದ್ಧಾಂಜಲಿ
## ಡಾ. ಮಾಧವ ಗಾಡ್ಗೀಳ್

**ಖ್ಯಾತ ಪರಿಸರ ವಿಜ್ಞಾನಿಗಳಾದ ಮಾಧವ ಗಾಡ್ಗೀಳ್ ನಿಧನಕ್ಕೆ ಎಐಜೆಎಎಸ್‌ಸಿ ಸಂಘಟನೆಯ ಅಖಿಲ ಭಾರತ ಅಧ್ಯಕ್ಷರಾದ ಶ್ರೀ ಶಂಭುನಾಥ್ ನಾಯಕ್ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿಸಂಬರ್ ಮುರಾ, ಶೋಕ ವ್ಯಕ್ತಪಡಿಸಿ ಹೇಳಿಕೆಯನ್ನು ನೀಡಿದ್ದಾರೆ:**

'ಭಾರತೀಯ ಪರಿಸರ ವಿಜ್ಞಾನದ ದಿಗ್ಗಜ ಮತ್ತು ಪರಿಸರ ಸಂರಕ್ಷಣೆಯ ನಿರ್ಭೀತ ಹೋರಾಟಗಾರರಾದ ಡಾ. ಮಾಧವ ಗಾಡ್ಗೀಳ್ ಅವರ ನಿಧನದ ಸುದ್ದಿ ಕೇಳಿ ಅಖಿಲ ಭಾರತ ಜನ ಅಧಿಕಾರ ಸುರಕ್ಷಾ ಸಮಿತಿಯು (AIJASC – ಎಐಜೆಎಎಸ್‌ಸಿ) (ಬುಡಕಟ್ಟು ಜನಾಂಗದವರು, ಸಾಂಪ್ರದಾಯಿಕ ಅರಣ್ಯವಾಸಿಗಳು ಮತ್ತು ಕಷ್ಟಪಟ್ಟು ದುಡಿಯುವ ಬಡ ಜನರ ಹಕ್ಕುಗಳ ರಕ್ಷಣಾ ಸಮಿತಿ) ಅತೀವ ದು:ಖ ವ್ಯಕ್ತಪಡಿಸುತ್ತದೆ. ಬೆಂಗಳೂರಿನ ಐಐಎಸ್‌ಸಿ (IISc) ಯಲ್ಲಿ ಪರಿಸರ ವಿಜ್ಞಾನ ಕೇಂದ್ರದ ಸ್ಥಾಪಕ ಹುದ್ದೆಯಲ್ಲಿನ ಪ್ರವರ್ತಕ ಕಾರ್ಯಚಟುವಟಿಕೆಗಳಿಂದ ಹಿಡಿದು, ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿಯ (WGEEP) ಮಹತ್ವದ ಅಧ್ಯಕ್ಷ ಹುದ್ದೆಯವರೆಗೆ, ಡಾ. ಗಾಡ್ಗೀಳ್ ಅವರು ಸ್ಥಳೀಯ ಸಮುದಾಯಗಳು ಮತ್ತು ಸಾಮಾಜಿಕ ನ್ಯಾಯವನ್ನು ಕೇಂದ್ರವಾಗಿಟ್ಟುಕೊಂಡು ಸಂರಕ್ಷಣೆಯ ವ್ಯಾಖ್ಯಾನವನ್ನೇ ಬದಲಿಸಿದರು. ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಅವರೊಬ್ಬ ಕೇವಲ ವಿಜ್ಞಾನಿಯಷ್ಟೇ ಅಲ್ಲ; ಕಠಿಣ ಶೈಕ್ಷಣಿಕ ಸಂಶೋಧನೆ ಮತ್ತು ತಳಮಟ್ಟದ ಸಕ್ರಿಯ ಹೋರಾಟದ ನಡುವೆ ಕೊಂಡಿಯಾಗಿದ್ದ ಅವರು, "ಜನಸಾಮಾನ್ಯರ ವಿದ್ವಾಂಸ"ರಾಗಿದ್ದರು. ಪಶ್ಚಿಮ ಘಟ್ಟಗಳಿಗಾಗಿ ಅವರು ನಡೆಸಿದ ಅವಿರತ ಹೋರಾಟವು ಮುಂದುವರೆಯುತ್ತಾ, ಮಾನವ ಅಭಿವೃದ್ಧಿ ಮತ್ತು ಪರಿಸರ ಸಮತೋಲನದ ನಡುವೆ ಸಮನ್ವಯ ಸಾಧಿಸಲು ಶ್ರಮಿಸುವ ಯಾರಿಗಾದರೂ ಒಂದು ಪ್ರಮುಖ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುತ್ತದೆ.

ಪರಿಸರ ಮತ್ತು ಅರಣ್ಯವಾಸಿಗಳನ್ನು ಉಳಿಸಲು 2025ರ ಜನವರಿ 5 ರಂದು ಎಐಜೆಎಎಸ್‌ಸಿ ಆಯೋಜಿಸಿದ್ದ ಸಮಾವೇಶಕ್ಕೆ ಅವರು ನೀಡಿದ್ದ ಧ್ವನಿಪೂರ್ಣ ಬೆಂಬಲವನ್ನು ನಾವು ಪ್ರೀತಿಯಿಂದ ನೆನೆಯುತ್ತೇವೆ. ಅವರ ನಿಧನದಿಂದ ಭಾರತದ ಆದಿವಾಸಿಗಳು ಮತ್ತು ಸಾಂಪ್ರದಾಯಿಕ ಅರಣ್ಯವಾಸಿಗಳು ನಿಜವಾದ ಸ್ನೇಹಿತರೊಬ್ಬರನ್ನು ಕಳೆದುಕೊಂಡಿದ್ದಾರೆ. ಅವರ ಕುಟುಂಬ ಮತ್ತು ಸ್ನೇಹಿತರಿಗೆ ನಾವು ನಮ್ಮ ಹೃದಯಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತೇವೆ.

## ಪಶ್ಚಿಮ ಬಂಗಾಲ: ಎಚ್ಚೆತ್ತ ಮಹಿಳೆಯರ ಪ್ರತಿಜ್ಞಾ ಜಾಥಾ

29.12.2025: ಅಂದು ಕೊಲ್ಕತ್ತೆಯ ಕಾಲೇಜು ಚೌಕಕ್ಕೆ ನಾಲ್ಕೂ ದಿಕ್ಕುಗಳಿಂದ ಪ್ರವಾಹೋಪಾದಿಯಲ್ಲಿ ಮಹಿಳಾ ಸಾಗರವೇ ಹರಿದು ಬಂತು. ಬೆಟ್ಟಗಳ ಮೇಲಿಂದ, ನದಿಗಳನ್ನು ದಾಟಿ, ಅರಣ್ಯವನ್ನು ಭೇದಿಸಿ ಪಶ್ಚಿಮ ಬಂಗಾಲದ ಎಲ್ಲೆಡೆಯಿಂದ ಈ ಸಮರಶೀಲ ಮಹಿಳಾ ಪಡೆ ಧಾವಿಸಿ ಬಂತು. ಅಲ್ಲಿ ಅವರ ಘೋಷಣೆಯ ಹೊರತಾಗಿ ಎಲ್ಲೆಡೆ ನಿಶ್ಶಬ್ದವೇ! ಅಬ್ಬಾ, ಅದೆಂತಹ ಸೊಬಗಿನ ದೃಶ್ಯ!! ಹೆಣ್ಣುಮಕ್ಕಳ ಮೇಲಿನ ನಿರಂತರ ದೌರ್ಜನ್ಯಕ್ಕೆ ತಡೆ ಹಾಕುವ ದೃಢ ಸಂಕಲ್ಪ ತೊಟ್ಟು, ಶ್ವೇತವರ್ಣದ ಪತಾಕೆಗಳನ್ನು ಕೈಯಲ್ಲಿ ಹಿಡಿದ, ಬಿಳಿಯುಡುಪು, ಬಿಳಿ ಟೋಪಿ ಧರಿಸಿ ಶಿಸ್ತುಬದ್ಧವಾಗಿ ಮೆರವಣಿಗೆಯಲ್ಲಿ ನಡೆದು ಬಂದಂತಹ ಈ ನಾರಿಯರ ಮುಗಿಲುಮುಟ್ಟುವ ಘೋಷಣೆ ಎಲ್ಲೆಲ್ಲೂ ಅನುರಣಿಸುತ್ತಿತ್ತು. ದೇಶದಲ್ಲಿ ಪ್ರಸಕ್ತವಾಗಿ ಕವಿದಿರುವ ಕಾರ್ಮೋಡಗಳ ನಡುವೆ ಇದೊಂದು ಉಜ್ವಲ ಬೆಳಕಿನಂತೆ ಗೋಚರಿಸಿತು.

ಹಸುಗೂಸುಗಳಿಂದ ಹಿಡಿದು ವೃದ್ಧೆಯರ ಮೇಲೆ ಅನೇಕಾನೇಕ ವಿಕೃತ ಪಾತಕಗಳು ಘಟಿಸುತ್ತಿರುವ ಈ ಸಂದರ್ಭದಲ್ಲಿ ನಮ್ಮ ಮುಂದಳಗಳಾದ ಎಐಎಂಎಸ್‌ಎಸ್, ಎಐಡಿವೈಓ ಮತ್ತು ಎಐಡಿಎಸ್‌ಓ ಸಂಘಟನೆಗಳ ನೇತೃತ್ವದಲ್ಲಿ ಈ ಜಾಥಾ ಸಂಘಟಿತವಾಗಿತ್ತು; ಎಲ್ಲಾ ಸ್ತರದ ಮಹಿಳೆಯರು ಇದರಲ್ಲಿ ಸಾಗಿಬಂದು, ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಹಬ್ಬುತ್ತಾ ಸಾಮಾಜಿಕ–ಸಾಂಸ್ಕೃತಿಕ ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ಅಶ್ಲೀಲತೆ, ಹಿಂಸೆಗಳ ವಿರುದ್ಧ, ಮದ್ಯಪಾನ–ಮಾದಕ ವಸ್ತು ದುಶ್ಚಟಗಳ ವಿರುದ್ಧ, ರಾಜಕೀಯದ ಪಾತಕೀಕರಣದ ವಿರುದ್ಧ, ಮಹಿಳೆಯರ ಮೇಲಿನ ಅಪರಾಧಿಗಳಿಗೆ ನಿದರ್ಶನೀಯ ಶಿಕ್ಷೆ ಖಾತ್ರಿಪಡಿಸಲು ಆಗ್ರಹಿಸಿದರು.



## ಪ್ರಧಾನ ಮಂತ್ರಿ ಧನ–ಧಾನ್ಯ ಕೃಷಿ ಯೋಜನೆ – ನಯವಂಚಕ ಪ್ರಸ್ತಾವನೆ

# ರೈತರಿಗಿಲ್ಲ ಧನ, ಗ್ರಾಹಕರಿಗಿಲ್ಲ ಧಾನ್ಯ, ಕಾರ್ಪೊರೇಟ್ ಕಂಪನಿಗಳಿಗೆ ಸುಗ್ಗಿ

ಎಲ್ಲಾ ದಿಕ್ಕುಗಳಿಂದಲೂ ರೈತರು ಆಕ್ರಮಣಕ್ಕೊಳಗಾಗಿರುವಾಗ, 'ಇದು ಅವರಿಗೆ ಸಂಜೀವಿನಿ' ಎಂದು ಬಣ್ಣಿಸುತ್ತಾ ಕಳೆದ ಅಕ್ಟೋಬರ್ 25ರಂದು 'ಪ್ರಧಾನ ಮಂತ್ರಿ ಧನ–ಧಾನ್ಯ ಕೃಷಿ ಯೋಜನೆಯನ್ನು (ಪಿಎಂಡಿಡಿಕೆವೈ)' ಪ್ರಧಾನಿ ಮೋದಿ ಉದ್ಘಾಟಿಸಿದ್ದಾರೆ. ಕನಿಷ್ಠ ಆದಾಯಕ್ಕೂ ಸಹ ಪರದಾಡುತ್ತಿರುವ ರೈತರು ಭತ್ತ, ಗೋಧಿ ಮುಂತಾದ ಬೆಳೆಗಳನ್ನು ಬೆಳೆಯುವುದನ್ನು ಬಿಟ್ಟು ರಫ್ತು ಮಾಡಬಹುದಾಗಿರುವ ಬೆಳೆಗಳ ಕಡೆಗೆ ಗಮನ ಹರಿಸಬೇಕು ಎಂದು ಸಲಹೆ ನೀಡಿದ್ದಾರೆ. 'ರಫ್ತಾಗುವ ಉತ್ಪನ್ನಗಳಲ್ಲಿ ಲಾಭವಿದೆ' ಎನ್ನುವ ಸಾಮಾನ್ಯ ನಂಬಿಕೆಯು ಪ್ರಚಲಿತವಾಗಿದೆ. ಅದರಂತೆ ಈ ಯೋಜನೆಯು ಸೂಕ್ತ ಬೆಲೆ ಅಲಭ್ಯತೆ, ಕೃಷಿ ಒಳಸುರಿ ವೆಚ್ಚದ ಏರಿಕೆ, ಅತಿವೃಷ್ಟಿ–ಅನಾವೃಷ್ಟಿ, ಕಳಪೆ ಬೀಜ, ಗೊಬ್ಬರ, ಬೆಳೆ ಹಾನಿ ಇತ್ಯಾದಿಗಳಿಗೆ ಸಿಲುಕಿ ತೀವ್ರ ಸಂಕಷ್ಟದಲ್ಲಿರುವ ಸಣ್ಣ, ಮಧ್ಯಮ ಹಾಗೂ ಬಡ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುತ್ತದೆಯೇ ಎನ್ನುವುದೇ ಪ್ರಮುಖ ಪ್ರಶ್ನೆ. ಜೊತೆಗೆ, ಸಾಮಾನ್ಯ ಗ್ರಾಹಕರಿಗೆ ಇದರಿಂದ ಅನುಕೂಲವಾಗುತ್ತದೆಯೇ? 'ರೈತರ ಆದಾಯ ದ್ವಿಗುಣಗೊಳ್ಳುತ್ತದೆ' ಎಂಬ ಪ್ರಧಾನಿ ಭರವಸೆಯು ಈ ಯೋಜನೆಯಿಂದ ಈಗಲಾದರೂ ಸಾಕಾರವಾಗುತ್ತದೆಯೇ?

### ಪಿಎಂಡಿಡಿಕೆವೈ ಯೋಜನೆ ಏನು

ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಹೊರಡಿಸಿರುವ ಕಾರ್ಯಸೂಚಿಯ ಅನ್ವಯ, ಕಡಿಮೆ ಉತ್ಪಾದಕತೆ, ಅಸಮರ್ಪಕ ಮೂಲ ಸೌಕರ್ಯಗಳು ಮತ್ತು ಸಾಲ ನೀಡಿಕೆ ಇತ್ಯಾದಿಗಳ ವಿಷಯದಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಪಿಎಂಡಿಡಿಕೆವೈ ಯೋಜನೆಯನ್ನು ಆರಂಭಿಸಲಾಗಿದೆ; ಈಗಿರುವ ಎಲ್ಲಾ ಕೃಷಿ ಯೋಜನೆಗಳನ್ನು ಒಟ್ಟುಗೂಡಿಸಿ, ವಿಶೇಷ ಕ್ರಮಗಳನ್ನು ಅಳವಡಿಸಿಕೊಂಡು, ಯೋಜನೆಯ ಆರಂಭದಲ್ಲಿ 100 ಆಯ್ದ ಜಿಲ್ಲೆಗಳಲ್ಲಿ ಸುಸ್ಥಿರವಾದ ಮತ್ತು ಉತ್ತಮ ಉತ್ಪಾದಕತೆಯಿರುವ ಕೃಷಿ ವಾತಾವರಣವನ್ನು ಸೃಷ್ಟಿಸುವ ಗುರಿಯಿದೆ; ಪ್ರತಿ ರಾಜ್ಯದ ಒಂದಾದರೂ ಜಿಲ್ಲೆಯನ್ನು ಆಯ್ಕೆ ಮಾಡಲಾಗುತ್ತದೆ; ಗ್ರಾಮೀಣ ಕೃಷಿಗೆ ಮರುಜೀವ ನೀಡಲಾಗುತ್ತದೆ; ರೈತರ ಆದಾಯವನ್ನು ಹೆಚ್ಚಿಸುವುದು ಮತ್ತು ಆ ಮೂಲಕ ದೀರ್ಘಕಾಲೀನ ಸುಸ್ಥಿರತೆಯನ್ನು ಮತ್ತು ಆಹಾರ ಭದ್ರತೆಯನ್ನು ಖಚಿತಪಡಿಸಲಾಗುತ್ತದೆ ಎಂದು ಪಿಎಂಡಿಡಿಕೆವೈ ಯೋಜನೆಯ ಕುರಿತು ಹೇಳಿಕೊಳ್ಳಲಾಗಿದೆ. ಪಿಎಂಡಿಡಿಕೆವೈ ಯೋಜನೆಯಡಿ 1.7 ಕೋಟಿ ರೈತರಿಗೆ ಸಹಾಯ ನೀಡಲು 6 ವರ್ಷಗಳ (2025–26 ರಿಂದ 2030–31) ಕಾಲಾವಧಿಗೆ ವಾರ್ಷಿಕ ರೂ.24,000 ಕೋಟಿಯ ಪ್ರಮಾಣದಲ್ಲಿ, ಒಟ್ಟು 1.44 ಲಕ್ಷ ಕೋಟಿ ಹಣವನ್ನು ಮೀಸಲಿಡಲಾಗಿದೆ. ದೇಶದ ಕೃಷಿಕರಲ್ಲಿ ಶೇ.86ರಷ್ಟಿರುವ, ಸರಾಸರಿ 2 ಹೆಕ್ಟೇರ್ ಭೂಮಿ ಒಡೆತನ ಹೊಂದಿರುವ ಸಣ್ಣ ಮತ್ತು ಅಂಚಿನ ರೈತರನ್ನು ಗುರಿಯಾಗಿಟ್ಟುಕೊಂಡು ಇದನ್ನು ರೂಪಿಸಲಾಗಿದೆ ಎಂದು ಬಣ್ಣಿಸುತ್ತಿದ್ದಾರೆ. ಕೇಂದ್ರ ಸರ್ಕಾರವು ರಾಜ್ಯಗಳ ಸಹಭಾಗಿತ್ವದಲ್ಲಿ ಈ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ. ಈ ಯೋಜನೆಯ ಒಳಗೆ ಬರಬಹುದಾದ ಜಿಲ್ಲೆಗಳನ್ನು ನಿವ್ವಳ ಬೆಳೆ ಬೆಳೆಯುವ ಪ್ರದೇಶದ ಪಾಲು ಮತ್ತು ವ್ಯವಸಾಯ ಮಾಡುತ್ತಿರುವ ಹಿಡುವಳಿಗಳ ಸಂಖ್ಯೆಗಳನ್ನು ಆಧರಿಸಿ ಆಯ್ಕೆ ಮಾಡಲಾಗುವುದು.

### ಪಿಎಂಡಿಡಿಕೆವೈ ಹೇಗೆ ಕೆಲಸ ಮಾಡುತ್ತದೆ

ಈ ಯೋಜನೆಯ ಮುಖ್ಯ ಘೋಷಿತ ಉದ್ದೇಶವೆಂದರೆ, 1) ಕೃಷಿ ಉತ್ಪಾದಕತೆಯ ಹೆಚ್ಚಳ, 2) ಬೆಳೆ ವೈವಿಧ್ಯತೆಯ ರಕ್ಷಣೆ ಮತ್ತು ಸುಸ್ಥಿರ ಕೃಷಿ ಪದ್ಧತಿಗಳ ಅಳವಡಿಕೆ, 3) ಪಂಚಾಯಿತಿ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಟಾವಿನ ನಂತರದ ದಾಸ್ತಾನಿನ ಪ್ರಮಾಣದಲ್ಲಿ ಏರಿಕೆಯ ಖಾತ್ರಿ, 4) ನೀರಾವರಿ ಸೌಲಭ್ಯಗಳ ಅಭಿವೃದ್ಧಿ ಮತ್ತು 5) ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲ ಸೌಲಭ್ಯವನ್ನು ಒದಗಿಸುವುದಾಗಿದೆ. ವಿವಿಧ ಸಚಿವಾಲಯಗಳು ಹಾಗೂ ಇಲಾಖೆಗಳ ಅಡಿಯಲ್ಲಿ ಪ್ರಸಕ್ತ ಜಾರಿ ಮಾಡಲಾಗುತ್ತಿರುವ ಕಿಸಾನ್ ಸಮ್ಮಾನ್ ನಿಧಿ, ಫಸಲ್ ವಿಮಾ ಯೋಜನೆ, ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ, ಕೃಷಿ ಮೂಲಸೌಕರ್ಯ ನಿಧಿ, ಇತ್ಯಾದಿ – ಈ ಯೋಜನೆಗಳನ್ನೆಲ್ಲಾ ಕಲಸು ಮೇಲೋಗರ ಮಾಡಿ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ತಯಾರಿಸಲಾಗಿದೆ. ಹಾಗೆಯೇ, ಜಿಲ್ಲೆಗಳಲ್ಲಿ ಪ್ರಸಕ್ತ ಕೃಷಿಯ ಪರಿಸ್ಥಿತಿಯನ್ನು ಅಳೆಯಲು ಸಮೀಕ್ಷೆಯೊಂದನ್ನು ನಡೆಸಲಾಗುತ್ತದೆ. ಅದರಲ್ಲಿ ಒಳಗೊಳ್ಳುವ ಅಂಶಗಳೆಂದರೆ, 1) ಆಯಾ ಜಿಲ್ಲೆಯ ಜಮೀನುಗಳಲ್ಲಿ ಮುಖ್ಯವಾದ ಬೆಳೆ, ಹಣ್ಣು ಮತ್ತು ತರಕಾರಿಗಳ ಉತ್ಪಾದಕತೆಯನ್ನು ಲೆಕ್ಕಹಾಕಿ, ಅದು ಜಿಲ್ಲೆಯ ಸರಾಸರಿಗಿಂತ ಕಡಿಮೆ ಇರುವ ಪ್ರದೇಶಗಳನ್ನು ಗುರುತಿಸುವುದು, 2) ಉತ್ಪಾದಕತೆಯು ಕಡಿಮೆ ಇರುವ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿಯ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬ ಕಾರಣಗಳ ವಿಶ್ಲೇಷಣಾತ್ಮಕ ಅಧ್ಯಯನವನ್ನು ನಡೆಸುವುದು, 3) ಉಗ್ರಾಣ, ಹಣ್ಣು ಮಾಡುವ ಕೊಠಡಿ, ಮಾರುಕಟ್ಟೆ ಅಂಗಳ, ಶೈತ್ಯಾಗಾರ, ರೆಫ್ರಿಜರೇಟರ್ ಸಹಿತ ವಾಹನ, ಮುಂತಾದ ಶೈತ್ಯಾಗಾರಗಳ ಸರಪಳಿಯಲ್ಲಿರುವ ಕೊರತೆಗಳನ್ನು ಗುರುತಿಸುವುದು, 4) ಮೀನುಗಾರಿಕೆ ಮತ್ತು ಹಾಲಿನ ಉತ್ಪಾದನೆಗಳಲ್ಲಿ ಕುಸಿತವಿದ್ದರೆ ಅದಕ್ಕೆ ಕಾರಣಗಳನ್ನು ಗುರುತಿಸುವುದು, 5) ಮಣ್ಣಿನ ಮೂಲವಾಗಿರುವ ಪೌಷ್ಟಿಕಾಂಶ ಕೊರತೆಯನ್ನು ಗುರುತಿಸಲು ಜಿಲ್ಲೆಯ ಮಣ್ಣಿನ ಫಲವತ್ತತೆಯ ನಕ್ಷೆಯನ್ನು ತಯಾರಿಸುವುದು – ಇಂತಹವುಗಳ ಜೊತೆಯಲ್ಲಿ ಹವಾಮಾನ ವೈಪರೀತ್ಯ ನಿರೋಧಕ ಬೀಜಗಳ ಲಭ್ಯತೆ, ಜಿಲ್ಲೆಯಲ್ಲಿ ಸಾಲ–ಠೇವಣಿಯ ಅನುಪಾತ ಎಷ್ಟು ಎನ್ನುವ ಮತ್ತು ಆದ್ಯತಾ ವಲಯದಲ್ಲಿ ಸಾಲ ನೀಡುವಿಕೆಯ ಪ್ರಮಾಣ ಮತ್ತು ಜಿಲ್ಲಾ ಸಾಲ ಯೋಜನೆಯ ಗುರಿಯಲ್ಲಿ ಸಾಧನೆಯ ಪ್ರಮಾಣ, ನೈಸರ್ಗಿಕ ವಿಕೋಪ, ಕೀಟಬಾಧೆ, ಬೆಳೆ ರೋಗ ಮತ್ತು ಪಶು ರೋಗ – ಹೀಗೆ ಆ ಪ್ರದೇಶಗಳ ಹಲವು ಮಾಹಿತಿಗಳನ್ನು ಸಂಗ್ರಹಿಸಿ ಅವುಗಳನ್ನು ಶೇಖರಿಸಿಡಬೇಕು ಎಂದು ಯೋಜನೆಯಲ್ಲಿ ತಿಳಿಸಲಾಗಿದೆ.

ಹೀಗೆ ತಳಮಟ್ಟದ ಸಮೀಕ್ಷೆ ಮತ್ತು ಎಲ್ಲ ಸಮಸ್ಯೆಗಳ ಗುಣಲಕ್ಷಣಗಳೇನು ಎಂಬ ವಿಶ್ಲೇಷಣೆಯ ಆಧಾರದ ಮೇಲೆ ಜಿಲ್ಲೆಯು ಸಮಗ್ರ ಮತ್ತು ಸುಸ್ಥಿರ ಕೃಷಿ ಹಾಗೂ ಕೃಷಿ ಸಂಬಂಧಿತ ಕ್ಷೇತ್ರಗಳ ಅಭಿವೃದ್ಧಿ ಯೋಜನೆಯೊಂದನ್ನು ತಯಾರಿಸಬೇಕು. ಅದರಲ್ಲಿ, 1) ಜಮೀನಿನ ಪರಿಪೂರ್ಣ ಬಳಕೆ, ತೋಟಗಾರಿಕೆ, ಮೀನುಗಾರಿಕೆ, ಪಶು ಸಂಗೋಪನೆ ಇತ್ಯಾದಿಗಳಿಗೆ ಕಟಾವಿನ ನಂತರದ ಕೃಷಿ ಮೂಲಸೌಕರ್ಯಗಳ ಬಳಕೆ ಹಾಗೂ ಸುಲಭ ಸಾಲ ಸೌಲಭ್ಯ ವ್ಯವಸ್ಥೆ – ಇವುಗಳನ್ನು ಕ್ರೋಢೀಕರಿಸಿಕೊಂಡು ಪಂಚವಾರ್ಷಿಕ ಫಲಿತಾಂಶ ಆಧಾರಿತ ಗುರಿಯನ್ನು ನಿಗದಿಪಡಿಸಬೇಕು, 2) ಅದಕ್ಕೆ ಅಗತ್ಯವಾದ ವಿವಿಧ ಯೋಜನೆಗಳಲ್ಲಿ ಗುರಿಗಳನ್ನು ನಿಗದಿಪಡಿಸಬೇಕು ಹಾಗೂ 3) ಈ ಕ್ರಿಯಾ ಯೋಜನೆಯಲ್ಲಿ ಮೇಲಿನ ಗುರಿಗಳನ್ನು ಮುಟ್ಟಲು ಜಿಲ್ಲಾ ಮಟ್ಟದ ಅಧಿಕಾರಿಗಳ ಅಥವಾ ಸಂಸ್ಥೆಗಳ ನಿರ್ದಿಷ್ಟ ಜವಾಬ್ದಾರಿಗಳನ್ನೂ ಸಹ ಪಿಎಂಡಿಡಿಕೆವೈ ಒಳಗೊಂಡಿದೆ.

### ಆದರೆ, ಪಿಎಂಡಿಡಿಕೆವೈ ವಾಸ್ತವವೇನು

ಇದೆಲ್ಲವನ್ನು ಗಮನಿಸಿದಾಗ 'ಪಿಎಂಡಿಡಿಕೆವೈ' ಒಂದು ಉತ್ತಮ ಯೋಜನೆ ಎನಿಸಿದರೆ ಆಶ್ಚರ್ಯವೇನೂ ಇಲ್ಲ. ಆದರೆ, ಆಳಕ್ಕಿಳಿದಾಗ ಅದರ ನಿಜರೂಪ ಬಯಲಾಗುತ್ತದೆ. ಉದಾಹರಣೆಗೆ, ಉತ್ಪಾದಕತೆಯ ಕುಸಿತಕ್ಕೆ ಮುಖ್ಯವಾದ ಕಾರಣಗಳಲ್ಲಿ ಕಳಪೆ ಬೀಜದ ಸರಬರಾಜು ಕೂಡ ಒಂದು. ಅಷ್ಟೇ ಅಲ್ಲದೆ, ಕುಲಾಂತರಿ ಬೀಜ! ಮತ್ತು ಅದಕ್ಕೆಂದೇ ಉಪಯೋಗಿಸಬೇಕಾಗುವ ಕೀಟನಾಶಕ, ರೋಗನಾಶಕ ಮತ್ತು ರಾಸಾಯನಿಕ ಗೊಬ್ಬರಗಳು ಬಹಳ ಬೇಗನೆ ಮಣ್ಣಿನ ಫಲವತ್ತತೆಯನ್ನು ನಾಶ ಮಾಡುತ್ತವೆ. ಜೊತೆಗೆ, ವ್ಯವಸ್ಥಿತವಾಗಿ ನೀರಾವರಿ ಇಲ್ಲದಿರುವುದರಿಂದ ಮಳೆಯು ಕಡಿಮೆಯಾದಂತೆ ಇಳುವರಿ ಇಳಿಮುಖವಾಗುತ್ತದೆ. ಇಲ್ಲವೆಂದರೆ, ಮಳೆ ಅತಿಯಾಗಿ ಸುರಿದು ಬೆಳೆ ನಾಶವಾಗುತ್ತದೆ. ಈ ಏರುಪೇರನ್ನು ಎದುರಿಸಲು ಯೋಜನೆಯಲ್ಲಿ ಪರಿಹಾರವೇನಿದೆ? ಯೋಜನೆಯ ಪ್ರಕಾರ ಉತ್ಪಾದಕತೆಯನ್ನು ಹೆಚ್ಚಿಸುವುದೆಂದರೆ ಕುಲಾಂತರಿ ಬೀಜ, ಮತ್ತಷ್ಟು ಕೀಟ–ರೋಗನಾಶಕ ಮತ್ತು ರಾಸಾಯನಿಕ ಗೊಬ್ಬರದ ಬಳಕೆಯೇ ಆಗಿದೆ. ಏಕೆಂದರೆ, ಇವುಗಳ ಉತ್ಪಾದನೆಯು ಕಾರ್ಪೊರೆಟ್ ಕಂಪೆನಿಗಳ ಹಿಡಿತದಲ್ಲಿದೆ. ಅಂದರೆ, 'ಪಿಎಂಡಿಡಿಕೆವೈ' ಯೋಜನೆಯಡಿಯಲ್ಲಿ ಬೀಜ, ಗೊಬ್ಬರ, ಮುಂತಾದ ಕೃಷಿ ಒಳಸುರಿಗಳಿಗೆ ರೈತರು ಕಾರ್ಪೊರೆಟ್ ಕಂಪೆನಿಗಳ ಮೇಲೆ ಮತ್ತಷ್ಟು ಅವಲಂಬಿತರಾಗಬೇಕಾಗುತ್ತದೆ.

ಇನ್ನು ರೈತರ ಮೇಲೆ ಬಹುದೊಡ್ಡ ಪೆಟ್ಟು ಮಾರುಕಟ್ಟೆಯಲ್ಲಿ ಬೀಳುತ್ತದೆ. ಬೆಳೆಗಳ ಕಟಾವಿನ ಸಮಯಕ್ಕೆ ಸರಿಯಾಗಿ ಬೆಲೆಗಳು ಕುಸಿಯುತ್ತವೆ. ಸರ್ಕಾರವು ಕನಿಷ್ಠ ಬೆಂಬಲ ಬೆಲೆಯನ್ನು ಘೋಷಣೆ ಮಾಡಲು ಮತ್ತು ಖರೀದಿ ಮಾಡಲು ತಡ ಮಾಡುತ್ತದೆ. ಆಗ ರೈತರು ಹತಾಶೆಯಿಂದ ಕೈಗೆ ಸಿಕ್ಕಷ್ಟು ಬೆಲೆಗೆ ಮಾರುತ್ತಾರೆ ಮತ್ತು ಭಯಾನಕ ನಷ್ಟವನ್ನು ಅನುಭವಿಸುತ್ತಾರೆ. ಇದಕ್ಕಿರುವ ಏಕೈಕ ಪರಿಹಾರವೆಂದರೆ, ಸರ್ಕಾರ ಸಂಪೂರ್ಣವಾಗಿ ರೈತರ ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆಯಡಿ ಸರಿಯಾದ ಸಮಯಕ್ಕೆ ಖರೀದಿಸುವುದು ಮತ್ತು ತಕ್ಷಣವೇ ಹಣ ಬಿಡುಗಡೆ ಮಾಡುವುದಾಗಿದೆ. ಆದರೆ, ಕೇಂದ್ರವು ದೆಹಲಿಯ ರೈತ ಹೋರಾಟದ ಸಂದರ್ಭದಲ್ಲಿ ನೀಡಿದ್ದ ಎರಡು ಪ್ರಮುಖ ವಾಗ್ದಾನಗಳಾಗಿದ್ದ ಮೂರು ಕರಾಳ ಕೃಷಿ ಕಾಯ್ದೆಗಳ ವಾಪಸಾತಿ ಮತ್ತು ಸಿ2+50% ಆಧಾರದ ಮೇಲೆ ವೈಜ್ಞಾನಿಕ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸುವಿಕೆಗಳನ್ನು ಉಳಿಸಿಕೊಳ್ಳದೆ ವಚನಭ್ರಷ್ಟವಾಗಿದೆ. 'ಪಿಎಂಡಿಡಿಕೆವೈ' ಯೋಜನೆಯಲ್ಲಿ ಬೆಂಬಲ ಬೆಲೆಯ ವಿಷಯದ ಚಕಾರವಿಲ್ಲ.

ಮೂರು ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ತೆಗೆದುಕೊಂಡೆ ಎಂದ ಮೋದಿ ಸರ್ಕಾರವು ಈಗ 'ಹೊಸ ರಾಷ್ಟ್ರೀಯ ಕೃಷಿ ಮಾರುಕಟ್ಟೆ ನೀತಿಯ ಚೌಕಟ್ಟು' ಕಾಯ್ದೆ ಎಂಬ ಹೆಸರಿನಲ್ಲಿ ಅವೇ ನೀತಿಗಳನ್ನು ಹಿಂಬಾಗಿಲಿನಿಂದ ಮತ್ತೆ ಜಾರಿಗೆ ತರಲು ಹವಣಿಸಿದೆ. ಈ ಕಾಯ್ದೆಯು ಹಳ್ಳಿಗಳ ಸಂತೆಗಳಿಂದ ಹಿಡಿದು ಎಪಿಎಂಸಿ ಮಂಡಿಗಳವರೆಗೆ ಎಲ್ಲವನ್ನೂ ಸಂಪೂರ್ಣವಾಗಿ ಹಾಳುಗೆಡವುತ್ತದೆ. ಆಗ ದೈತ್ಯ ಕಾರ್ಪೊರೇಟ್ ಕಂಪನಿಗಳ ಒಡೆತನದ ಖಾಸಗಿ ಮಂಡಿಗಳು ಹುಟ್ಟಿಕೊಳ್ಳುತ್ತವೆ. ಕೃಷಿ ಮಾರುಕಟ್ಟೆ ಕಾರ್ಪೊರೇಟ್ ಕಂಪನಿಗಳ ಕಪಿಮುಷ್ಟಿಗೆ ಸಿಕ್ಕಿಕೊಳ್ಳುತ್ತದೆ. ಈ ಕಾಯ್ದೆಗೆ ತೀವ್ರ ವಿರೋಧವೂ ವ್ಯಕ್ತವಾಗುತ್ತಿದೆ. ಸದ್ಯಕ್ಕೆ ಅಮೆರಿಕಾದ ಅಧ್ಯಕ್ಷ ಟ್ರಂಪ್ ಅಮೆರಿಕಾಗೆ ಆಮದಾಗುವ ಸರಕುಗಳ ಮೇಲೆ ವಿಧಿಸಿದ ಹೆಚ್ಚುವರಿ ಸುಂಕದಿಂದಾಗಿ ಅಂತರರಾಷ್ಟ್ರೀಯ ಪರಿಸ್ಥಿತಿಯು ಬದಲಾಗಿದೆ. ಇದರಿಂದಾಗಿ, ಈಗ ಕಾಯ್ದೆಯು ಶೈತ್ಯಾಗಾರದಲ್ಲಿದೆ. ಕೃಷಿ ಉತ್ಪನ್ನಗಳ ಆಮದಾಗಲಿ ಅಥವಾ ರಫ್ತಾಗಲಿ – ಇದರಿಂದ ರೈತರಿಗೆ ಯಾವ ಪ್ರಯೋಜನವೂ ಇಲ್ಲ.

ಆದ್ದರಿಂದ. ಪಿಎಂಡಿಡಿಕೆವೈ ಕಾಯ್ದೆಯನ್ನು ರೂಪಿಸಿರುವುದು ಕಾರ್ಪೊರೇಟ್ ಕಂಪನಿಗಳನ್ನು ಉದ್ಧಾರ ಮಾಡಲು. ಕೃಷಿ ಒಳಸುರಿಗಳನ್ನು ಸಂಪೂರ್ಣವಾಗಿ ಕಾರ್ಪೊರೇಟ್ ಕಂಪನಿಗಳ ಹಿಡಿತಕ್ಕೆ ತರಲು. ಅದಕ್ಕೆ ರೈತರು ದುಬಾರಿ ಬೆಲೆಯನ್ನು ತೆರಬೇಕು. ಕೃಷಿ ಉತ್ಪನ್ನಗಳ ಮಾರಾಟ ಮತ್ತು ಖರೀದಿಯು ಖಾಸಗಿ ಉದ್ಯಮಿಗಳ ಪಾಲಾದಾಗ ರೈತರಿಗೆ ಬೆಂಬಲ ಬೆಲೆಯಿರಲಿ ಅವರು ಕೃಷಿಗಾಗಿ ಸುರಿಯುವ ಖರ್ಚೂ ಸಹ ಸಿಗುವುದಿಲ್ಲ. ರೈತರಿಗೆ ಕನಿಷ್ಠ ಬೆಂಬಲ ಬೆಲೆ ಎಂಬುದು ಮರೀಚಿಕೆಯಾಗುತ್ತದೆ. ಇದರ ಬಿಸಿ ಗ್ರಾಹಕರಿಗೂ ಸಹ ತಟ್ಟುತ್ತದೆ. ಜೀವನಾವಶ್ಯಕ ವಸ್ತುಗಳು ಕಾರ್ಪೊರೇಟ್‌ಗಳ ಲಾಭದಾಹದ ಸರಕುಗಳಾಗುವುದರಿಂದ ಮತ್ತು ಸರ್ಕಾರವು ಬೆಲೆಗಳನ್ನು ನಿಯಂತ್ರಿಸದಿರುವುದರಿಂದ ಬೆಲೆಗಳು ಗಗನಕ್ಕೇರುತ್ತವೆ. ಜೊತೆಗೆ ವಾಣಿಜ್ಯ ಬೆಳೆಗಳನ್ನು ಮತ್ತು ರಫ್ತಿಗೆ ಬೇಕಾದ ಉತ್ಪನ್ನಗಳನ್ನು ಬೆಳೆಯುವುದಕ್ಕೆ ರೈತರನ್ನು ಒತ್ತಾಯಿಸುವುದರಿಂದ ಆಹಾರ ಪದಾರ್ಥಗಳ ಕೊರತೆಯೂ ಸಹ ಉಂಟಾಗುತ್ತದೆ. ಅದಕ್ಕೂ ಜನಸಾಮಾನ್ಯರು ಮತ್ತು ಸ್ವತಃ ಗ್ರಾಹಕರೂ ಆಗಿರುವ ರೈತರೂ ಬೆಲೆ ತೆರಬೇಕು. ಆದ್ದರಿಂದ, ಈ ರೈತವಿರೋಧಿ, ಜನವಿರೋಧಿ ಮತ್ತು ಕಾರ್ಪೊರೇಟ್ ಕಂಪನಿಗಳ ಪರವಾಗಿರುವ ಪಿಎಂಡಿಡಿಕೆವೈ ಕಾಯ್ದೆಯ ವಿರುದ್ಧ ಜನತೆ, ಮುಖ್ಯವಾಗಿ ರೈತ ಸಮುದಾಯವು ಸಮರಶೀಲ ಚಳುವಳಿಯನ್ನು ಕಟ್ಟುವ ಅವಶ್ಯಕತೆ ಇದೆ.

## ಯುವಜನರ ಶಿಬಿರಗಳು







ಯುವಜನರನ್ನು ವೈಚಾರಿಕವಾಗಿ, ಸಾಂಸ್ಕೃತಿಕವಾಗಿ ಬೆಳೆಸುವ ದೃಷ್ಟಿಯಿಂದ ಅಖಿಲ ಭಾರತ ಪ್ರಜಾಸತ್ತಾತ್ಮಕ ಯೂಥ್ ಆರ್ಗನೈಸೇಷನ್ (ಎಐಡಿವೈಓ) ಯುವಜನರ ಶಿಬಿರಗಳನ್ನು ಸಂಘಟಿಸಿದೆ.

ಎಐಡಿವೈಓ, 60ನೇ ಸಂಸ್ಥಾಪನಾ ವರ್ಷಾಚರಣೆ ಅಂಗವಾಗಿ ಜನವರಿ 18 ರಂದು ಯಾದಗಿರಿ ಮತ್ತು ಮೈಸೂರಿನಲ್ಲಿ ಯುವಜನರ ಶಿಬಿರವನ್ನು ಸಂಘಟಿಸಲಾಗಿತ್ತು. ಯಾದಗಿರಿಯಲ್ಲಿ **'ತಾರುಣ್ಯದ ತಲ್ಲಣಗಳು: ಬಗೆಹರಿಸಿಕೊಳ್ಳುವ ಬಗೆ'** ಎಂಬ ವಿಷಯದ ಕುರಿತು ಎಐಡಿವೈಓ ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಜಿ. ಎಸ್. ಶಶಿಕುಮಾರ್ ಮಾತನಾಡಿದರು.

ಮೈಸೂರಿನಲ್ಲಿ ಎಐಯುಟಿಯುಸಿ ಜಿಲ್ಲಾಧ್ಯಕ್ಷರಾದ ಕಾಮ್ರೇಡ್ ಚಂದ್ರಶೇಖರ್ ಮೇಟಿ ಚರ್ಚೆಯನ್ನು ನಡೆಸಿಕೊಟ್ಟರು. ಎಐಡಿವೈಓ ಜಿಲ್ಲಾಧ್ಯಕ್ಷರಾದ ಕಾಮ್ರೇಡ್ ಸುನಿಲ್ ಮತ್ತು ಕಾರ್ಯದರ್ಶಿ ಕಾಮ್ರೇಡ್ ಸುಮಾ ವೇದಿಕೆಯಲ್ಲಿದ್ದರು.

# 'ಕೇರಳ ತೀವ್ರ ಬಡತನ ಮುಕ್ತ ರಾಜ್ಯ' – ಸಿಪಿಐ (ಎಂ) ಸರ್ಕಾರದ ಸುಳ್ಳು ಘೋಷಣೆ

ಸಿಪಿಐ(ಎಂ) ನೇತೃತ್ವದ ಕೇರಳ ಸರ್ಕಾರವು 2025ರ ನವೆಂಬರ್ 1ರಂದು, ರಾಜ್ಯವನ್ನು ಅತೀ ಬಡತನದಿಂದ ಮುಕ್ತಗೊಳಿಸಿದ್ದೇವೆ ಎಂದು ಅತ್ಯಂತ ಹೆಮ್ಮೆಯಿಂದ ಘೋಷಿಸಿದೆ. ಸರ್ಕಾರದ ಪ್ರಕಾರ, 2021ರಲ್ಲಿ 'ಅತೀ ಬಡತನ ನಿರ್ಮೂಲನಾ ಕಾರ್ಯಕ್ರಮ (EPEP)' ಆರಂಭಿಸುವ ಮೊದಲು 64,006 ಕುಟುಂಬಗಳು ಅತಿದಾರಿದ್ರ್ಯದಲ್ಲಿದ್ದು, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಸಮೀಕ್ಷೆಯ ಆಧಾರದ ಮೇಲೆ ಗುರುತಿಸಲ್ಪಟ್ಟ ಈ ಕುಟುಂಬಗಳನ್ನು ವಿವಿಧ ಕಲ್ಯಾಣ ಯೋಜನೆಗಳ ಮೂಲಕ ಮೇಲಕ್ಕೆತ್ತಲಾಗಿದೆ.

ಆದರೆ ಈ ಘೋಷಣೆಯನ್ನು ಪರಿಶೀಲಿಸಿದರೆ ಅದು ವಾಸ್ತವಕ್ಕೆ ವಿರುದ್ಧವಾಗಿದೆ. ವಿಶ್ವ ಬ್ಯಾಂಕ್ ಪ್ರಕಾರ ದಿನಕ್ಕೆ $2.15 (ಸುಮಾರು ರೂ.193) ಕ್ಕಿಂತ ಕಡಿಮೆ ಆದಾಯ ಹೊಂದಿರುವವರು ಅತಿ ಬಡವರು. ಭಾರತ ಸರ್ಕಾರದ ಮಾನದಂಡವು ಇದಕ್ಕಿಂತಲೂ ಕಡಿಮೆ – ದಿನಕ್ಕೆ $1.25 (ಸುಮಾರು ರೂ.112.50). ಇನ್ನೊಂದು ಮಾನದಂಡವಾದ ಕ್ಯಾಲೊರಿ ಸೇವನೆ ಪ್ರಕಾರ, ಪುರುಷರಿಗೆ ದಿನಕ್ಕೆ 2400 ಮತ್ತು ಮಹಿಳೆಯರಿಗೆ 2100 ಕ್ಯಾಲೊರಿಗಿಂತ ಕಡಿಮೆ ಆಹಾರ ಸೇವನೆಯಿದ್ದರೆ ಅವರು ದಾರಿದ್ರ್ಯ ರೇಖೆಗಿಂತ ಕೆಳಗಿರುವವರು. ಆದರೆ ದಿನಕ್ಕೆ ರೂ.200 ಗಳಿಸುವ ಸಾಮಾನ್ಯ ಕಾರ್ಮಿಕನಿಗೂ ಇಷ್ಟು ಕ್ಯಾಲೊರಿ ಆಹಾರ ಪಡೆಯುವುದು ಅಸಾಧ್ಯ. ಈ ಆದಾಯ ಆಧಾರಿತ ಮತ್ತು ಆಹಾರ ಆಧಾರಿತ ಮಾನದಂಡಗಳ ನಡುವಿನ ಈ ಭಾರೀ ಅಂತರವೇ ಸರ್ಕಾರದ ಘೋಷಣೆಯ ಬಲಹೀನತೆಯನ್ನು ಬಹಿರಂಗಪಡಿಸುತ್ತದೆ.

ಸರ್ಕಾರದ ಹೇಳಿಕೆಗೆ ವಿರುದ್ಧವಾಗಿ, ಅಧಿಕೃತ ದಾಖಲೆಗಳೇ ಅತೀ ಬಡತನ ವ್ಯಾಪಕವಾಗಿರುವುದನ್ನು ತೋರಿಸುತ್ತವೆ. 2024ರ ಸೆಪ್ಟೆಂಬರ್‌ನಲ್ಲಿ ಸಚಿವ ಜಿ.ಆರ್. ಅನಿಲ್ ಅವರು ವಿಧಾನಸಭೆಗೆ ನೀಡಿದ ಲಿಖಿತ ಉತ್ತರದ ಪ್ರಕಾರ, 5,91,194 ಅತಿ ಬಡ ವ್ಯಕ್ತಿಗಳಿಗೆ ಅಂತ್ಯೋದಯ ಅನ್ನ ಯೋಜನೆ (ಎಎವೈ) ಕಾರ್ಡ್ ನೀಡಲಾಗಿದೆ. ಕೇರಳದಲ್ಲಿ ಸುಮಾರು 4.5 ಲಕ್ಷ ಆದಿವಾಸಿ ಮತ್ತು ಬುಡಕಟ್ಟು ಜನರು ತೀವ್ರ ದಾರಿದ್ರ್ಯದಲ್ಲಿ ಬದುಕುತ್ತಿದ್ದಾರೆ. 2022ರ ಅಧ್ಯಯನದ ಪ್ರಕಾರ ವಯನಾಡ್ ಜಿಲ್ಲೆಯಲ್ಲಿ ಐದು ವರ್ಷದೊಳಗಿನ 54.8% ಮಕ್ಕಳು ಗಂಭೀರ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅಟ್ಟಪ್ಪಾಡಿಯಲ್ಲಿ 48% ಮಕ್ಕಳ ತೂಕ ಕಮ್ಮಿಯಾಗಿದ್ದು, 40% ಮಕ್ಕಳು ಬೆಳವಣಿಗೆಯಲ್ಲಿ ಕುಂಠಿತಗೊಂಡಿದ್ದಾರೆ. ಅಲ್ಲದೆ 91% ಮಕ್ಕಳು, 96% ಕಿಶೋರಿಯರು ಮತ್ತು 80% ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.

ತೋಟಗಳಲ್ಲಿನ ಕಾರ್ಮಿಕರು, ಮೀನುಗಾರರು ಮತ್ತಿತರ ಯೋಜನಾ ಕಾರ್ಮಿಕರ ಸ್ಥಿತಿಯೇನೂ ಭಿನ್ನವಾಗಿಲ್ಲ. ನಬಾರ್ಡ್ ಸಮೀಕ್ಷೆಯ ಪ್ರಕಾರ, ಕೇರಳದ 65% ಜನರು ಗೌರವಯುತ ಜೀವನ ನಡೆಸಲು ಸಾಕಾಗುವಷ್ಟು ಆದಾಯ ಹೊಂದಿಲ್ಲ. ಆದರೂ ಸರ್ಕಾರ ಇವರನ್ನು "ಅತಿದಾರಿದ್ರ್ಯರು" ಎಂದು ಪರಿಗಣಿಸದೇ, ಕೇವಲ "ಬಡವರು" ಎಂದು ಗುರುತಿಸುತ್ತದೆ. ಸರ್ಕಾರ ರೂಪಿಸಿರುವ ಅತೀ ಕಠಿಣ ಮಾನದಂಡಗಳ ಪ್ರಕಾರ, ಸಂಪೂರ್ಣ ಆದಾಯವಿಲ್ಲದವರು, ದಿನಕ್ಕೆ ಎರಡು ಊಟವೂ ಸಾಧ್ಯವಾಗದವರು ಅಥವಾ ಸಂಪೂರ್ಣ ಆರೋಗ್ಯ ಹದಗೆಟ್ಟವರು ಮಾತ್ರ ಅತಿದಾರಿದ್ರ್ಯರು. ಹಾಗಾದರೆ ದಿನಕ್ಕೆ ಒಂದು ಊಟ ಮಾತ್ರ ಸಾಧ್ಯವಾಗುವವರು ಯಾವ ವರ್ಗಕ್ಕೆ ಸೇರುತ್ತಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ವಾಸ್ತವದಲ್ಲಿ, ಸರ್ಕಾರ ತೀವ್ರ ಬಡತನದ ವ್ಯಾಖ್ಯಾನವನ್ನು ಕಿರಿದುಗೊಳಿಸುವ ಮೂಲಕ ಅತೀ ಬಡವರ ಸಂಖ್ಯೆಯನ್ನು ಕೃತಕವಾಗಿ ಕಡಿಮೆ ಮಾಡಿದೆ. AAY ಕಾರ್ಡುದಾರರಿಗೆ ನೀಡಲಾಗುವ 35 ಕೆ.ಜಿ. ಧಾನ್ಯ ಅವರ ದಯನೀಯ ಜೀವನ ಸ್ಥಿತಿಯನ್ನು ಬದಲಾಯಿಸುವುದಿಲ್ಲ. ತಿಂಗಳಿಗೆ ಒಮ್ಮೆ ನೀಡುವ ಆಹಾರ ಧಾನ್ಯ ಕಿಟ್‌ಗಳೂ ಬಹುಸಲ ಎರಡು ಅಥವಾ ಮೂರು ತಿಂಗಳಿಗೊಮ್ಮೆ ಮಾತ್ರ ತಲುಪುತ್ತವೆ. ಹೀಗಾದರೆ ಈ ಘೋಷಣೆ ಕ್ರೂರ ವ್ಯಂಗ್ಯವಲ್ಲವೇ? ಈ ಘೋಷಣೆಯ ಪರಿಣಾಮವಾಗಿ ಕೇಂದ್ರ ಸರ್ಕಾರದ ರೇಷನ್ ಸೌಲಭ್ಯಗಳು ಹಿಂಪಡೆಯಲ್ಪಟ್ಟರೆ ಪರಿಣಾಮ ಗಂಭೀರವಾಗಲಿದೆ. ಎಲ್.ಡಿ.ಎಫ್. ಸರ್ಕಾರ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ವಿಸರ್ಜಿಸಲು ದಾರಿ ಮಾಡಿಕೊಡುತ್ತಿದೆಯೇ?

ಈ ಸುಳ್ಳು ಸಾಧನೆಯನ್ನು ದಿನನಿತ್ಯವೂ ಭಾರೀ ವೈಭವದಿಂದ ಪ್ರಚಾರ ನಡೆಸಲಾಗುತ್ತಿದೆ. ಸುಮಾರು ರೂ.1.5 ಕೋಟಿ ವೆಚ್ಚ ಮಾಡಿ ಜಾಹೀರಾತು ಮಾಡಲಾಗಿದ್ದು, ಈ ಹಣವನ್ನು ಆಶ್ರಯ ಮನೆ ನಿರ್ಮಾಣಕ್ಕೆ ಮೀಸಲಿಟ್ಟ ನಿಧಿಯಿಂದಲೇ ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ. ಬೆರಳೆಣಿಕೆಯಷ್ಟು ಅತಿ ಶ್ರೀಮಂತರಿಂದ ಸುತ್ತುವರಿಯಲ್ಪಟ್ಟ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಬದುಕುಳಿಯಲು ಕನಿಷ್ಠ ಆಹಾರವಿಲ್ಲದ ಸಾವಿರಾರು ಬಡ ಜನರ ಮುಂದೆ 'ಕೇರಳ ಅತಿ ದಾರಿದ್ರ್ಯ ಮುಕ್ತ ರಾಜ್ಯ'ವೆಂದು ಘೋಷಿಸಿರುವುದು ಒಂದು ದೊಡ್ಡ ಅಪಹಾಸ್ಯದಂತೆ ಕಾಣುತ್ತಿದೆ. ಅತಿ ಶ್ರೀಮಂತರ ಮೇಲೆ ಒಲವು ತೋರುವ, ಅವರಿಗಾಗಿ ಸಮಾವೇಶಗಳನ್ನು ಆಯೋಜಿಸುವ ಯೂಸುಫ್ ಅಲಿಯಂತಹ ಕಾರ್ಪೊರೇಟ್ ಉದ್ಯಮಿಯನ್ನು ರಾಜ್ಯದ ಬ್ರಾಂಡ್ ರಾಯಭಾರಿಯನ್ನಾಗಿ ನೇಮಿಸುವ ಸರ್ಕಾರದಿಂದ ಇನ್ನೇನು ತಾನೇ ನಿರೀಕ್ಷಿಸಬಹುದು?

ಸರ್ಕಾರ, ಕೇರಳವನ್ನು ಶ್ರೀಮಂತ ರಾಜ್ಯವೆಂದು ತಪ್ಪಾಗಿ ಚಿತ್ರಿಸಲು ಯತ್ನಿಸಿದೆ. ಇಂತಹ ಘೋಷಣೆಗಳು ಚುನಾವಣಾ ಪೂರ್ವ ರಾಜಕೀಯ ಲಾಭಕ್ಕಾಗಿ ಮಾಡಲ್ಪಟ್ಟವು ಎಂದು ಕಾಣುತ್ತಿದೆ. ಇತ್ತೀಚಿನ ನಗರಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಸೋಲುಂಡಿರುವುದರಿಂದ, ರಾಜ್ಯದಲ್ಲಿ ಅಧಿಕಾರ ಉಳಿಸಿಕೊಳ್ಳಲು ಸತ್ಯವನ್ನು ಮುಚ್ಚಿಡುವ ಪ್ರಯತ್ನ ನಡೆಸುತ್ತಿದೆ. ಇದು ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಇತರೆ ಬಂಡವಾಳಶಾಹಿ ಸರ್ಕಾರಗಳಿಗಿಂತ ಯಾವ ರೀತಿಯಲ್ಲಿಯೂ ಭಿನ್ನವಾಗಿಲ್ಲ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿಯೂ ಕೇರಳ ಅಪಾರ ಪ್ರಗತಿ ಕಂಡಿದೆ ಎಂಬ ಸರ್ಕಾರದ ಹೇಳಿಕೆ ಜನರ ದೈನಂದಿನ ಅನುಭವಗಳಿಗೆ ವಿರುದ್ಧವಾಗಿದೆ. 201 ಶಾಲೆಗಳು ಮುಚ್ಚಲ್ಪಟ್ಟಿವೆ, 70% ಕ್ಕೂ ಹೆಚ್ಚು ಕಾಲೇಜುಗಳು ಖಾಸಗಿ ವಲಯದ ನಿಯಂತ್ರಣದಲ್ಲಿವೆ. ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಯನ್ನು ಮತ್ತಷ್ಟು ಖಾಸಗೀಕರಣಗೊಳಿಸುವುದರೆಡೆಗೆ ಒತ್ತು ನೀಡಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳು ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿವೆ. ಜನರು ತಮ್ಮ ಜೇಬಿನಿಂದ ಹೆಚ್ಚು ವೆಚ್ಚ ಭರಿಸಬೇಕಾದ ಸಂಕಷ್ಟದಲ್ಲಿದ್ದಾರೆ.

ಪಿಣರಾಯಿ ವಿಜಯನ್‌ರವರು ಬಡತನ ಮುಕ್ತ ರಾಜ್ಯ 'ಸಾಮೂಹಿಕ ಇಚ್ಛಾಶಕ್ತಿಯ ಫಲ' ಮತ್ತು 'ನವ ಕೇರಳ' ಯೋಜನೆಯ ಗುರಿ ಅಭಿವೃದ್ಧಿಶೀಲ ರಾಷ್ಟ್ರಗಳ ಜೀವನಮಟ್ಟವನ್ನು ತಲುಪುವುದೆಂದು ಹೇಳಿದ್ದಾರೆ. ಅವರ ಪ್ರಕಾರ, ಕೇರಳ ಅನೇಕ ವಿಷಯಗಳಲ್ಲಿ ಅಮೆರಿಕಕ್ಕಿಂತಲೂ ಮುಂದಿದೆ. ತಮ್ಮದು "ಸಮಾನತಾವಾದಿ ಅಭಿವೃದ್ಧಿ ಮಾದರಿ"ಎಂದು ಸಮರ್ಥಿಸಿಕೊಂಡಿದ್ದಾರೆ. ಸರ್ಕಾರದ ಸುಧಾರಣೆಗಳಿಂದ ಬಂಡವಾಳಶಾಹಿ ಸಮಾಜದೊಳಗೇ ಸಮಾನತೆ ತರಬಹುದೆಂದೂ ಹೇಳಿದ್ದಾರೆ. ಆದರೆ ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನ್ ಪ್ರಕಾರ ಅದು ಸಾಧ್ಯವಿಲ್ಲ. ಮಹಾನ್ ಮಾರ್ಕ್ಸ್‌ರವರು, ಬಂಡವಾಳಶಾಹಿ ರಾಜ್ಯವನ್ನು ಬಂಡವಾಳಶಾಹಿ ಆರ್ಥಿಕ ಹಿತಾಸಕ್ತಿಗಳ ಉತ್ಪನ್ನವೆಂದು ವಿವರಿಸಿದ್ದಾರೆ. ಹೀಗಿರುವಾಗ, ಬಂಡವಾಳಶಾಹಿ ವ್ಯವಸ್ಥೆಯೊಳಗೇ ಸುಧಾರಣೆಗಳ ಮೂಲಕ ಬಡತನ ನಿರ್ಮೂಲನೆ ಸಾಧ್ಯವೆಂಬ ಭ್ರಮೆಯನ್ನು ಸೃಷ್ಟಿಸುವುದು ಮಾರ್ಕ್ಸ್–ಲೆನಿನ್ ತತ್ವಗಳಿಗೆ ಸಂಪೂರ್ಣ ವಿರೋಧವಾಗಿದೆ.

'ಕಾರ್ಮಿಕ ದೃಷ್ಟಿಕೋನ – ಮಾಸಿಕ ಪತ್ರಿಕೆ'ಯನ್ನು ಫೇಸ್‌ಬುಕ್‌ನಲ್ಲಿ ಓದಲು ಈ QR ಕೋಡ್ ಅನ್ನು ಬಳಸಿ.

## ಎಐಯುಟಿಯುಸಿ ವತಿಯಿಂದ ಕಾರ್ಮಿಕರ ಅಧ್ಯಯನ ಶಿಬಿರ

ಕಾರ್ಮಿಕರ ಮೇಲೆ ನಿರಂತರವಾಗಿ ನಡೆಯುತ್ತಿರುವ ಬಂಡವಾಳಶಾಹಿ ದಾಳಿಗಳ ವಿರುದ್ಧ ಕೋಟ್ಯಾಂತರ ಸಂಖ್ಯೆಯಲ್ಲಿ ಕಾರ್ಮಿಕರ ಸುಸಂಘಟಿತ, ಸಮರಶೀಲ ಚಳುವಳಿಯ ಅಗತ್ಯವಿದೆ. ಅದಕ್ಕೆ ಕಾರ್ಮಿಕರನ್ನು ವೈಚಾರಿಕವಾಗಿ ಸಿದ್ಧಗೊಳಿಸಲು ಎಐಯುಟಿಯುಸಿಯಿಂದ ಕಾರ್ಮಿಕರ ಅಧ್ಯಯನ ಶಿಬಿರ ಜನವರಿ 10ರಂದು ನಡೆಯಿತು. ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಕೆ. ಸೋಮಶೇಖರ್, ಫೆಬ್ರುವರಿ 12 ರಂದು ಲೇಬರ್ ಕೋಡ್ ಹಾಗೂ ಇನ್ನಿತರ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ನಡೆಯುತ್ತಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಬೇಕು. ಬಂಡವಾಳಿಗರನ್ನು ಆರ್ಥಿಕ ಬಿಕ್ಕಟ್ಟಿನಿಂದ ಕಾಪಾಡಲು ಸರ್ಕಾರಗಳು ಕಾರ್ಮಿಕರ ಹೋರಾಟದ ಹಕ್ಕುಗಳನ್ನು ದಮನ ಮಾಡುತ್ತಿದೆ. ಕಾರ್ಮಿಕರನ್ನು ಕ್ರೂರ ಶೋಷಣೆಗೆ ಒಳಪಡಿಸಲಾಗಿದೆ. ಆದ್ದರಿಂದ ಶೋಷಕ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ದುಡಿಯುವ ಜನರ ಪರಮಾಧಿಕಾರವಿರುವ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸುವ ದಿಕ್ಕಿನಲ್ಲಿ ಹೋರಾಟ ನಡೆಯಬೇಕು ಎಂದರು.

ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಡಾ.ಪ್ರಮೋದ್ ಅವರು 'ವೈಜ್ಞಾನಿಕ ಮನೋಭಾವ ಹಾಗೂ ಮೂಢನಂಬಿಕೆ' ಕುರಿತು ಚರ್ಚೆ ನಡೆಸಿಕೊಟ್ಟರು. ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷರಾದ ಕಾಮ್ರೇಡ್ ಎ.ದೇವದಾಸ್ ಅವರು ವಹಿಸಿದ್ದರು.




## ಬಿಸಿಯೂಟ ಕಾರ್ಮಿಕರಿಗೆ ಗೌರವಧನ ಹೆಚ್ಚಳ ಆಗ್ರಹಿಸಿ ಎಐಯುಟಿಯುಸಿ ಪ್ರತಿಭಟನೆ

ಎಐಯುಟಿಯುಸಿ ಕೇಂದ್ರ ಕಾರ್ಮಿಕ ಸಂಘಟನೆಗೆ ಸೇರಿದ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ಧಾರವಾಡ ಜಿಲ್ಲಾ ಸಮಿತಿ ವತಿಯಿಂದ ಕೇಂದ್ರ ಸರ್ಕಾರದ ಮುಂಬರುವ ಬಜೆಟ್‌ನಲ್ಲಿ ಇಂದಿನ ಬೆಲೆಯೇರಿಕೆಗೆ ತಕ್ಕಂತೆ ಗೌರವಧನ ಏರಿಕೆ ಮಾಡಲು ಆಗ್ರಹಿಸಿ ಜಿಲ್ಲಾಧಿಕಾರಿ ಮತ್ತು ಜಿ.ಪಂ. ಸಿಇಓ ಕಚೇರಿಗಳ ಮುಂದೆ ಪ್ರತಿಭಟನೆ ಮಾಡಲಾಯಿತು.

ಲಕ್ಷಾಂತರ ಬಿಸಿಯೂಟ ಕಾರ್ಮಿಕರು ಮಾಸಿಕ ಕೇವಲ 600 ರೂಪಾಯಿಯ ಗೌರವಧನದಲ್ಲಿ ಸಂಕಷ್ಟದ ಬದುಕು ನಡೆಸುತ್ತಿದ್ದಾರೆ. ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. 2009 ರಿಂದ ಇಲ್ಲಿಯವರೆಗೆ ಗೌರವಧನ ಏರಿಕೆ ಮಾಡಿಲ್ಲ. ಕೇಂದ್ರದ ಈ ನೀತಿಯು ರಾಜ್ಯದ 1.18 ಲಕ್ಷ ಮಹಿಳಾ ಬಿಸಿಯೂಟ ಕಾರ್ಮಿಕರ ಕುಟುಂಬಗಳನ್ನು ಬೀದಿಗೆ ತಳ್ಳಿದೆ. ಕೇಂದ್ರ ಸರ್ಕಾರವು ಮುಂದಿನ ಬಜೆಟ್‌ನಲ್ಲಿ ಗೌರವಧನ ಏರಿಕೆ ಮಾಡಬೇಕು ಎಂದು ಎಐಯುಟಿಯುಸಿ ಜಿಲ್ಲಾಧ್ಯಕ್ಷ ಕಾಮ್ರೇಡ್ ಗಂಗಾಧರ ಬಡಿಗೇರ ಮತ್ತು ಅಕ್ಷರ ದಾಸೋಹ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷೆ ಕಾಮ್ರೇಡ್ ಭುವನಾ ಬಳ್ಳಾರಿ ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.



### ಜಾಗತಿಕ ತಾಪಮಾನ ಏರಿಕೆ:

# ದೊಡ್ಡ ರಾಷ್ಟ್ರಗಳ ಲಾಭ, ಬಡವರ ಬಲಿ-ಹವಾಮಾನ ಸಮ್ಮೇಳನ ಎಂಬ ಪ್ರಹಸನ

ದೆಹಲಿಯ ಗಾಳಿ ಈಗ ವಿಷಕಾರಿಯಾಗುತ್ತಿದೆ. ಹಸಿಬರ, ನೆರೆ ಹಾವಳಿ ಹೆಚ್ಚಾಗುತ್ತಿವೆ, ಬೇಸಿಗೆಯ ಬಿಸಿಲಿಗೆ ಜೀವಗಳು ತತ್ತರಿಸುತ್ತಿವೆ, ಹವಾಮಾನ ವೈಪರಿತ್ಯ ವಿಪರೀತವಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆ ಈಗ ಮನುಕುಲವನ್ನೇ ಬಾಧಿಸುತ್ತಿರುವ ಸಮಸ್ಯೆಯಾಗಿದೆ.

ಹವಾಮಾನ ಬದಲಾವಣೆಯ ಕುರಿತಾದ ವಿಶ್ವಸಂಸ್ಥೆಯ ಸಮಾವೇಶ (UNFCCC) ಎಂಬುದು ಹವಾಮಾನ ಬದಲಾವಣೆಯ ಅಪಾಯಕಾರಿ ಮಾನವ ಹಸ್ತಕ್ಷೇಪವನ್ನು ತಡೆಗಟ್ಟಲು 1992 ರಲ್ಲಿ ಸ್ಥಾಪಿಸಲಾದ ಅಂತರರಾಷ್ಟ್ರೀಯ ಪರಿಸರ ಒಪ್ಪಂದವಾಗಿದೆ. ಹವಾಮಾನ ವೈಪರಿತ್ಯಕ್ಕೆ ಅತೀ ಹೆಚ್ಚು ಕಾರಣಕರ್ತರಾದ ಮುಂದುವರೆದ ದೇಶಗಳನ್ನು ಜವಾಬ್ದಾರಿಯುತರನ್ನಾಗಿಸಿ, ಈ ಸಮಸ್ಯೆಯಿಂದ ತತ್ತರಿಸುತ್ತಿರುವ ಹಿಂದುಳಿದ ದೇಶಗಳಿಗೆ ನೆರವು ಒದಗಿಸುವ ಹಾಗೂ ಮಾಲಿನ್ಯ ನಿಯಂತ್ರಣ ಕೆಲಸಗಳನ್ನು ಈ ದೊಡ್ಡ ರಾಷ್ಟ್ರಗಳಿಂದ ಮಾಡಿಸುವುದು ಈ ಸಂಸ್ಥೆಯ ಮೂಲ ಉದ್ದೇಶ. ಇಷ್ಟು ವರ್ಷಗಳಲ್ಲಿ ಇದರ ಕಾರ್ಯನಿರ್ವಹಣೆ ಹೇಗೆ ಸಾಗಿದೆ? ಇದನ್ನೊಮ್ಮೆ ಪರಿಶೀಲಿಸೋಣ.

### ಕೋಪನ್ ಹ್ಯಾಗನ್ ಸಭೆ

ಕೋಪನ್ ಹ್ಯಾಗನ್ ನಲ್ಲಿ 2009 ರಲ್ಲಿ UNFCCC ನ ಸರ್ವ ಪಕ್ಷಗಳ ಸಮ್ಮೇಳನ ಜರುಗಿತು. ಸಭೆಯ ಉದ್ದೇಶವೇ ಬೇರೆ, ಅಲ್ಲಿ ಆದದ್ದೇ ಬೇರೆ. ಅತೀ ದೊಡ್ಡ ಮುಂದುವರೆದ ಕೈಗಾರಿಕಾ ರಾಷ್ಟ್ರಗಳನ್ನು ಅವುಗಳ ಮಾಲಿನ್ಯ ನಿಯಂತ್ರಿಸುವಂತೆ ಹಾಗೂ ಅದಕ್ಕಾಗಿ ಹಣ ಬಿಡುಗಡೆ ಮಾಡುವಂತೆ ಹಾಗೂ ಪೂರಕ ತಂತ್ರಜ್ಞಾನ ಅಭಿವೃದ್ಧಿಪಡಿಸುವಂತೆ ಅವುಗಳನ್ನು ಒತ್ತಾಯಿಸಬೇಕಿತ್ತು. ಆದರೆ ಇದು ಯಾವುದೂ ಸಾಧ್ಯವಾಗಲಿಲ್ಲ. ವಿಶ್ವಸಂಸ್ಥೆಯ ಈ ವೈಫಲ್ಯದ ವಿರುದ್ಧ ಪ್ರತಿರೋಧ ಪ್ರಬಲವಾಗಿ ಬೆಳೆಯಿತು. ದೊಡ್ಡ ದೇಶಗಳಿಗೆ ತಾಕೀತು ಮಾಡಲೂ ಸಾಧ್ಯವಾಗದ ವಿಶ್ವ ಸಂಸ್ಥೆಯ ಕುರಿತಾಗಿ ಜನರ ವಿಶ್ವಾಸ ಕುಗ್ಗಿತು. ಒಳಗೊಳಗೇ ನಡೆದ ಚರ್ಚೆಗಳು ಈ ಸಂಸ್ಥೆಯು ಪಾರದರ್ಶಕವೇ ಎಂಬ ಪ್ರಶ್ನೆಯನ್ನೂ ಹುಟ್ಟು ಹಾಕಿತು.

### ಪ್ಯಾರಿಸ್ ಸಭೆ: ಮತ್ತೊಂದು ಸೋಲು

ಜನರಲ್ಲಿ ವಿಶ್ವಸಂಸ್ಥೆಯ ಬಗ್ಗೆ ಭರವಸೆ ತುಂಬಲು ಪ್ಯಾರಿಸ್ ಸಭೆಯನ್ನು ಮತ್ತಷ್ಟು ಪ್ರಚಾರದೊಂದಿಗೆ 2015 ರಲ್ಲಿ ಸಂಘಟಿಸಲಾಯಿತು. ಇಲ್ಲಿ ನಡೆದಿದ್ದು ಒಪ್ಪಂದಗಳಲ್ಲ, ಪ್ರಹಸನ. ದೇಶಗಳು ತಾವಾಗೇ ತಮ್ಮ ನಿರ್ಬಂಧನೆಗಳನ್ನು ಹೇರಿಕೊಳ್ಳಲು ಹಾಗೂ ತಾವಾಗಿಯೇ ತಮ್ಮಿಂದಾದಷ್ಟು ಹಣ ನೀಡುವಂತೆ 'ಪ್ರೇರೇಪಿಸಲಾಯಿತು'. ಜನಗಳ ಒತ್ತಾಯದ ಮೇರೆಗೆ ಒಟ್ಟು ಜಾಗತಿಕ ತಾಪಮಾನ ಏರಿಕೆಯನ್ನು 2ಲಿ ಯಿಂದ 1.5ಲಿ ಗೆ ನಿಯಂತ್ರಿಸುವ ಹೊಸ ಗುರಿಯನ್ನು ಘೋಷಿಸಿದ್ದನ್ನು ಹೊರತುಪಡಿಸಿ ಇನ್ನಾವ ಯಶಸ್ಸನ್ನೂ ಈ ಸಭೆ ಕಾಣಲಿಲ್ಲ. ಪ್ಯಾರಿಸ್ ಒಪ್ಪಂದದಲ್ಲಿ ಭರವಸೆ ನೀಡಿದಂತೆ ಮುಂದುವರೆದ ರಾಷ್ಟ್ರಗಳು ವರ್ಷಕ್ಕೆ 100 ಬಿಲಿಯನ್ ಡಾಲರ್ ಹಣವನ್ನು ಬಡ ರಾಷ್ಟ್ರಗಳಿಗೆ ನೀಡಬೇಕಿತ್ತು. ಆದರೆ ಈ ಭರವಸೆ ಇಂದಿಗೂ ಕಾಗದದ ಮೇಲೆಯೇ ಉಳಿದಿದೆ. ತಂತ್ರಜ್ಞಾನ ಹಂಚಿಕೆಯಲ್ಲೂ ಸಹ ಶ್ರೀಮಂತ ರಾಷ್ಟ್ರಗಳು ಪೇಟೆಂಟ್ ಮತ್ತು ಲಾಭದ ಉದ್ದೇಶವನ್ನೇ ಹೊಂದಿವೆ!

### ಗ್ಲಾಸ್ ಗೋ ಸಭೆ: ಮಗದೊಂದು ಸೋಲು

2021 ರಷ್ಟರಲ್ಲಿ ಜಗತ್ತಿನಾದ್ಯಂತ ಹೋರಾಟಗಳು ಭುಗಿಲೆದ್ದಿದ್ದವು. ಕಲ್ಲಿದ್ದಲನ್ನು ಬಳಸುತ್ತಿರುವ ಬೃಹತ್ ಕೈಗಾರಿಕೆಗಳ ಮೇಲೆ, ದೊಡ್ಡ ದೊಡ್ಡ ಕೈಗಾರಿಕಾ ರಾಷ್ಟ್ರಗಳ ಮೇಲೆ ನಿರ್ಬಂಧ ಹೇರಬೇಕೆಂಬ ಕರೆ ಸಣ್ಣ ಸಣ್ಣ ರಾಷ್ಟ್ರಗಳಿಂದ, ಜನಸಾಮಾನ್ಯರಿಂದ ಕೂಗಿ ಬಂತು. ಹವಾಮಾನ ವೈಪರಿತ್ಯದ ಕುರಿತಾಗಿ ವೈಜ್ಞಾನಿಕ ಪುರಾವೆಗಳು ಹೊರಬಂದರೂ ಗ್ಲಾಸ್ ಗೋ ಸಭೆ ಕಲಿದ್ದಲು ಗಣಿ ಧಣಿಗಳ, ದೊಡ್ಡ ರಾಷ್ಟ್ರಗಳ ತೋಳ್ಬಲಕ್ಕೆ ತನ್ನ ಉದ್ದೇಶ ಸಾಧಿಸುವಲ್ಲಿ ಸಂಪೂರ್ಣ ವಿಫಲತೆ ಕಂಡಿತು.

### ಬೆಲೆಮ್ ಸಭೆ

ಈ ಬಾರಿ ಸಭೆ ನಡೆಯುವ ಸ್ಥಳವೇ ಸಂದೇಶ ಕೊಡುವಂತಿರಬೇಕೆಂದು ಅಮೆಜಾನ್ ನಲ್ಲಿ ಹಮ್ಮಿಕೊಳ್ಳಲಾಯಿತು. ಜಗತ್ತಿನ ಅತೀ ದೊಡ್ಡ ಕಾಡು ಅಮೆಜಾನ್ ಕಾಡು, ಅದರ ಹೆಬ್ಬಾಗಿಲು ಬೆಲೆಮ್. 2025 ರಲ್ಲಿ ನಡೆದ ಈ ಸಭೆಗೂ ಮುನ್ನ ಆದಿವಾಸಿಗಳು, ಪರಿಸರ ಸಂರಕ್ಷಣೆಗಾಗಿ ಹೋರಾಟ ನಿರತರು ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದರು. ಈ ಹೋರಾಟಗಳನ್ನು 'ಗ್ರೇಟ್ ಪೀಪಲ್ಸ್ ಮಾರ್ಚ್' ಎಂದು ಕೂಡ ಕರೆಯುತ್ತಾರೆ. ಸಾವಿರಾರು ಜನರ ಹೋರಾಟಗಳ ಕೂಗು ಇಡೀ ಜಗತ್ತಿನಾದ್ಯಂತ ಕೇಳಿತೇ ಹೊರತು, ಬೆಲೆಮ್ ಸಭೆಯ ಒಳಗೆ ಕೇಳಲಿಲ್ಲ. ಸಭೆಯಲ್ಲಿ ಕೆಲ ಆದಿವಾಸಿ ಜನರ ಪ್ರತಿನಿಧಿಗಳನ್ನು ಬಿಟ್ಟುಕೊಂಡರೇ ಹೊರತು ಅವರ ಕೂಗಿಗೆ ಕವಡೆ ಕಿಮ್ಮತ್ತನ್ನೂ ಕೊಡಲಿಲ್ಲ. ಇಂಧನಗಳ ಬಳಕೆಗೆ ನಿರ್ಬಂಧ ಹೇರುವಲ್ಲಿ, ದೊಡ್ಡ ರಾಷ್ಟ್ರಗಳಿಂದ ಹಣಕಾಸು ಪಡೆಯುವಲ್ಲಿ ಸಭೆ ವಿಫಲವಾಯಿತು. ದೊಡ್ಡ ರಾಷ್ಟ್ರಗಳ ಕಪಿಮುಷ್ಠಿಯಲ್ಲಿ ವಿಶ್ವ ಸಂಸ್ಥೆ ಬಂಧಿಯಾಗಿದೆ, ಕೈಗಾರಿಕೋದ್ಯಮಿಗಳ ದಾಳವಾಗಿದೆ ಎಂಬುದು ಮಗದೊಮ್ಮೆ ಸಾಬೀತಾಯಿತು.

ಜಾಗತಿಕ ಹವಾಮಾನ ವೈಪರಿತ್ಯಕ್ಕೆ ಮೂಲ ಕಾರಣ ಬೃಹತ್ ಕೈಗಾರೀಕರಣ ಹಾಗೂ ಅತಿಯಾದ ಇಂಧನ ಬಳಕೆ. ಇದರ ಹಿಂದೆ ದೊಡ್ಡ ರಾಷ್ಟ್ರಗಳು, ಬೃಹತ್ ಕೈಗಾರಿಕೋದ್ಯಮಿ ತಿಮಿಂಗಿಲಗಳಿವೆ. ತಮ್ಮ ಲಾಭಕ್ಕಾಗಿ ಇಡೀ ಮನುಕುಲವನ್ನೇ ಅಪಾಯಕ್ಕೆ ದೂಡುವ ಸಾಮ್ರಾಜ್ಯಶಾಹಿ ಶಕ್ತಿಗಳಿವೆ. ಕಾರ್ಪೋರೇಟ್ ಕಂಪನಿಗಳು ನಮ್ಮ ಭೂಮಿಯನ್ನು ಕೊರೆದು, ಸುಟ್ಟು, ಜಲ, ನೆಲ, ಗಾಳಿಯನ್ನು ವಿಷಕಾರಿಯಾಗಿಸಿ ವಿನಾಶದತ್ತ ತಳ್ಳುತ್ತಿವೆ. ಹವಾಮಾನ ವೈಪರಿತ್ಯಕ್ಕೆ ಇವುಗಳೇ ಕಾರಣ ಎಂಬುದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಈ ಹವಾಮಾನ ವೈಪರಿತ್ಯದ ಪರಿಣಾಮವನ್ನು ಸಣ್ಣ ರಾಷ್ಟ್ರಗಳು, ದ್ವೀಪಗಳು ಹೆಚ್ಚಾಗಿ ಅನುಭವಿಸುತ್ತಿವೆ. ದೊಡ್ಡ ರಾಷ್ಟ್ರಗಳ ಲಾಭಕ್ಕಾಗಿ ಬಡ ರಾಷ್ಟ್ರಗಳು ಬೆಲೆತೆತ್ತುವಂತಾಗಿದೆ. ಈ ಸಣ್ಣ ಹಿಂದುಳಿದ ರಾಷ್ಟ್ರಗಳು ಹಾಗೂ ಜನಸಾಮಾನ್ಯರ ಹೋರಾಟಗಳಿಗೆ ಆಗಾಗ್ಗೆ ಸಮಾಧಾನ ಸೂಚಿಸುವಂತೆ ಈ ಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿವೆಯೇ ಹೊರತು ದೊಡ್ಡ ರಾಷ್ಟ್ರಗಳ ಮೇಲೆ ನಿಯಂತ್ರಣ ಹೇರುವಂತಹ ಯಾವ ಪರಿಣಾಮಕಾರಿ ನಡೆಗಳನ್ನು ಜಾರಿಗೆ ತರುವುದೂ ಈ ಸಭೆಗಳಿಂದ ಸಾಧ್ಯವಾಗುತ್ತಿಲ್ಲ.

ಜಾಗತಿಕ ತಾಪಮಾನ ಏರಿಕೆಯ ಪರಿಣಾಮ ಭೀಕರವಾಗುತ್ತಿದೆ. ಭೂಮಿಯ ದಕ್ಷಿಣ ಭಾಗದ ದೇಶಗಳು ಆಹಾರದ ಅಭಾವದಿಂದ ತತ್ತರಿಸುತ್ತಿವೆ. ಆರೋಗ್ಯದಂತಹ ಮೂಲಸೌಕರ್ಯಗಳಿಂದ ವಂಚಿತವಾಗುತ್ತಿವೆ. ವಿನಾಶಕಾರಿ ನೈಸರ್ಗಿಕ ವಿಕೋಪಗಳು ಜನರ ಪ್ರಾಣ ಹೀರುತ್ತಿವೆ. ಇಂತಹ ಸಂದರ್ಭದಲ್ಲಿ ಹವಾಮಾನ ವೈಪರಿತ್ಯ ತಡೆಯುವಲ್ಲಿ ಆಗುವ ಒಂದೊಂದು ನಿಮಿಷದ ವಿಳಂಬವೂ ಲಕ್ಷಾಂತರ ಜನರ ಪ್ರಾಣ ಸಂಕಟಕ್ಕೀಡುಮಾಡುತ್ತದೆ. ಈ ಸಭೆಗಳು, ಮಾತುಕತೆಗಳು ಜಾಗತಿಕ ಶಕ್ತಿಗಳ ಕೈಯಡಿ ನಡೆಯುವಂತಹವು. ಅವುಗಳ ಹಿತ ಕಾಪಾಡುವಂತೆಯೇ ನೀತಿಗಳು ರಚನೆಗೊಳ್ಳುತ್ತವೆ.

ವಿಶ್ವ ಸಂಸ್ಥೆಗಳ ಈ ಸಭೆಗಳು ಅವುಗಳ ದೌರ್ಬಲ್ಯದೊಂದಿಗೆ ಪ್ರಬಲ ರಾಷ್ಟ್ರಗಳ ಪ್ರಾಬಲ್ಯವನ್ನು ಜನರ ಮುಂದೆ ನಗ್ನಗೊಳಿಸಿವೆ. ವಿನಾಶದತ್ತ ಸಾಗುತ್ತಿರುವ ಈ ಭೂಮಿಯನ್ನು ವಿನಾಶಗೊಳಿಸಲಿರುವ ಲಾಭಕೋರ ರಣಹದ್ದುಗಳಿಂದ ಕಾಪಾಡುವುದು ಈಗ ಜನಸಾಮಾನ್ಯರ ಜವಾಬ್ದಾರಿಯಾಗಿದೆ.

## ಗಾಜಾದ ಸಮಾಧಿಗಳ ಮೇಲೆ ಪ್ರವಾಸಿ ತಾಣ

### ಮಾನವೀಯತೆ, ನರತೆ, ಸಭ್ಯತೆಗಳ ಸಮಾಧಿ

ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:

"ತನ್ನ ಮಧ್ಯಪ್ರಾಚ್ಯ ಯುದ್ಧ ಕಚೇರಿಯಾದ ಜಿಯೋನಿಸ್ಟ್ ಇಸ್ರೇಲ್, ಗಾಜಾದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಸಾವಿರಾರು ಮುಗ್ಧ ಪ್ಯಾಲೆಸ್ತೀನಿಯರನ್ನು ಹತ್ಯೆ ಮಾಡಲು, ಎಲ್ಲಾ ಮನೆಗಳನ್ನು, ಶಾಲೆಗಳನ್ನು, ಆಸ್ಪತ್ರೆಗಳನ್ನು ನೆಲಸಮ ಮಾಡುವಂತೆ ಪ್ರಚೋದಿಸಿ ಅದನ್ನು ಕಾರ್ಯಗತಗೊಳಿಸುವಂತೆ ಮಾಡಿರುವ ಅಮೆರಿಕದ ಘೋರ ವಿನ್ಯಾಸವನ್ನು ಇಡೀ ಪ್ರಪಂಚ ಒಕ್ಕೊರಲಿನಿಂದ ಖಂಡಿಸುತ್ತದೆ. ಅಂತಹ ಭಯಾನಕ ಮಿಲಿಟರಿ ದಾಳಿಯ ನಂತರವೂ ಬದುಕುಳಿದಿರುವ ಕೆಲವರನ್ನು ದೇಶ ಬಿಟ್ಟು ನೆರೆ ದೇಶಗಳಿಗೆ ವಲಸೆ ಹೋಗುವಂತೆ ಪೆಂಟಗನ್ ಆಳ್ವಿಕರು ಒತ್ತಾಯಿಸುತ್ತಿದ್ದಾರೆ. ಏಕೆಂದರೆ, ಅವರೆಲ್ಲರೂ ಜಾಗ ಖಾಲಿ ಮಾಡಿದರೆ ಅಮೆರಿಕ ಅದನ್ನು ಆಕ್ರಮಿಸಿಕೊಂಡು, ಬಾಂಬು ಮತ್ತು ಗುಂಡುಗಳಿಂದ ನೆಲಕ್ಕುರುಳಿದವರ ಸಮಾಧಿಯ ಮೇಲೆ ಪ್ರವಾಸಿ ತಾಣವನ್ನು ನಿರ್ಮಾಣ ಮಾಡಿಕೊಳ್ಳಬಹುದು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅಮೆರಿಕದ ಸಾಮ್ರಾಜ್ಯಶಾಹಿಗಳು ಈಗ ನಾಮಕಾವಸ್ತೆ 'ಶಾಂತಿ ಮಂಡಳಿ'ಯನ್ನು ರಚಿಸುವ ಕುಖ್ಯಾತ ಪ್ರಸ್ತಾವನೆಯೊಂದಿಗೆ ಮುಂಬಂದಿದ್ದಾರೆ ಮತ್ತು ಅದನ್ನು ಸೇರಲು ಬೇರೆ ದೇಶಗಳಿಗೆ ಆಹ್ವಾನ ನೀಡುತ್ತಿದ್ದಾರೆ. ಇದು ಈ ಶತಮಾನದ ಅತ್ಯಂತ ಹೀನ ಅಪರಾಧ.

'ಶಾಂತಿ ಮಂಡಳಿ' ಸ್ಥಾಪನೆಯ ಮುಸುಕಿನಲ್ಲಿ ಗಾಜಾವನ್ನು ಆಕ್ರಮಿಸಿಕೊಳ್ಳುವ ಮತ್ತು ಅದರ ಮೂಲಕ ತಮ್ಮ ಮಾತೃಭೂಮಿಯ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಪ್ಯಾಲೆಸ್ತೀನಿ ಜನರು ನಡೆಸುತ್ತಿರುವ ಅಮೋಘ ಹೋರಾಟವನ್ನು ಸೋಲಿಸುವ ಉದ್ದೇಶ ಹೊಂದಿರುವ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಹೀನ ವಿನ್ಯಾಸವನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ. ವಿಶ್ವದ ಸಾಮ್ರಾಜ್ಯಶಾಹಿ ವಿರೋಧಿ, ಶಾಂತಿಪ್ರಿಯ ಜನರು ಹೋರಾಟನಿರತ ಪ್ಯಾಲೆಸ್ತೀನಿಯರ ಜೊತೆ ಬಹಿರಂಗವಾಗಿ, ಗಟ್ಟಿ ನಿಲುವಿನೊಂದಿಗೆ ನಿಂತು ಅಮೆರಿಕನ್ ಸಾಮ್ರಾಜ್ಯಶಾಹಿಗಳ ಈ ಹೀನ ನಡೆಯನ್ನು ತಿರಸ್ಕರಿಸಬೇಕು ಮತ್ತು ಪ್ಯಾಲೆಸ್ತೀನನ್ನು ಅಕ್ರಮವಾಗಿ ಆಕ್ರಮಿಸಿಕೊಳ್ಳಲು ಪೆಂಟಗನ್ ಆಳ್ವಿಕರು ನಡೆಸಿರುವ ಯೋಜನೆಯನ್ನು ಕೈಬಿಡುವಂತೆ ಒತ್ತಾಯಿಸಲು ಸುಸಂಘಟಿತ, ಪ್ರಬಲ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ವಿಶ್ವದಾದ್ಯಂತ ಮುನ್ನಡೆಸಲು ಒಂದಾಗಬೇಕೆಂದು ಕರೆ ನೀಡುತ್ತೇವೆ.

# ನೆಸ್ಲೆ ಇಂಡಿಯಾ ಗುತ್ತಿಗೆ ಕಾರ್ಮಿಕರ ಸಂಘದ ಸಮಾವೇಶ

ಇತ್ತೀಚೆಗೆ ನೆಸ್ಲೆ ಇಂಡಿಯಾ ಕಂಪನಿಯ ಗುತ್ತಿಗೆ ಕಾರ್ಮಿಕರ ಸಂಘವು ಎಐಯುಟಿಯುಸಿ ಕಾರ್ಮಿಕ ಸಂಘಕ್ಕೆ ಸೇರ್ಪಡೆಯಾಯಿತು. ಸುಮಾರು 1000 ಮಂದಿ ಸದಸ್ಯರಿರುವ ಈ ಸಂಘದ ಮೊದಲ ಸಮಾವೇಶವು ಜನವರಿ 26 ರಂದು ನಂಜನಗೂಡಿನಲ್ಲಿ ಜರುಗಿತು. ಸಮಾವೇಶಕ್ಕೆ ಮೊದಲು ನಂಜನಗೂಡು ಪಟ್ಟಣದಲ್ಲಿ ಬೃಹತ್ ಮೆರವಣಿಗೆ ಏರ್ಪಡಿಸಲಾಗಿತ್ತು.

ಈ ಸಮಾವೇಶದಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಾರ್ಮಿಕ ವಿರೋಧಿ 4 ಕಾರ್ಮಿಕ ಸಂಹಿತೆಗಳ ಕುರಿತು ಚರ್ಚಿಸಲಾಯಿತು. ಎಐಯುಟಿಯುಸಿ ಕರ್ನಾಟಕ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಕೆ.ಸೋಮಶೇಖರ್ ಅವರು ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದರು. ಎಐಯುಟಿಯುಸಿ ಮೈಸೂರು ಜಿಲ್ಲಾ ಅಧ್ಯಕ್ಷರಾದ ಕಾಮ್ರೇಡ್ ಯಶೋಧರ್, ಜಿಲ್ಲಾ ಸಮಿತಿ ಸದಸ್ಯರಾದ ಕಾಮ್ರೇಡ್ ಸಂಧ್ಯಾ, ಕಾಮ್ರೇಡ್ ಮುದ್ದುಕೃಷ್ಣ, ಪ್ರಗತಿಪರ ಹೋರಾಟಗಾರರಾದ ಶ್ರೀ ಉಗ್ರನರಸಿಂಹೇಗೌಡ ಮೊದಲಾದವರು ಭಾಗವಹಿಸಿದ್ದರು. ಸಮಾವೇಶದಲ್ಲಿ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಎಐಯುಟಿಯುಸಿ ಮೈಸೂರು ಜಿಲ್ಲಾ ಕಾರ್ಯದರ್ಶಿಗಳಾದ ಕಾಮ್ರೇಡ್ ಚಂದ್ರಶೇಖರ ಮೇಟಿ ಅವರು ನೆಸ್ಲೆ ಇಂಡಿಯಾ ಗುತ್ತಿಗೆ ಕಾರ್ಮಿಕ ಸಂಘದ ಸಲಹೆಗಾರರಾಗಿ ಆಯ್ಕೆಯಾಗಿದ್ದಾರೆ. ಸಮಾವೇಶದಿಂದ ಸ್ಫೂರ್ತಿ ಪಡೆದ ಗುತ್ತಿಗೆ ಕಾರ್ಮಿಕರು ತಾವು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಡಲು ಸಿದ್ಧರಾಗುತ್ತಿದ್ದಾರೆ.




ಕಾರ್ಮಿಕ ದೃಷ್ಟಿಕೋನ -ಮಾಸಿಕ ಪತ್ರಿಕೆ
WhatsApp channel

'ಕಾರ್ಮಿಕ ದೃಷ್ಟಿಕೋನ – ಮಾಸಿಕ ಪತ್ರಿಕೆ'ಯನ್ನು ವಾಟ್ಸಾಪ್ ಚಾನೆಲ್‌ನಲ್ಲಿ ಓದಲು ಈ ಮೇಲಿನ QR ಕೋಡ್ ಅನ್ನು ಬಳಸಿ.

### ವಿಜಯಪುರ ಸರ್ಕಾರಿ ವೈದ್ಯಕೀಯ ಕಾಲೇಜಿಗಾಗಿ ಹೋರಾಟ:

# ಛಲಬಿಡದ ಹೋರಾಟದಿಂದ ಗೆದ್ದ ವಿಜಯಪುರ ಜನತೆ

*115 ದಿನಗಳ ಸುದೀರ್ಘ ಹೋರಾಟದ ನಂತರ ವಿಜಯಪುರದ ಜನತೆ ಗೆಲುವು ಸಾಧಿಸಿದರು. ಈಗಾಗಲೇ ಇರುವ ಜಿಲ್ಲಾ ಆಸ್ಪತ್ರೆಯನ್ನು ಬಳಸಿಕೊಂಡು ನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕೆಂಬ ಜನಾಗ್ರಹದ ಹೋರಾಟ ಅದು. ಈಗಾಗಲೇ 2 ಖಾಸಗಿ ವೈದ್ಯಕೀಯ ಕಾಲೇಜು ಇರುವ ನಗರಕ್ಕೆ ಅವಶ್ಯಕವಾದದ್ದು ಸರ್ಕಾರಿ ವೈದ್ಯಕೀಯ ಕಾಲೇಜು ಎಂಬುದೇ ಜನರ ಆಶಯವಾಗಿತ್ತು. ಆದರೆ, ಸರ್ಕಾರ, ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಅಂದರೆ ಪಿಪಿಪಿ (Public Private Partnership Model) ಮಾದರಿಯಲ್ಲಿ ಕಾಲೇಜು ಸ್ಥಾಪಿಸಲು ಪಟ್ಟು ಹಿಡಿದಿತ್ತು. ಇದಕ್ಕೆ ಹಲವರು ಬಂಡವಾಳ ಹೂಡಲು ಸಿದ್ದರಿದ್ದರು. ನಗರದ ಶಾಸಕರು ಒಂದು ಹೆಜ್ಜೆ ಮುಂದೆ ಹೋಗಿ ತಾವೇ 500 ಕೋಟಿ ಬಂಡವಾಳ ಹೂಡಿ ಕಾಲೇಜನ್ನು ಸ್ಥಾಪಿಸುವ ಉತ್ಸಾಹ ತೋರಿದರು. ಇದನ್ನು ಪ್ರತಿರೋಧಿಸಿದ ಬಲಿಷ್ಠ ಹೋರಾಟ ಕೊನೆಗೂ ಗೆಲುವು ಸಾಧಿಸಿತು.*

ಜಿಲ್ಲೆಯಲ್ಲಿರುವ ಎಲ್ಲಾ ವಿದ್ಯಾರ್ಥಿ–ಯುವಜನ ಸಂಘಟನೆಗಳು, ಮಹಿಳಾ ಸಂಘಟನೆಗಳು, ಕಾರ್ಮಿಕ, ರೈತ ಸಂಘಟನೆಗಳು, ಕನ್ನಡಪರ ಸಂಘಟನೆಗಳು, ದಲಿತ ಸಂಘಟನೆಗಳು, ಎಡವಾದಿ ಸಂಘಟನೆಗಳು ಒಟ್ಟಾರೆಯಾಗಿ ವಿಜಯಪುರದ ಸಮಸ್ತ ಸಂಘಟನೆಗಳು ಹಾಗೂ ಎಲ್ಲಾ ವಿಭಾಗದ ಜನತೆ 'ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನಾ ಹೋರಾಟ ಸಮಿತಿ'ಯ ನೇತೃತ್ವದಲ್ಲಿ ಒಂದುಗೂಡಿ ಈ ಹೋರಾಟದಲ್ಲಿ ಪಾಲ್ಗೊಂಡರು. ವಿಜಯಪುರ ಜಿಲ್ಲಾ ವೈದ್ಯರ ಸಂಘಟನೆ (IMA), ವಿಕಲಚೇತನರ ಸಂಘಟನೆಗಳೂ ಕೂಡ ಇದಕ್ಕೆ ಕೈಜೋಡಿಸಿದವು. ಜಿಲ್ಲೆಯ ಜನರು ಬೃಹತ್ ಮೆರವಣಿಗೆಯಲ್ಲಿ ನಡೆದರು, ಸರ್ಕಾರಕ್ಕೆ ಪದೇ ಪದೇ ಮನವಿ ಸಲ್ಲಿಸಿದರು.

ಆದರೆ ಇವ್ಯಾವುದಕ್ಕೂ ಸರ್ಕಾರ ಸ್ಪಂದಿಸಲಿಲ್ಲ. ಆಗ ಅನಿವಾರ್ಯವಾಗಿ ಸಮಿತಿಯ ನೇತೃತ್ವದಲ್ಲಿ ಅನಿರ್ದಿಷ್ಟ ಧರಣಿ ಆರಂಭವಾಯಿತು. ಸರ್ಕಾರ ಅದನ್ನೂ ನಿರ್ಲಕ್ಷಿಸಿದ ಕಾರಣ ಹೋರಾಟ ಮುಂದುವರೆಯಿತು. ಪತ್ರ ಚಳುವಳಿ, 'ರಕ್ತಸಹಿ' ಚಳುವಳಿ, ಸರ್ಕಾರಿ ಕಾಲೇಜು ಬೇಕು ಎಂದು ಹಾಡುಕಟ್ಟಿ, ಹಾಡಿ ಚಳುವಳಿ, ನಗರದ ಹಲವಾರು ಭಾಗಗಳಲ್ಲಿ ಚಳುವಳಿಯನ್ನು ಬೆಂಬಲಿಸಿ ರಂಗೋಲಿ ಚಳುವಳಿ, ಹೀಗೆ ಈ ಆಂದೋಳನ ವಿಭಿನ್ನ ರೀತಿಯಲ್ಲಿ ಬಲವರ್ಧಿಸಿಕೊಳ್ಳುತ್ತಾ ಸಾಗಿತು.

ಕೊನೆಗೆ, ಮುಖ್ಯಮಂತ್ರಿಗಳ ಭೇಟಿಯೂ ಫಲಪ್ರದವಾಗದ ಕಾರಣ, 100 ದಿನಗಳ ಸತತ ಚಳುವಳಿಯ ಮುಂದುವರೆದ ಭಾಗವಾಗಿ,



ಕಾ. ಭಗವಾನ್ ರೆಡ್ಡಿಯವರನ್ನು ಬಂಧಿಸಿ ಪೋಲೀಸ್ ವಾಹನದಲ್ಲಿ ಕರೆದೊಯ್ಯುತ್ತಿರುವುದು.

ಹೋರಾಟನಿರತರು, ಜನವರಿ ಒಂದರಂದು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ. ಎಂ.ಬಿ. ಪಾಟೀಲ್‌ರವರ ಮನೆಯ ಮುಂದೆ ಧರಣಿ ನಡೆಸಲು ತೆರಳುವಾಗ ಹಲವಾರು ನಾಯಕರನ್ನು ಬಂಧಿಸಲಾಯಿತು. ಅವರಲ್ಲಿ ಪ್ರಮುಖರೆಂದರೆ, ನಮ್ಮ ಪಕ್ಷ **ಎಸ್‌ಯುಸಿಐ (ಕಮ್ಯುನಿಸ್ಟ್) ನ ಜಿಲ್ಲಾ ಕಾರ್ಯದರ್ಶಿಗಳಾದ ಕಾ. ಭಗವಾನ್ ರೆಡ್ಡಿ,** ಹಿರಿಯ ಪತ್ರಕರ್ತರು, ದಲಿತ ನಾಯಕರಾದ ಶ್ರೀ. ಅನಿಲ್ ಹೊಸಮನಿ ಮತ್ತು ರೈತ ಸಂಘಟನೆಯ ನಾಯಕರಾದ ಅರವಿಂದ ಕುಲಕರ್ಣಿ. ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದವರ ಮೇಲೆ ಕೊಲೆ ಆಪಾದನೆಯಂತಹ ಸುಳ್ಳು ಆರೋಪ ಹೊರೆಸಿ ಜೈಲಿಗೆ ತಳ್ಳಲಾಯಿತು. ರಾತ್ರೋರಾತ್ರಿ ನೂರಾರು ಜನ ಪೊಲೀಸರು ಏಕಾಏಕಿಯಾಗಿ ಧರಣಿಯ ಸ್ಥಳವನ್ನು ಆಕ್ರಮಿಸಿ ಅಲ್ಲಿ ಹಾಕಿದ್ದ ಟೆಂಟನ್ನು ಕಿತ್ತು ಹಾಕಿದರು, ಚಳುವಳಿ ನಿರತರನ್ನು ಬೆದರಿಸಲು ಪ್ರಯತ್ನಿಸಿದರು.

ಇವೆಲ್ಲದರಿಂದ ಇಡೀ ರಾಜ್ಯಾದ್ಯಂತ ಜನರ ಆಕ್ರೋಶ ಭುಗಿಲೆದ್ದಿತು. ವಿವಿಧ ಸಂಘಟನೆಗಳು ಬಂಧಿತರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದವು. ಬಂಧಿತರ ಪರ ಉಚಿತವಾಗಿ ನ್ಯಾಯಾಲಯದಲ್ಲಿ ಹೋರಾಡಲು ವಿಜಯಪುರ ನಗರದ ಹಲವಾರು ವಕೀಲರು ಮುಂದೆ ಬಂದರು. ಜೊತೆಗೆ ಜಿಲ್ಲೆಯ ಹಲವಾರು ಬುದ್ಧಿಜೀವಿಗಳೂ ಕೂಡ ಸರ್ಕಾರದ ಈ ಪೊಲೀಸ್ ದೌರ್ಜನ್ಯವನ್ನು ಖಂಡಿಸಿ ಹೋರಾಟಗಾರರನ್ನು ಬೆಂಬಲಿಸಿದರು. ಹೋರಾಟಗಾರರ ಬಂಧನದ ಬಳಿಕ ಹೋರಾಟದ ಕಾವು ಏರುತ್ತಿದ್ದಂತೆ, ಹೆಚ್ಚೆಚ್ಚು ಜನ ಬೆಂಬಲವನ್ನು ಗಳಿಸುತ್ತಿದ್ದಂತೆ, ಸರ್ಕಾರ ತನ್ನ ನಿಲುವನ್ನು ಬದಲಾಯಿಸಿಕೊಳ್ಳಲೇ ಬೇಕಾದ ಅನಿವಾರ್ಯತೆಗೆ ಒಳಗಾಯಿತು; ವಿಜಯಪುರ ನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಘೋಷಣೆ ಮಾಡಿತು. ಜನವರಿ 09 ರಂದು ನಗರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಈ ವಿಷಯವನ್ನು ಪ್ರಕಟಿಸಿದರು, ನಂತರ ವೈದ್ಯಕೀಯ ಶಿಕ್ಷಣ ಮಂತ್ರಿಗಳಾದ ಶ್ರೀ ಶರಣಪ್ರಕಾಶ್ ಪಾಟೀಲರು ಇದನ್ನು ದೃಢಪಡಿಸಿದರು.

ಸುಮಾರು **14 ದಿನಗಳ ಜೈಲುವಾಸದ** ನಂತರ ಜನವರಿ 14 ರಂದು ಹೋರಾಟಗಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಜೈಲಿನ ಹೊರಗೆ ಕಿಕ್ಕಿರಿದು ನೆರೆದ ವಿಜಯಪುರದ ಜನತೆ, ಅವರನ್ನು ಘೋಷಣೆಗಳೊಂದಿಗೆ ಬರ ಮಾಡಿಕೊಂಡು, ನಗರದ ಮಧ್ಯಭಾಗದವರೆಗೂ ಮೆರವಣಿಗೆಯಲ್ಲಿ ಕರೆದೊಯ್ದರು. ಬಿಡುಗಡೆಯಾದ ಎಲ್ಲಾ ನಾಯಕರು ನೆರೆದಿದ್ದ ಜನತೆಯನ್ನು ಉದ್ದೇಶಿಸಿ ಮಾತನಾಡಿ, ಮುಂದೆ ಬರಲಿರುವ ರಾಜ್ಯ ಬಜೆಟ್‌ನಲ್ಲಿ ಘೋಷಿತ ಸರ್ಕಾರಿ ಮೆಡಿಕಲ್ ಕಾಲೇಜಿಗೆ ಸರ್ಕಾರ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು, ಆ ನಿಟ್ಟಿನಲ್ಲಿ ಹೋರಾಟ ಮುಂದುವರಿಯುತ್ತದೆ ಎಂದು ಘೋಷಿಸಿದರು.

ಕೊನೆಗೂ, ಚಳುವಳಿಯ ನೇತೃತ್ವ ವಹಿಸಿದ್ದ ನಾಯಕರ ದೃಢತೆ, ಸರ್ಕಾರದ ಬೆದರಿಕೆಗಳಿಗೆ, ಬಂಧನಕ್ಕೆ ಮಣಿಯದ ದಿಟ್ಟತನ, ಜಿಲ್ಲೆಯ ಜನ ಸಾಮಾನ್ಯರನ್ನೂ ಪ್ರೇರೇಪಿಸಿ ಸುದೀರ್ಘ ಹೋರಾಟವನ್ನು ಮುನ್ನಡೆಸಿದ್ದ ಕಾರಣ ಅದು ಯಶಸ್ಸನ್ನು ಕಂಡಿದೆ.

ಈ ವಿಜಯೋತ್ಸವದ ಸಂದರ್ಭದಲ್ಲಿ, ಸರ್ಕಾರ ಹೋರಾಟಗಾರರ ಮೇಲಿನ ಎಲ್ಲಾ ಕೇಸುಗಳನ್ನು ಬೇಷರತ್ತಾಗಿ ತಕ್ಷಣವೇ ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಬೇಕು ಎಂದು ಕಾರ್ಮಿಕ ದೃಷ್ಟಿಕೋನ ಒತ್ತಾಯಿಸುತ್ತದೆ.





ಜೈಲಿನಿಂದ ಬಿಡುಗಡೆಯಾಗಿ ಬಂದ ಹೋರಾಟಗಾರರಿಗೆ ಮಾಲಾರ್ಪಣೆ ಮಾಡಿ ಸ್ವಾಗತ

## ಹಿರಿಯ ಕಾರ್ಮಿಕ ಮುಖಂಡರಾದ ಕಾಮ್ರೇಡ್ ಎಚ್.ವಿ.ಅನಂತ ಸುಬ್ಬರಾವ್ ನಿಧನ



ಎಐಯುಟಿಯುಸಿ ಸಂತಾಪ

ಕರ್ನಾಟಕದ ಕಾರ್ಮಿಕ ಚಳುವಳಿಯ ಹಿರಿಯ ಮುಖಂಡರು, ಎಐಟಿಯುಸಿ (AITUC) ಮಾಜಿ ರಾಜ್ಯಾಧ್ಯಕ್ಷರಾದ ಕಾ. ಎಚ್. ವಿ. ಅನಂತ ಸುಬ್ಬರಾವ್ ಅವರು ಹೃದಯಾಘಾತದಿಂದ ನಿಧನರಾದುದಕ್ಕೆ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (AIUTUC) ಕರ್ನಾಟಕ ರಾಜ್ಯ ಸಮಿತಿ ತೀವ್ರ ಸಂತಾಪ ಹಾಗೂ ದುಃಖವನ್ನು ವ್ಯಕ್ತಪಡಿಸುತ್ತದೆ.

ಕಾ.ಅನಂತ ಸುಬ್ಬರಾವ್ ಅವರು ನಾಲ್ಕೈದು ದಶಕಗಳ ಕಾಲ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯರಾಗಿದ್ದು, ಹಲವಾರು ಹೋರಾಟಗಳನ್ನು ಮುನ್ನಡೆಸಿದ್ದಾರೆ. ಅದರಲ್ಲೂ ಸಾರಿಗೆ ನೌಕರರ ಹೋರಾಟದ ಮುಂಚೂಣಿಯಲ್ಲಿದ್ದು KSRTC ಸ್ಟಾಫ್ & ವರ್ಕರ್ಸ್ ಫೆಡರೇಶನ್‌ನ ಮುಖಂಡರಾಗಿ ಅನೇಕ ಹೋರಾಟ ಹಾಗೂ ಮುಷ್ಕರಗಳಿಗೆ ನೇತೃತ್ವ ನೀಡಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಜಂಟಿ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

ಇಂದು ಆಳುವ ವರ್ಗವು ಕಾರ್ಮಿಕರ ಹಕ್ಕುಗಳನ್ನು ಕಸಿಯುವಂತಹ ಕರಾಳ ನೀತಿಗಳನ್ನು ಜಾರಿಗೆ ತರುತ್ತಿರುವ ಹಾಗೂ ಕಾರ್ಮಿಕರ ಮೇಲೆ ಸರ್ವಾಂಗೀಣ ದಾಳಿ ನಡೆಸುತ್ತಿರುವ ಸಂದರ್ಭದಲ್ಲಿ ಕಾರ್ಮಿಕರ ಐಕ್ಯ ಹೋರಾಟವನ್ನು ಹಿಂದೆಂದಿಗಿಂತಲೂ ಬಲಿಷ್ಠಗೊಳಿಸಬೇಕಾದ ಸಮಯದಲ್ಲಿ ಅವರ ನಿಧನದಿಂದ ಕಾರ್ಮಿಕರ ಜಂಟಿ ಚಳವಳಿಯು ಓರ್ವ ಪ್ರಮುಖ ನಾಯಕರನ್ನು ಕಳೆದುಕೊಂಡಿದೆ.

ಅವರ ಅಗಲಿಕೆಯ ಈ ದುಃಖದ ಸಂದರ್ಭದಲ್ಲಿ AIUTUC ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ನಾವು ಅವರಿಗೆ ಕೆಂಪು ವಂದನೆಗಳೊಂದಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಎಐಯುಟಿಯುಸಿ ಮತ್ತು ಎಐಕೆಕೆಎಂಎಸ್ ಸಂಘಟನೆಗಳ ತಾಲ್ಲೂಕು ಕಛೇರಿ ಉದ್ಘಾಟನೆ

ನಂಜನಗೂಡು ತಾಲೂಕಿನಲ್ಲಿ ಹಲವಾರು ವರ್ಷಗಳಿಂದ ಎಐಯುಟಿಯುಸಿ ಮತ್ತು ಎಐಕೆಕೆಎಂಎಸ್ ಸಂಘಟನೆಗಳು ರೈತರ ಮತ್ತು ಕಾರ್ಮಿಕರ ಹೋರಾಟಗಳನ್ನು ಸಂಘಟಿಸುತ್ತಾ ಬಂದಿವೆ. ಈ ಹೋರಾಟದ ಕೇಂದ್ರವಾಗಲು ನಂಜನಗೂಡಿನಲ್ಲಿ ತಾಲ್ಲೂಕು ಕಚೇರಿಯನ್ನು ಜನವರಿ 29 ರಂದು ಉದ್ಘಾಟನೆಯನ್ನು ಮಾಡಲಾಯಿತು.

ತಾಲೂಕು ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಕಾಮ್ರೇಡ್ ಬಿ.ರವಿ ಮಾತನಾಡಿ, ಇಡೀ ದೇಶದ ಸಂಪತ್ತಿನ ಸೃಷ್ಟಿಕರ್ತರಾದ ಕಾರ್ಮಿಕರ, ದುಡಿಯುವ ಜನರ ಕೈಯಲ್ಲಿರುವುದರ ಬದಲು ಕೆಲವೇ ಕೆಲವು ಶ್ರೀಮಂತ ಬಂಡವಾಳಶಾಹಿಗಳ ಕೈಯಲ್ಲಿ ಕ್ರೋಢೀಕರಣವಾಗಿದೆ. ಹಾಗಾಗಿಯೇ ಇಂದು ಬಿಕ್ಕಟ್ಟು ತೀವ್ರವಾಗಿ ದೈನಂದಿನ ಸಮಸ್ಯೆಗಳು ಹೆಚ್ಚಾಗುತ್ತಿವೆ. ಆದ್ದರಿಂದ ರೈತರು ಮತ್ತು ಕಾರ್ಮಿಕರು ಹೋರಾಟವನ್ನು ನಡೆಸುತ್ತಲೇ, ಕಾರ್ಮಿಕರು ಮತ್ತು ರೈತರ ನೇತೃತ್ವದ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಬೇಕು. ಇದಕ್ಕಾಗಿ ದುಡಿಯುವ ವರ್ಗದ ಚಳುವಳಿಯು ಅತ್ಯವಶ್ಯವಾಗಿದೆ. ಇದಕ್ಕಾಗಿ ಸರಿಯಾದ ಸೈದ್ಧಾಂತಿಕ ಮತ್ತು ರಾಜಕೀಯ ತಿಳುವಳಿಕೆಯನ್ನು ಮೂಡಿಸಲು ಮತ್ತು ಹೋರಾಟಗಳನ್ನು ಸಂಘಟಿಸಲು ಈ ತಾಲೂಕು ಕಚೇರಿಯು ಹೋರಾಟದ ಕೇಂದ್ರವಾಗಲಿ ಎಂದು ನಾನು ಆಶಿಸುತ್ತೇನೆ ಎಂದರು.



## ವೆನೆಜುವೆಲಾದ ಮೇಲೆ ಅಮೆರಿಕಾದ 'ಟ್ರಂಪ್' ಕಾರ್ಡ್

# ಅಮೆರಿಕಾದ ಹಿತಾಸಕ್ತಿ ಮಾತ್ರವೇ ಸತ್ಯ, ಬೇರೆಲ್ಲ ಮಿಥ್ಯ

*ಕಳೆದ ಕೆಲವು ವಾರಗಳಲ್ಲಿ ಜಗತ್ತಿನಲ್ಲಿ ಹಲವಾರು ಕ್ಷಿಪ್ರಗತಿಯ ಬೆಳವಣಿಗೆಗಳು ಘಟಿಸಿವೆ. ರಾತ್ರೋರಾತ್ರಿ ಸ್ವತಂತ್ರ ದೇಶ ವೆನೆಜುವೆಲಾದ ಚುನಾಯಿತ ಅಧ್ಯಕ್ಷ ನಿಕೊಲಸ್ ಮಡುರೊ ಮತ್ತು ಅವರ ಪತ್ನಿಯನ್ನು ಅಮೆರಿಕಾದ ಸೈನ್ಯ ಅಪಹರಿಸಿ ಹೊತ್ತೊಯ್ದಿದೆ. ವೆನೆಜುವೆಲಾದ ತೈಲೋದ್ಯಮದ ಮೇಲೆ ತನ್ನ ಹಿಡಿತ ಸಾಧಿಸಲು ಅವಕಾಶ ಕೊಡದಿದ್ದರೆ ಮಿಲಿಟರಿ ದಾಳಿ ನಡೆಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಆತನ ವಿದೇಶಾಂಗ ಕಾರ್ಯದರ್ಶಿ ರುಬಿಯೊ ಬೆದರಿಕೆ ಒಡ್ಡಿದ್ದಾರೆ. ವೆನೆಜುವೆಲಾಗೆ ಬೆಂಬಲ ನೀಡಿದ ಕೊಲಂಬಿಯಾ ದೇಶಕ್ಕೂ ಇದೇ ಗತಿ ಬರಬಹುದು. ಇನ್ನೊಂದೆಡೆ ರಷ್ಯಾದ ಇಂಧನ ಖರೀದಿಸುವ ದೇಶಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವ ಎಚ್ಚರಿಕೆ ನೀಡಿದ್ದಾರೆ.*




ಡೆನ್ಮಾರ್ಕ್ ದೇಶದ ಸ್ವಾಯತ್ತ ದ್ವೀಪವಾದ ಗ್ರೀನ್‌ಲ್ಯಾಂಡ್ ತನಗೆ ಬೇಕೇಬೇಕು ಎಂದು ಟ್ರಂಪ್ ರಚ್ಚೆ ಹಿಡಿದಿದ್ದಾರೆ. ಇದಕ್ಕೆ ಒಪ್ಪದಿದ್ದರೆ ಅಂತಹ ಐರೋಪ್ಯ ದೇಶಗಳ ಮೇಲೆ ಸುಂಕ ಹೇರುವುದಾಗಿ ಬೆದರಿಕೆ ಹಾಕಿದ್ದಾರೆ. ತನ್ನ ನೆರೆಯ ದೇಶ ಕೆನಡಾ ಅಮೆರಿಕಾದ 51ನೇ ರಾಜ್ಯವೆಂದು ಹೇಳಿಕೊಳ್ಳುತ್ತಾರೆ. ಕ್ಯೂಬಾ, ಇರಾನ್ ಮೇಲೆ ತನ್ನೊಂದಿಗೆ ಮಾತುಕತೆಗೆ ಬರುವಂತೆ ಒತ್ತಡ




ಹೇರುತ್ತಿದ್ದಾರೆ. ಅಮೆರಿಕಾದ ಹಿತಾಸಕ್ತಿ ಮಾತ್ರವೇ ತನಗೆ ಸತ್ಯ, ಬೇರೆಲ್ಲ ಮಿಥ್ಯ ಎಂದು ಬಹಿರಂಗವಾಗಿ ಹೇಳುತ್ತಿದ್ದಾರೆ. ಇಲ್ಲಿ ಅಮೆರಿಕಾದ ಹಿತಾಸಕ್ತಿ ಎಂದರೆ ಅಮೆರಿಕಾದ ಕಾರ್ಪೊರೇಟ್ ಹಿತಾಸಕ್ತಿಯೇ ಹೊರತು, ಜನಸಾಮಾನ್ಯರದ್ದಲ್ಲ ಎಂಬುದು ಸ್ಪಷ್ಟ.

ಇಷ್ಟೆಲ್ಲ ಗದ್ದಲದ ನಡುವೆ, ತನಗೆ ನೊಬೆಲ್ ಶಾಂತಿ ಪುರಸ್ಕಾರ ಬರಬೇಕಿತ್ತು ಎಂದು ಯಾವ ನಾಚಿಕೆಯೂ ಇಲ್ಲದೆ ಮತ್ತೆ ಮತ್ತೆ ಟ್ರಂಪ್ ಹೇಳುತ್ತಲೇ ಇದ್ದಾರೆ! ಮಡುರೊ ಅವರನ್ನು ಅಪಹರಿಸಿ ಪದಚ್ಯುತಗೊಳಿಸಿದ ನಂತರ, ಈ ಬಾರಿ ನೊಬೆಲ್ ಶಾಂತಿ ಪುರಸ್ಕಾರ ಪಡೆದ ವೆನೆಜುವೆಲಾದ ಮಾರಿಯಾ ಕೊರಿನಾ ಮಚಾದೊ ಅವರು ತಮ್ಮ ಪ್ರಶಸ್ತಿ ಫಲಕವನ್ನು ಶ್ವೇತ ಭವನಕ್ಕೆ ತೆರಳಿ ಟ್ರಂಪ್ ಅವರಿಗೆ ಒಪ್ಪಿಸಿ ಬಂದಿದ್ದಾರೆ.

ವೆನೆಜುವೆಲಾದ ಮೇಲೆ ನೇರ ಮಿಲಿಟರಿ ಕಾರ್ಯಾಚರಣೆ ನಡೆಸುವ ಮುನ್ನ ಕಳೆದ 5–6 ತಿಂಗಳುಗಳ ಸಿದ್ಧತೆಯನ್ನು ಅಮೆರಿಕಾ ನಡೆಸಿತ್ತು. ಹಾಗಾದರೆ, ವೆನೆಜುವೆಲಾದ ಅಧ್ಯಕ್ಷರ ನಿವಾಸದ ಮೇಲೆ ದಾಳಿ ನಡೆಸಿ, ಸುಮಾರು 100 ಮಂದಿ ರಕ್ಷಣಾ ಸಿಬ್ಬಂದಿಯನ್ನು ಕೊಲೆಗೈದ ಪ್ರಕರಣದ ಹಿನ್ನೆಲೆಯೇನು ಎಂದು ಅವಲೋಕಿಸೋಣ.

ಸುಮಾರು 3 ಕೋಟಿ ಜನಸಂಖ್ಯೆಯುಳ್ಳ ದಕ್ಷಿಣ ಅಮೆರಿಕಾದ ಪುಟ್ಟ ದೇಶ ಈ ವೆನೆಜುವೆಲಾ, ಸ್ಪೇನ್ ದೇಶದ ವಸಾಹತಾಗಿತ್ತು. ಇದು ಫ್ರೆಂಚ್ ಮಹಾಕ್ರಾಂತಿಯಿಂದ ಪ್ರಭಾವಿತಗೊಂಡು 1811ರಲ್ಲಿ ತನ್ನ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿತು. ವಸಾಹತುಶಾಹಿ ವಿರೋಧಿ ನಾಯಕ ಸೈಮನ್ ಬೊಲಿವಾರ್ ನೇತೃತ್ವದಲ್ಲಿ ನಡೆದ ಸುದೀರ್ಘ ಯುದ್ಧದ ನಂತರ 1821ರಲ್ಲಿ ವೆನೆಜುವೆಲಾ ಸಾರ್ವಭೌಮತ್ವ ಪಡೆದುಕೊಂಡಿತು. ಆದರೆ ಈಗ ಮತ್ತೆ ಅಮೆರಿಕಾದ ಅಡಿಯಾಳಾಗಬೇಕಾದ ದುರಂತ ಬಂದೊದಗಿದೆ.

### ಗಾಜಾ ನಂತರ ಅಮೆರಿಕಾದ ಚಿತ್ತ ವೆನೆಜುವೆಲಾದತ್ತ!

ವೆನೆಜುವೆಲಾದ ಕೆಲವು ದೋಣಿಗಳು ಮಾದಕ ವಸ್ತುಗಳನ್ನು ಸಾಗಿಸುತ್ತಿವೆ ಎಂದು ಹೇಳುತ್ತಾ ಅವುಗಳ ಮೇಲೆ ದಾಳಿ ನಡೆಸಿ ಯುಎಸ್‌ಎಸ್ ಜೆರಾಲ್ಡ್ ಆರ್ ಫೋರ್ಡ್ ಎಂಬ ಹೆಸರಿನ ವಿಶ್ವದ ಅತಿದೊಡ್ಡ ವಿಮಾನ ವಾಹಕ ಯುದ್ಧ ನೌಕೆಯು ಕೊಲಂಬಿಯಾ ದಾಟಿ ವೆನೆಜುವಲಾದತ್ತ ಸಾಗಿತು. ಎಂಟು ಅಮೇರಿಕಾ ಯುದ್ಧ ಹಡಗುಗಳು ದಕ್ಷಿಣ ಅಮೆರಿಕಾದ ಜಲಪ್ರದೇಶದಲ್ಲಿ 10 ಸಣ್ಣ ದೋಣಿಗಳನ್ನು ಸ್ಫೋಟಿಸಿ 40 ಜನ ಸಿಬ್ಬಂದಿಯನ್ನು ಸೆಪ್ಟೆಂಬರ್‌ನಿಂದ ಈಚೆಗೆ ಕೊಂದಿವೆ. ಈ ದೋಣಿಗಳು ಅಮೆರಿಕಾದ ಕಡಲು ಸೇರಬೇಕೆಂದರೆ ಹತ್ತಾರು ಬಾರಿ ತೈಲವನ್ನು ತುಂಬಿಸಿಕೊಳ್ಳಬೇಕಾದ ಪರಿಸ್ಥಿತಿಯಿದ್ದಾಗ್ಯೂ ಅವುಗಳು ಮಾದಕ ವಸ್ತುಗಳ ಸಾಗಾಣಿಕೆಯಲ್ಲಿವೆ ಎಂಬ ನೆಪವೊಡ್ಡಿ ಅವುಗಳ ಮೇಲೆ ಆಕ್ರಮಣ ಮಾಡಲಾಗಿದೆ. ಇದೀಗ 35 ಯುದ್ಧ ವಿಮಾನಗಳೊಂದಿಗೆ ಯುಎಸ್‌ಎಸ್ ಜೆರಾಲ್ಡ್ ಫೋರ್ಡ್‌ನ ಆಗಮನದೊಂದಿಗೆ, ಅಮೆರಿಕ ಆಳ್ವಿಕೆ ಅಡಿಯಲ್ಲಿರುವ ಪೋರ್ಟೊರಿಕೋದಲ್ಲಿರುವ ವಾಯುನೆಲೆಗಳನ್ನು ಮತ್ತು ಕೆರಿಬಿಯನ್‌ನಲ್ಲಿರುವ 15,000 ಅಮೆರಿಕದ ಮಿಲಿಟರಿ ಪಡೆಗಳನ್ನು, 8 ಯುದ್ಧ ಹಡಗುಗಳನ್ನು, ಪಿ–8 ಸರ್ವೇಕ್ಷಣ ವಿಮಾನಗಳನ್ನು, ಎಫ್35 ಜೆಟ್‌ಗಳನ್ನು, ಬಿ52 ಬಾಂಬರ್‌ಗಳನ್ನು ಮತ್ತು ಅಣು ಜಲಾಂತರ್ಗಾಮಿಗಳನ್ನು ಸೇರಿಸಿ ಭದ್ರಪಡಿಸಲಾಗಿದೆ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರದ ಪ್ರಯೋಗ ಬೇಕಾಗಿದೆಯೇ? ಖಂಡಿತ ಇಲ್ಲ. ಅಮೆರಿಕಾದ ಈ ಮಿಲಿಟರಿ ನಡೆಗಳು ಖಂಡಿತವಾಗಿಯೂ ಮಾದಕ ವಸ್ತುಗಳ ವಿರುದ್ಧದ ಕಾರ್ಯಾಚರಣೆಯಲ್ಲ. ಇದು ವಿಶ್ವದ ಅತಿದೊಡ್ಡ ತೈಲ ನಿಕ್ಷೇಪಗಳನ್ನು ಹೊಂದಿರುವ ವೆನೆಜುವೆಲಾದ ಸಾರ್ವಭೌಮ ಸಂಪತ್ತನ್ನು ಕಬಳಿಸಲು ಮಾಡಲೆತ್ನಿಸುತ್ತಿರುವ ಭಾರಿ ಮಿಲಿಟರಿ ಅಘೋಷಿತ ಸಂಚಿನ ಸಂಕೇತ. ವೆನೆಜುವೆಲಾ ಜೊತೆ ಆತ್ಮೀಯ ಸಂಬಂಧ ಹೊಂದಿರುವ ಕೊಲಂಬಿಯಾದ ಮೇಲೆ ಸಹ ಕಣ್ಣಿಡಲಾಗಿದೆ. ಇರಾಕ್, ಗಾಜಾ, ಸಿರಿಯಾ ನಂತರ ಈಗ ಸಾಮ್ರಾಜ್ಯಶಾಹಿ ಕೆಂಗಣ್ಣು ಪಶ್ಚಿಮದತ್ತ ತಿರುಗಿದೆ. ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಬಹಿರಂಗವಾಗಿಯೇ ವೆನೆಜುವೆಲಾದ ಅಧ್ಯಕ್ಷ ಮಡುರೊ ಮತ್ತು ಕೊಲಂಬಿಯಾದ ಅಧ್ಯಕ್ಷ ಪೆಟ್ರೊ ಇವರನ್ನು ಮಿಲಿಟರಿ ಕಾರ್ಯಾಚರಣೆಯ ಮೂಲಕ ಕಿತ್ತೊಗೆಯಬೇಕೆಂದು ಕರೆ ನೀಡಿದ್ದಾರೆ. ಪೆಟ್ರೊ ವಿಶ್ವಸಂಸ್ಥೆಯ ಅಧಿವೇಶನದಲ್ಲಿ, ಆ ದೋಣಿಗಳಲ್ಲಿದ್ದವರು ಮಾದಕ ವಸ್ತುಗಳ ಮಾರಾಟಗಾರರಲ್ಲ, ಅವರೆಲ್ಲ ಲ್ಯಾಟಿನ್ ಅಮೆರಿಕಾದ ಬಡ ಯುವಜನತೆ ಎಂದು ಹೇಳುತ್ತಾ, ಅಮೆರಿಕಾದ ಅಧ್ಯಕ್ಷರ ವಿರುದ್ಧ ಕಾನೂನಾತ್ಮಕ ತನಿಖೆಗಳು ನಡೆಯಬೇಕೆಂದು ಕರೆ ನೀಡಿದರು. ಆದ್ದರಿಂದಲೇ ಇದೀಗ ಕೊಲಂಬಿಯಾದ ಮೇಲೂ ಕಣ್ಣಾಗವಲಿದೆ.

### ವೆನೆಜುವೆಲಾ ಹಾಗೂ ಬೊಲೆವೆರಿಯಾ ಕ್ರಾಂತಿಯನ್ನು ಬುಡಮೇಲು ಮಾಡಲು ಅಮೆರಿಕಾದ ಪಿತೂರಿ

ಕಳೆದ 20 ವರ್ಷಗಳಿಂದಲೂ ವೆನೆಜುವಲಾವನ್ನು ಬಗ್ಗಿಸಲು ಅಮೆರಿಕ ಪಿತೂರಿ ಹೆಣೆದಿದೆ. ಮೊದಲಿಗೆ ಆರ್ಥಿಕವಾಗಿ ಉಸಿರುಗಟ್ಟಿಸುವ ಯತ್ನ ನಡೆಸಿತು – ಇತರರೊಡನೆ ವಾಣಿಜ್ಯ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರುವುದು, ವಿದೇಶಿ ವಿನಿಮಯಕ್ಕೆ ಅವಕಾಶ ನೀಡದಿರುವುದು, ಆಹಾರ ಮತ್ತು ಔಷಧಿಗಳ ಆಮದಿನ ಮೇಲೆ ನಿರ್ಬಂಧ ಹೇರುವುದು ಇತ್ಯಾದಿ. ಎರಡನೆಯದಾಗಿ, ಮಿಲಿಟರಿ ದಂಗೆಯ ಮೂಲಕ ತನ್ನದೇ 'ಸರ್ಕಾರ'ವನ್ನು ಸ್ಥಾಪಿಸಲು ಏಜೆಂಟ್‌ಗಳನ್ನು ನೇಮಿಸಿ ಆಂತರಿಕ ವ್ಯವಹಾರಗಳಲ್ಲಿ ಹಿಡಿತ ಸಾಧಿಸಲು ಯತ್ನಿಸಿತು. ಮಧ್ಯಂತರ ಅಧ್ಯಕ್ಷರನ್ನು ಸ್ವಯಂ ಘೋಷಿಸಿ ವೆನೆಜುವೆಲಾದ ಅಂತರರಾಷ್ಟ್ರೀಯ ಹಣಕಾಸನ್ನು ವಶಪಡಿಸಿಕೊಳ್ಳಲು ಯತ್ನಿಸಿತು. ಇವೆಲ್ಲವೂ ಮಡುರೊ ಅವರನ್ನು ಪದಚ್ಯುತಿ ಮಾಡಲು ಸಾಧ್ಯವಾಗದಿದ್ದಾಗ ವಿರೋಧಿ ಗುಂಪುಗಳಿಗೆ ಯಥೇಚ್ಛವಾಗಿ ಹಣಕಾಸು ನೆರವು ನೀಡುತ್ತಾ ಅಧಿಕಾರದ ಬದಲಾವಣೆಗೆ ಯತ್ನಿಸಿತು. ಮೂರನೆಯದಾಗಿ, ಮಿಲಿಟರಿ ಕಾರ್ಯಾಚರಣೆಗೆ ಮೊರೆ ಹೋಯಿತು. ಟ್ರಂಪ್‌ನ ಮೊದಲನೇ ಅವಧಿ 2018 ರ ಸಂದರ್ಭದಲ್ಲಿ ಇದಕ್ಕೆ ಪ್ರಯತ್ನ ನಡೆಯಿತು.

ಆದರೆ ವೆನೆಜುವೆಲಾ ಬಗ್ಗಲಿಲ್ಲ. ಮಡುರೊ ಸ್ಪಷ್ಟವಾಗಿ ಹೇಳಿದರು – ***ನಮಗೆ ಹೇಗಾದರೂ ಶಾಂತಿ ಬೇಕಿಲ್ಲ. ಗಾಜಾ ರೀತಿಯ ಸರ್ವನಾಶದ ಮೇಲಿನ ಶಾಂತಿಯಲ್ಲ. ಸ್ವಾತಂತ್ರ್ಯ ಕಳೆದುಕೊಂಡು ಗುಲಾಮರಾಗಲು ಇಚ್ಛಿಸುವುದಿಲ್ಲ. ಮುಂಚಿನಂತೆ ವಸಾಹತುವಾಗಿ ನಮ್ಮ ತೈಲ, ಮತ್ತೆಲ್ಲಾ ಸಂಪತ್ತನ್ನು ದೋಚಿಕೊಳ್ಳಲು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ! ಗುಲಾಮರೂ ಆಗುವುದಿಲ್ಲ. ವಸಾಹತುವೂ ಅಗುವುದಿಲ್ಲ. ಸ್ವತಂತ್ರ, ಸಾರ್ವಭೌಮ ಮತ್ತು ಬಂಧಮುಕ್ತರಾಗಿರುತ್ತೇವೆ – ಇಂದು, ನಾಳೆ ಮತ್ತು ಎಂದೆಂದಿಗೂ.***

### ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ದನಿ ಗಟ್ಟಿಯಾಯಿತು

1998ರಿಂದ 2013 ರವರೆಗೆ ವೆನೆಜುವೆಲಾದ ಅಧ್ಯಕ್ಷರಾಗಿದ್ದ ಹ್ಯೂಗೊ ಚಾವೇಜ್ 1980 ರಲ್ಲಿ ಅಮೇರಿಕಾದ ಕೈಕೊಂಬೆಯಾಗಿದ್ದ ಕಾರ್ಲೊಸ್ ಅಂದ್ರೇಜ್ ಪರೇಜ್‌ರವರ ವಿರುದ್ಧ ಬೊಲಿವೇರಿಯನ್ ಚಳುವಳಿಯನ್ನು ಕಟ್ಟಿದರು. ಅವರ ಹೋರಾಟವನ್ನು 'ಚಾವಿಷ್ಮೋ' ಎಂದು ಕರೆಯಲಾಗಿತ್ತು, ಇದನ್ನು ಸೈಮನ್ ಬೊಲಿವಾರ್ ಎಂಬುವರು ಲ್ಯಾಟಿನ್ ಅಮೆರಿಕಾದಲ್ಲಿ ಪ್ರಾರಂಭಿಸಿದ ಸ್ವಾತಂತ್ರ್ಯ ಚಳುವಳಿಯ ಆಧಾರದ ಮೇಲೆ ಕಟ್ಟಲಾಗಿತ್ತು. ಇವರು 4 ಬಾರಿ ವೆನೆಜುವೆಲಾದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು ಹಾಗೂ ಅವರನ್ನು ದೇಶದ ರಾಷ್ಟ್ರವಾದಿ ನಾಯಕರೆಂದು ನಿರ್ವಿವಾದವಾಗಿ ಸ್ವೀಕರಿಸಲಾಗಿತ್ತು. ಇವರ ಅನುಯಾಯಿಯಾದ ನಿಕೊಲಸ್ ಮಡುರೊ ಅವರು 2017 ರಲ್ಲಿ ಎರಡು ಪ್ರಮುಖ ಚುನಾವಣೆಗಳಲ್ಲಿ ಜನ ಬೆಂಬಲವನ್ನು ಪಡೆದಿದ್ದರು. ಹ್ಯೂಗೋ ಚಾವೇಜ್ ಅಕಾಲಿಕವಾಗಿ ಕ್ಯಾನ್ಸರ್ ಕಾಯಿಲೆಯಿಂದ ಮರಣವನ್ನಪ್ಪಿದಾಗ ಅವರು ವೆನೆಜುವೆಲಾದ ಅಧಿಕಾರದ ಚುಕ್ಕಾಣಿ ಹಿಡಿದರು. ಅಮೆರಿಕನ್ ಸಾಮ್ರಾಜ್ಯಶಾಹಿಗಳು ಹಲವಾರು ಬಾರಿ ಮಡುರೊ ಅವರನ್ನು ಕೆಳಗಿಳಿಸಲು ಯತ್ನಿಸಿದರು. ಅಮೆರಿಕಾದ ದಲ್ಲಾಳಿಯಾದ ಲಿಯೋ ಪೋಲ್ಡೋ ಲೊಪೆಸ್ 2020ರಲ್ಲಿ ದೇಶ ತೊರೆದು ಹೋಗಿ, ಇದೀಗ ಸ್ಪೇನ್‌ನಲ್ಲಿ ಗಡಿಪಾರಾಗಿ ವಾಸಿಸುತ್ತಿದ್ದು, ವೆನೆಜುವೆಲಾ ಮೇಲೆ ಅಮೆರಿಕಾದ ಹಡಗುಗಳು ಆಕ್ರಮಣ ನಡೆಸಲು ನೆಲೆಸಿರುವುದನ್ನು ಬೆಂಬಲಿಸಿದ್ದರು.

### ಅಮೆರಿಕನ್ ಸಾಮ್ರಾಜ್ಯಶಾಹಿಗಳ ಸುಳ್ಳು ಪ್ರಚಾರ

2024ರಲ್ಲಿ 130 ಜನ ಸರ್ಕಾರ–ವಿರೋಧಿ ಪ್ರತಿಭಟನಾಕಾರರನ್ನು ವೆನೆಜುವೆಲಾ ಸರ್ಕಾರ ಕೊಂದಿದೆ ಎಂಬ ಸುಳ್ಳನ್ನು ಅಮೆರಿಕಾದ ಕಾರ್ಪೊರೇಟ್ ಮೀಡಿಯಾ ಹರಿಬಿಟ್ಟಿತ್ತು. ಸತ್ಯಾಂಶವೆಂದರೆ, ಮಡುರೊ ಸರ್ಕಾರದ ಪರವಾಗಿದ್ದ ಈ ಜನರನ್ನು ಕೊಂದಿದ್ದು ಫ್ಯಾಸೀವಾದಿ ಪಡೆಗಳು. ಅಂತೆಯೇ ವೆನೆಜುವೆಲಾ ಯಾವುದೇ ಕೊಕೈನ್ ಬೆಳೆ ಬೆಳೆಯದಿದ್ದರೂ ಟ್ರಂಪ್ ಈ ದೇಶವು ಮಾದಕ ದ್ರವ್ಯಗಳನ್ನು ಉತ್ಪಾದಿಸುತ್ತಿದೆ ಎಂದು ದೋಷಾರೋಪ ಮಾಡುತ್ತಿದ್ದಾರೆ. ಆದರೆ ವೆನೆಜುವೆಲಾ ದೋಣಿಗಳು ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದವೆಂಬುದಕ್ಕೆ ಯಾವುದೇ ಸಾಕ್ಷ್ಯ ಪುರಾವೆಗಳನ್ನು ನೀಡಲಾಗಿಲ್ಲ. ಮೆಕ್ಸಿಕೊ ಭೂಗಡಿಯ ಕಡೆಯಿಂದ ಅಮೆರಿಕನ್ನರೇ ಮಾದಕ ದ್ರವ್ಯಗಳನ್ನು ಕಳ್ಳ ಸಾಗಣೆ ಮಾಡುತ್ತಿದ್ದಾರೆ ಎಂದು ತಜ್ಞರು ಹೇಳುತ್ತಾರೆ. ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಜಾನ್ ರಾಬರ್ಟ್ ಬುಲ್ಟನ್, ಅಮೆರಿಕಾ ತನ್ನ ವ್ಯಾಪಾರಿ ಹಿತಾಸಕ್ತಿಗಾಗಿ ವೆನೆಜುವೆಲಾದ ಅಧ್ಯಕ್ಷ ಮಡುರೊ ಅವರನ್ನು ಪದಚ್ಯುತಿಗೊಳಿಸುವ ಕೆಲಸವು ಪ್ರಮುಖವಾದದು ಎಂದು ಒಂದು ಸಂದರ್ಶನದಲ್ಲಿ ಹೇಳಿದ್ದಾರೆ. ಇದೀಗ ಅಮೆರಿಕಾದ ನಿಜವಾದ ಉದ್ದೇಶ ಬಟಾಬಯಲಾಗಿದೆ.

ಅಮೆರಿಕಾ ಸಾಮ್ರಾಜ್ಯಶಾಹಿ ಒಡೆತನದ ತೈಲ ಸಂಸ್ಕರಣಾ ಕಂಪನಿಗಳಿಗೆ ವೆನೆಜುವೆಲಾದ ಕಚ್ಚಾತೈಲ ಬೇಕಾಗಿದೆ, ಅದಕ್ಕಾಗಿಯೇ ಈ ಎಲ್ಲ ಕಾರ್ಯಾಚರಣೆ, ಸುಳ್ಳು ಪ್ರಚಾರ ಎಂಬುದು ಜಗಜ್ಜಾಹೀರಾದ ವಿಷಯ. ತೀವ್ರವಾದ ಆರ್ಥಿಕ ಬಿಕ್ಕಟ್ಟಿನಲ್ಲಿರುವ ಅಮೆರಿಕನ್ ಪ್ರಜಾಪ್ರಭುತ್ವ, ಅಂತರರಾಷ್ಟ್ರೀಯ ಕಾನೂನು ಇತ್ಯಾದಿ ಮುಖವಾಡಗಳನ್ನು ಕಳಚಿ ನೇರವಾಗಿ ಜಗತ್ತಿನ ಸುಲಿಗೆಗೆ ಇಳಿದಿದೆ. ಅಮೆರಿಕಾದ ಬಹುಕಾಲದ ಮಿತ್ರ, ಬ್ರಿಟನ್ನಿನ ಸಂಸದ ಇಡಿ ಡೇವಿ ಅವರು ಟ್ರಂಪನ್ನು ಗ್ಲೋಬಲ್ ಗ್ಯಾಂಗ್‌ಸ್ಟರ್ ಎಂದು ಕರೆದಿರುವುದು ಸರಿಯಾಗಿಯೇ ಇದೆ.

ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ದಾಳಿಗಳಿಗೆ ತಡೆಗೋಡೆಯಾಗಿದ್ದ ಸಮಾಜವಾದಿ ಬಣದ ಅನುಪಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿಗಳ ಅಬ್ಬರ, ಆಕ್ರಮಣಗಳು ಹೆಚ್ಚಾಗಿವೆ. ಇದಕ್ಕಿರುವ ಏಕೈಕ ಪರಿಹಾರವೆಂದರೆ ಎಲ್ಲಾ ಶಾಂತಿಪ್ರಿಯ ಜನತೆ ವಿಶ್ವದಾದ್ಯಂತ ಒಗ್ಗೂಡುವುದು. ಅಮೆರಿಕದೊಳಗೆ ಸಹ ವೆನೆಜುವೆಲಾದ ಮೇಲಿನ ಅಮೆರಿಕಾದ ಆಕ್ರಮಣದ ವಿರುದ್ಧ ಜನರು ದನಿ ಎತ್ತಬೇಕಾಗಿದೆ. ಇಲ್ಲವಾದಲ್ಲಿ ಸಾಮ್ರಾಜ್ಯಶಾಹಿಗಳ ಅಟ್ಟಹಾಸದಡಿ ಇಡೀ ಜಗತ್ತೇ ನಲುಗಲಿದೆ. ಎರಡು ವಿಶ್ವಯುದ್ಧಗಳ ಚರಿತ್ರೆಯನ್ನು ನಾವು ಮರೆಯಬಾರದು.

ಕಾರ್ಮಿಕ ದೃಷ್ಟಿಕೋನ
Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಎಐಡಿಎಸ್‌ಓ ನೇತೃತ್ವದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಖಂಡಿಸಿ, 'ಸಾರ್ವಜನಿಕ ಶಿಕ್ಷಣ ಉಳಿಸಿ' ಸಮಾವೇಶಗಳು

ಸಾವಿರಾರು ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ ಹೊಂದಿರುವ ಕೆಪಿಎಸ್ ಮ್ಯಾಗ್ನೆಟ್ ಶಾಲಾ ಯೋಜನೆಯಿಂದ ಗ್ರಾಮೀಣ ಭಾಗದ ಬಡ ಜನರ, ಕೂಲಿಕಾರರ ಮಕ್ಕಳಿಗೆ ವಿದ್ಯೆಯ ಬಾಗಿಲನ್ನು ಖಾಯಂ ಆಗಿ ಮುಚ್ಚುವ ಪರಿಸ್ಥಿತಿ ಬರುವ ದಿನ ಬಹಳ ದೂರವಿಲ್ಲ. ಇದರಿಂದಾಗಿ ಶಿಕ್ಷಣದ ಖಾಸಗೀಕರಣಕ್ಕೆ ಕುಮ್ಮಕ್ಕು ಸಿಗುತ್ತದೆ. ಈಗಾಗಲೇ ಮಧ್ಯದಲ್ಲೆ ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದ್ದು, ಈ ನೀತಿಯು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ಇಂತಹ ಶಿಕ್ಷಣ ವಿರೋಧಿ ನೀತಿ ವಿರೋಧಿಸಿ, ಬೆಳಗಾವಿ, ಬಳ್ಳಾರಿ, ದಾವಣಗೆರೆ, ಮೈಸೂರು, ತುಮಕೂರು, ಧಾರವಾಡದಲ್ಲಿ ವಿವಿಧ ಹಂತಗಳಲ್ಲಿ ಪ್ರತಿಭಟನಾ ಸಮಾವೇಶಗಳು ಜರುಗಿದವು. ಬಳ್ಳಾರಿ ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಖಜಾಂಚಿ ಕಾಮ್ರೇಡ್ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿದರು. ಬೆಳಗಾವಿ ಜಿಲ್ಲಾ ಸಮಾವೇಶವನ್ನು ಉದ್ದೇಶಿಸಿ ಹಿರಿಯ ಕನ್ನಡಪರ ಹೋರಾಟಗಾರರಾದ ಶ್ರೀ ಅಶೋಕ್ ಚಂದರಗಿ ಹಾಗೂ ಚಿತ್ರ ಕಲಾವಿದರು ಮತ್ತು ನಾಟಕಕಾರರಾದ ಶ್ರೀ ಡಿ.ಎಸ್.ಚೌಗಲೆ ಮಾತನಾಡಿದರು. ದಾವಣಗೆರೆ ಜಿಲ್ಲೆಯಲ್ಲಿ ನಡೆದ ಹರಿಹರ ತಾಲೂಕು ಮಟ್ಟದ ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಅಜಯ್ ಕಾಮತ್ ಮಾತನಾಡಿದರು. ಧಾರವಾಡ ಜಿಲ್ಲೆಯಲ್ಲಿ ನಡೆದ ಕಲಘಟಗಿ ತಾಲೂಕು ಮಟ್ಟದ ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಅಶ್ವಿನಿ ಕೆ.ಎಸ್. ಮಾತನಾಡಿದರು. ಮೈಸೂರು ವರುಣ ಹೋಬಳಿ ಮಟ್ಟದ ಪ್ರತಿಭಟನಾ ಸಮಾವೇಶವನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಸೆಕ್ರೆಟರಿಯೆಟ್ ಸದಸ್ಯರಾದ ಕಾಮ್ರೇಡ್ ಚಂದ್ರಕಲಾ ಮತ್ತು ತುಮಕೂರಿನ ಶಿರಾ ತಾಲೂಕು ಸಮಾವೇಶದಲ್ಲಿ ಎಐಡಿಎಸ್‌ಓ ರಾಜ್ಯ ಸೆಕ್ರೆಟರಿಯೆಟ್ ಸದಸ್ಯರಾದ ಕಾಮ್ರೇಡ್ ಅಪೂರ್ವ ಮಾತನಾಡಿದರು.



















## ಸಾರಿಗೆ ಬಸ್ಸುಗಳಿಂದ ಗುಟ್ಕಾ ಜಾಹೀರಾತು ತೆರವು: ಎಐಡಿವೈಓ ಯಶಸ್ವಿ ಹೋರಾಟ

ವಿದ್ಯಾರ್ಥಿ–ಯುವಜನರ, ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಗುಟ್ಕಾದ ಜಾಹೀರಾತುಗಳನ್ನು ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಲ್ಲಿ ಸಂಚರಿಸುತ್ತಿರುವ ಸಾರಿಗೆ ಬಸ್ಸುಗಳಲ್ಲಿ ಅಂಟಿಸಿರುವುದನ್ನು ತೆಗೆದು ಹಾಕಬೇಕೆಂದು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂಥ್ ಆರ್ಗನೈಸೇಷನ್ (ಎಐಡಿವೈಓ) ಧಾರವಾಡ ಜಿಲ್ಲಾ ಸಮಿತಿಯಿಂದ ನಗರದ ಸಿಬಿಟಿ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಎಐಡಿವೈಓ ಜಿಲ್ಲಾಧ್ಯಕ್ಷರಾದ ಕಾ. ಭವಾನಿ ಶಂಕರ್ ಎಸ್. ಗೌಡ ಮಾತನಾಡಿ, ಈಗಾಗಲೇ ಇಂತಹ ಗುಟ್ಕಾ ಸೇವನೆಯಂತಹ ದುಶ್ಚಟಗಳಿಗೆ ಬಲಿಯಾದ ಜನರು ವಿವಿಧ ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗುತ್ತಿರುವುದನ್ನು ನಾವು ಕಾಣುತ್ತೇವೆ. ಒಂದು ಕಡೆ ಗುಟ್ಕಾ, ತಂಬಾಕು ಸೇವನೆಯ ಅಪಾಯ ಬಗ್ಗೆ ಕೋಟ್ಯಾಂತರ ಜನರ ತೆರಿಗೆ ಹಣ ಖರ್ಚು ಮಾಡಿ ಜಾಹೀರಾತು ಹಾಕುತ್ತಾರೆ. ಇನ್ನೊಂದು ಕಡೆ, ಆದಾಯದ ನೆಪದಲ್ಲಿ ಸಾರಿಗೆ ಬಸ್ಸುಗಳ ಮೇಲೆ ಜಾಹೀರಾತುಗಳ ಮೂಲಕ ಗುಟ್ಕಾ ಸೇವನೆಗೆ ಕುಮ್ಮಕ್ಕು ಕೊಡುತ್ತಾರೆ. ಜಾಹೀರಾತುಗಳನ್ನು ಕೂಡಲೇ ತೆರವುಗೊಳಿಸಬೇಕು ಎಂದು ಆಗ್ರಹಿಸಿದರು.

ಡಿಪೋ ಮ್ಯಾನೇಜರ್ ಮೂಲಕ ವಾಯುವ್ಯ ಸಾರಿಗೆಯ ಮ್ಯಾನೇಜಿಂಗ್ ಡೈರೆಕ್ಟರ್ ಅವರಿಗೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯ ನಂತರ ಸರ್ಕಾರ ಜಾಹೀರಾತನ್ನು ತೆಗೆದು ಹಾಕಲು ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹೇಳಿಕೆ ನೀಡಿತು.




## ವಿಬಿ ಜಿ ರಾಮ್ ಜಿ ವಿರೋಧಿಸಿ ಎಐಕೆಕೆಎಂಎಸ್ ರಾಜ್ಯವ್ಯಾಪಿ ಪ್ರತಿಭಟನೆ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಹಿಂದೆಯಿದ್ದ ಎಂಜಿ ನರೇಗಾ ಕಾಯ್ದೆಯನ್ನು ತೆಗೆದು ಹಾಕಿ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) ಕಾಯ್ದೆ–2025 (ವಿಬಿ – ಜಿ ರಾಮ್ ಜಿ) ಜಾರಿಗೊಳಿಸಿದೆ. ಇದು ವಾಸ್ತವದಲ್ಲಿ ಗ್ರಾಮೀಣ ಜನರಿಗೆ ಹಿಂದೆ ಕನಿಷ್ಠ 100 ದಿನಗಳ ಕಾಲ ಸಿಗುತ್ತಿದ್ದ ಉದ್ಯೋಗ ಖಾತರಿಗೆ ಕತ್ತರಿ ಹಾಕಿದೆ. ತಮ್ಮ ಗ್ರಾಮ ಅಭಿವೃದ್ಧಿಗೆ ಯೋಜನೆ ಮಾಡಲು ಪಂಚಾಯಿತಿಗೆ ಹಕ್ಕಿಲ್ಲ. ಕೇಂದ್ರ ಸರ್ಕಾರವು ತನ್ನ ಅನುದಾನದ ಪಾಲಲ್ಲಿ ಶೇ.40 ರಷ್ಟು ಹೊರೆಯನ್ನು ರಾಜ್ಯ ಸರ್ಕಾರದ ಮೇಲೆ ಹಾಕಿದೆ. ಆದರೆ ರಾಜ್ಯ ಸರ್ಕಾರ ಈಗಾಗಲೇ ಕೇಂದ್ರದಿಂದ ಜಿಎಸ್‌ಟಿ ಹಣ ಬಂದಿಲ್ಲವೆಂದು ಸಮಾಜ ಕಲ್ಯಾಣದ ಯೋಜನೆಗಳಿಗೆ ಅನುದಾನಗಳನ್ನು ಕಡಿತ ಮಾಡುತ್ತಿದೆ. ಹೀಗೆ ಹೊಸ ಕಾಯ್ದೆಯು ನಿರುದ್ಯೋಗ, ಆದಾಯದ ಕೊರತೆ, ಮೂಲ ಸೌಕರ್ಯಗಳ ಕೊರತೆಯಿಂದ ನರಳುತ್ತಿರುವ ಗ್ರಾಮೀಣ ಭಾಗದ ಜನರ ಹಿತಕ್ಕೆ ದೊಡ್ಡ ಹೊಡೆತವನ್ನು ಕೊಡುತ್ತದೆ. ಅದು ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಯನ್ನು ಕಾಪಾಡುತ್ತದೆಯೇ ಹೊರತು ಜನ ಸಾಮಾನ್ಯರ ಹಿತವನ್ನಲ್ಲ. ಆದ್ದರಿಂದ ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ತೀವ್ರವಾಗಿ ವಿರೋಧಿಸುತ್ತಿದೆ. ಇದರ ವಿರುದ್ಧ ದೇಶದೆಲ್ಲೆಡೆ ಹೋರಾಟಗಳನ್ನು ಹರಿಬಿಟ್ಟಿದೆ. ಕರ್ನಾಟಕದಲ್ಲೂ ಹಲವು ಕಡೆ ಪ್ರತಿಭಟನೆಗಳನ್ನು ಸಂಘಟಿಸಲಾಗಿತ್ತು. ಇದರಲ್ಲಿ ನೂರಾರು ರೈತರು, ಕೃಷಿ ಕಾರ್ಮಿಕರು ಭಾಗವಹಿಸಿದ್ದರು.







Published by: K.Uma on behalf of SOCIALIST UNITY CENTRE OF INDIA (COMMUNIST), Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at : MNS Printers Private Limited, 345/4, Bhattarahalli, Old Madras Road, Bengaluru, Karnataka - 560 049. Website: www.sucic.org & www.sucic-karnataka.org EDITOR: K.Uma